ಬುಧವಾರ, ಜುಲೈ 27, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ರಾಜಸ್ಥಾನದ ಜೈಪುರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಏಕ್ ವಿಲನ್ ರಿಟರ್ನ್ಸ್’ ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿಯರಾದ ದಿಶಾ ಪಟಾನಿ ಮತ್ತು ತಾರಾ ಸುತಾರಿಯಾ ಪಾಲ್ಗೊಂಡಿದ್ದರು



ಬಿಜೆಪಿ ಆಡಳಿತದಲ್ಲಿ ಇ.ಡಿ ದಾಳಿ 27ಪಟ್ಟು ಹೆಚ್ಚು

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯ (ಇ.ಡಿ) 2004ರಿಂದ 2014ರ ಅವಧಿಯಲ್ಲಿ 112 ಬಾರಿ ಶೋಧಕಾರ್ಯ ನಡೆಸಿದ್ದರೆ, 2014ರಿಂದ 2022ರವರೆಗೆ ನಡೆಸಿರುವ ದಾಳಿಯ ಪ್ರಮಾಣ 27 ಪಟ್ಟು ಹೆಚ್ಚಾಗಿದೆ.

ಈ ಅವಧಿಯಲ್ಲಿ ಇ.ಡಿ ನಡೆಸಿದ ಶೋಧಕಾರ್ಯ 3,010ಕ್ಕೆ ಏರಿರುವುದಾಗಿ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಮಂಗಳವಾರ ರಾಜ್ಯಸಭೆಗೆ ಲಿಖಿತ ಉತ್ತರ ನೀಡಿದರು.

ಕಳೆದ ಎಂಟು ವರ್ಷಗಳಲ್ಲಿ ಹಣ ಅಕ್ರಮ ವರ್ಗಾವಣೆ ಪ್ರಕರಣಗಳ ಸಂಬಂಧ ಇ.ಡಿ ಸುಮಾರು ₹99,356 ಕೋಟಿ ಮುಟ್ಟುಗೋಲು ಹಾಕಿಕೊಂಡಿದೆ. 888 ಪ್ರಕರಣಗಳನ್ನು ದಾಖಲಿಸಿದೆ. 23 ಆರೋಪಿಗಳಿಗೆ ಶಿಕ್ಷೆ ಕೊಡಿಸಿದೆ. ಇವರ ₹869.31 ಕೋಟಿ ಜಪ್ತಿ ಮಾಡಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಜಾರ್ಖಂಡ್: ಸಿ.ಎಂ ಸಲಹೆಗಾರನಿಗೆ ಇ.ಡಿ ನೋಟಿಸ್

ರಾಂಚಿ (ಪಿಟಿಐ): ಅಕ್ರಮ ಗಣಿಗಾರಿಕೆ ಹಗರಣದಲ್ಲಿ ಹಣ ಅಕ್ರಮ ವರ್ಗಾವಣೆ ಮಾಡಿರುವ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಮಾಧ್ಯಮ ಸಲಹೆಗಾರ ಅಭಿಷೇಕ್ ಪ್ರಸಾದ್ ಅವರಿಗೆ ಆಗಸ್ಟ್ 1ರಂದು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿರುವುದಾಗಿ ಮಂಗಳವಾರ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣ ಸಂಬಂಧ ಜುಲೈ 19ರಂದು ಹೇಮಂತ್ ಸೊರೇನ್ ಅವರ ರಾಜಕೀಯ ಸಹಾಯಕ ಪಂಕಜ್ ಮಿಶ್ರಾ ಅವರನ್ನು ಇ.ಡಿ ಬಂಧಿಸಿದ್ದು, ಸದ್ಯ ಮಿಶ್ರಾ ಇ.ಡಿ ವಶದಲ್ಲಿದ್ದಾರೆ. ಸಂತಾಲ್ ಪರಗಣ ವಿಭಾಗದ ಸಾಹಿಬ್‌ಗಂಜ್ ಮತ್ತು ಇತರ ಜಿಲ್ಲೆಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಹಗರಣದಲ್ಲಿ ಹಣ ಅಕ್ರಮ ವರ್ಗಾವಣೆ ಮಾಡಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಇ.ಡಿ ಜುಲೈ 8ರಂದು ಸುಮಾರು 19 ಸ್ಥಳಗಳ ಮೇಲೆ ದಾಳಿ ನಡೆಸಿತ್ತು.

ಸೇನೆಯ ರಹಸ್ಯ ಮಾಹಿತಿ ಹಂಚಿಕೆ: ಯೋಧನ ಬಂಧನ

ಜೈಪುರ (ಪಿಟಿಐ): ಪಾಕಿಸ್ತಾನದೊಂದಿಗೆ ಭಾರತೀಯ ಸೇನೆಯ ಮಾಹಿತಿ ಹಂಚಿಕೊಂಡ ಆರೋಪದಲ್ಲಿ ಯೋಧರೊಬ್ಬರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದರು.

ರಾಜಸ್ಥಾನದಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಶಾಂತಿಮೊಯಿ ರಾಣಾ(24) ಬಂಧಿತರು. ಇಬ್ಬರು ಪಾಕಿಸ್ತಾನ ಮಹಿಳೆಯರು ರಾಣಾ ಅವರನ್ನು ಹನಿಟ್ರ್ಯಾಪ್ ಮಾಡಿದ್ದರು. ತಮ್ಮ ರೆಜಿಮೆಂಟ್‌ನ ಮಾಹಿತಿಗಳನ್ನು ಈ ಮಹಿಳೆಯರೊಂದಿಗೆ ಅವರು ಹಂಚಿಕೊಂಡಿದ್ದಾರೆ ಎಂದು ಗುಪ್ತಚರ ಇಲಾಖೆಯ ಮಹಾನಿರ್ದೇಶಕ ಉಮೇಶ್ ಮಿಶ್ರಾ ಮಾಹಿತಿ ನೀಡಿದರು.

EDUCATION CORNER ಕ್ಲಾಸಿಫೈಡ್ಸ್

2nd PU Failed?

Don't be left behind!

A golden opportunity to study degree under Bangalore University this academic year and save one precious year of your life.

BBA B.Com BCA BA

Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:

7846000222

SRIKRISHNA INTERNATIONAL SCHOOL
ITI Layout, BSK 3rd Stage, Near Vidyapeeta Circle, Bangalore - 560 085.

The Management Heartily Congratulates the Staff and Students for Achieving 100% Distinction in Grade X 2021-22 ICSE Board Examinations.



Dr. M. Rukmangada Naidu
Chairman

Mrs. Jalajakshamma
Vice Chairman

HBS HINDUSTAN BUSINESS SCHOOL

KMC Memorial SCHOLARSHIPS
Above 90% Marks - Get 100% Scholarship
Above 80% Marks - Get 50% Scholarship
Above 70% Marks - Get 25% Scholarship

B.Com (Finance / Accounting & Taxation / IT / Banking & Insurance)

BCA (Cyber Law & Cyber Security / IoT / Data Analytics / Mobile Application Development / Python Programming concepts)

BBA (Finance / HR / Marketing)

BBA Aviation Management (Air Transport & Regulation / Aviation Law / Airport Strategic Planning / Logistics & Air Cargo Management)

B.Sc Aircraft Maintenance + DGCA CAR 147 AME Basic (B1.1 / B2)

Eligibility: 12th Std / PUC / Intermediate - any stream.

Scholarships for limited seats. Conditions apply.

VISIT OUR WEBSITE

For more details, visit us with your Results.
Mobile: 8971404357 / 9740037853
Email: admissions@hindustanacademy.edu.in
www.hindustanacademy.edu.in

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRED TEACHERS
We are looking for enthusiastic, innovative & qualified teachers to handle the subjects for
High school-Social Science
Middle school-General Science
The Principal, RASHTRIYA NAVODAYA VIDYA KENDRA
52/3A, Veerabadrappa Layout, Thigalarapalya Main Road, Peenya 2nd Stage, Bangalore - 560058.
Call us at 6364648950. For candidates in and around Peenya, Hegganahalli, Rajgopalnagara, Kamakshi Palya or Laggere

CHRIST THE KING ENGLISH SCHOOL, Coxtown, Jeevanahalli, Bangalore-05 requires Fresh/Experienced Female Kannada D.Ed/TCH, Computers, BA B.Ed TEACHERS for Primary Section. Contact Immediately Phone: 9886107212, 9980773758 Email: ctkscoxtown@yahoo.com

VIDYAPEET PUBLIC School (state board) 1st Main Road,Chamundeshwari layout,Vidyaranyapura ,Bangalore -560097. Required Trained Experience Physical Education Teacher (Male) Contact:9482394641/ 8079691288 Email:vpsacc2017@gmail.com

LOWRY ADVENTIST College, Opp. to KR Puram Railway Station, Bengaluru-16. Wanted Asst. Professors Must Have: Regular, Full-time Bachelor's and Master's Degrees. Commerce & Management: (BCA+MCA), Computer Science: (BCA+MCA), English: (BA+MA in English). Email CV to hr.lowryinstitutions@gmail.com, Ph:9886441913

St. Joseph's University
#36, Lalbagh Road, Bengaluru - 560 027
invites applications for:
1. Associate/ Assistant Professors in:
*Biochemistry *Chemistry *Botany *Biotechnology *Microbiology *Zoology *Statistics *Physics *Psychology *Social Work (H.R.M.)*German *Political Science
Qualification: Ph.D. with NET, KSET with relevant teaching experience will be preferred. Apply with all your research details.
2. Technical Staff - Visual Communication/Animation:
Qualification: A Diploma in Animation and Media Studies and a B. Sc. in any subject.
3. Office Assistant, Internal Quality Assurance Cell (IQAC):
Qualification: A Graduate or Postgraduate Degree in any Discipline with Secretarial Practice, Strong Communication Skills, Typing Skills and Proficiency in Microsoft Office Suite (Word, Excel, ...)
To apply, use the Google Form given on the website: www.sjc.ac.in (in the 'Announcements' section) on or before **Saturday, 30/07/2022.**

REQUIRED EXPERIENCE Lady TEACHER for Computer & English for High School @ Hebbal Contact: 9008981637

A BLIND School requires, HM and High-School TEACHERS for all subjects. MUSIC TEACHER, ATTENDER, DRIVER. Contact: 9741122706, 9986571247

HOLY ANGEL'S High School #2, 5th Main,4th Cross R.P.C Layout, Vijayanagar, Bengaluru-560104. Phone :23404465, 23202042 E-mail: holyangels.highschoolrpclayout@gmail.com Requires Experienced Trained Teachers to handle Nursery, Primary(Hindi), High School (English) and Music Teacher for Academic year 2022-2023 STATE & ICSE Qualification: NTT, B.A/B.Sc.,B.Ed., M.A/M.Sc.,M.Ed.Only English medium candidates need apply.

ENGLISH & Hindi Languages TEACHERS needed for Chitrakoota CBSE School in Nagarbhavi, Kengeri Ring Road, with High Salary. Immediately or for the academic year. 7829647333

WANTED ACADEMIC Head, P.T.T, Social, English, Hindi, Computer Teacher. Primary/ High School. J.P.Nagar. 9845042249/ 26590773.

Multiple Vacancy

HIRING
Senior Interior designers 1 postion (Exp 4+)
Junior Interior Designers 2 Postion (Exp 1+)
Site Supervisor 1 position Exp : Interior/Civil
Business Development Executive Exp : 2 Years
MODULO
Location : Bangalore
9008010103

OPPORTUNITY FOR Retired Officials, Bankers,NRI,Teachers, Professionals, Homemakers, CAs. Earn salary+ Incentives. CALL:8095301555

Engg/ Production Technical

SALES ENGINEER: BE/ Diploma/ B.Sc. with Electronics/ Electrical background with Good Communication Skills, also own two wheeler to market MNC brand Electronics Test and Measuring Instruments, preferably with 2- 3 years experience. Fresher who have flair for Marketing may apply for trainee post. Email: jobs@econceptonline.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Accounts & Finance

FPA INDIA requires ACCOUNTS ASSISTANT: B.Com., ERP9., Salary 19,000/-. Bengaluru candidates apply. Recruitment reflect our commitment to safety, protection of children/ young people. Email: bengaluru@fpaindia.org

OFFICE ADMIN/ ACCOUNTS ASSISTANT Salary 25000/-, Office Assistant Salary 18000/-. Female below 40 only apply, Qualification PUC, Graduate. 080-41743815/ 9845371066

WANTED FEMALE Accountant 5 Years Experience, Mr. Interiors: 9886102678, Email: mr22interior@gmail.com

Graphic Designers

REQUIRED EXPERIENCED DTP Operator for Advertising Agency at Nagarabhavi, Bangalore. English and Kannada Knowledge (knowledge of CorelDraw & Photoshop) 9008084552

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

ENGINEERING MAINTENANCE COMPANY THIPPASANDRA Need OPERATION EXECUTIVE DEE, TALLY ACCOUNT, OFFICE SECRETARY, MANAGER OPERATION -DEE/BE, ELECTRICIAN. Watsapp: 9845163857 9980991973 Email: suku_nair@yahoo.com

WANTED COUNTER SALES PERSONS on shift basis with guarantor. Contact: Gokul Dairy Farm, 20/3, 4th main (Near Syndicate Bank) Gandhinagar, Bangalore-560009. Timings: 9 am to 10 am.

WANTED SCHOOL Bus Driver, Office Female Assistant, Security, Computer Staff, M-Pharm Faculty (for Principal) Contact: MGP Institutions, Mysore Road, Bangalore. Call:9886236341.

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

COUNTER SALESMAN, 2/ 3 years experience. Assistant Tailor Master for The Raymond Shop, Jayanagar Call: 22454458/ 26656934

Marketing & Sales

WANTED COUNTER Sales Executives (M/F) for a 2 Wheeler Showroom in Koramangala & JP Ngr, Salary+Incentives.Call: 9945083900, 9731028676.

WANTED MARKETING Executives (male) for Promoting our Multi-product Online Store. Salary 10k+ Commission on Sales. Candidates with 2 wheeler & Good Communication Skills Call: 8105303232.

Security & Detectives

KSS
A LEADING PVT. LTD., SECURITY AGENCY
in Bangalore South is looking for
1. Business Development
Executive – 1-2 years' experience in Security or Facility Management having own vehicle.
2. Field Officer
2-3 Years' experience in Security industry having two-wheeler. Attractive Packages including ESI, EPF & Incentives offered.
Call for Walk-in interview
9513800883, 9902447755
or email: kangaroosspl@gmail.com.

Placement Bureaus/Consultants

HIRING ACCOUNTANTS, Marketing Coordinators, DME Production/ Purchase Engineers, Typists, Attenders, Call ANZ Consultants 23443555, 8183046799

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Wanted

WANTED TELECALLERS, Male and Female WARDENS, PROS, COMPUTER OPERATOR to Work in Reputed Educational Organisation. 8867860196/ 9945811356.



ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಸಂಸ್ಥೆ
ಕೋಟೆ, ಬೆಂಗಳೂರು – 560 002.
Ph : 080-26701027, Email ID : slncharities@gmail.com

ಜನೋಪಕಾರಿ
ಶ್ರೀ ದೊಡ್ಡಣ್ಣಸ್ವಾಮಿಯವರ
101 ನೇ ಆರಾಧನಾ ಮಹೋತ್ಸವವನ್ನು
ಶ್ರೀ ಲ ನ ಧರ್ಮಸಂಸ್ಥೆಯ ಆವರಣದಲ್ಲಿ
ದಿನಾಂಕ: 30-07-2022 (ಶನಿವಾರ)
ರಂದು ಆಚರಿಸಲಾಗುತ್ತದೆ.
ಸಮುದಾಯದ ಜನರು ಮತ್ತು
ಹಳೆಯ ವಿದ್ಯಾರ್ಥಿಗಳು
ಆರಾಧನಾ ಮಹೋತ್ಸವದಲ್ಲಿ
ಭಾಗವಹಿಸಬೇಕೆಂದು ಕೋರಲಾಗಿದೆ.

ಪ್ರಸಾದ: ಮಧ್ಯಾಹ್ನ 12.00ಕ್ಕೆ
ಅಧ್ಯಕ್ಷರು ಮತ್ತು ಸದಸ್ಯರು

REAL ESTATE BUYING

Sites

Banashankari

BDA SITES WANTED BANASHANKARI 6TH STAGE.,ANJANAPURA, J.P NAGAR 8TH-9TH PHASE,.BCC LAYOUT IMMEDIATE SETTIEMENT CALL:9845444588

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WE FINANCE to NPA/ Default Properties to Release from Banks and Sell at Best Market Price.Call Verna Developers, MG-Road. 9916310226/ 9353128035

AUTOMOTIVE

Four Wheelers Selling

Multiple

2011 MARUTHI Astar VXI, Automatic, 80500 Kms, Rs.295000. Hyundai i10 ASTA 2011, 57000 Kms, Rs.395000. Please Contact: 9341273990.

BUSINESS

Business Offers

Distributors

AREAWISE DISTRIBUTORS for Siridhanya Products(Millets), Ready to Cook & Eat, Bakery Products (A Product of SHREE KSHETRA DHARMASTHALA RURAL DEVELOPMENT PROJECT) for Bangalore District Contact Sirimane Enterprises 8310590306/ for All karnataka region 8123156976

EDUCATIONAL

Private Tuitions

WANTED TUTOR For IB, Grade 12, in Hosur. Preferred IIT, NIT Teachers/ Students. Details Contact: 9443225303, 8660719986.

PERSONAL

Change of Name

I, NAGALAKSHMAMMA Kundalagurki Venkatarathnaiah Setty Residing At Behind R.V.V.K. Convent, Bank Colony, V.V.Puram, Gauribidanur have changed my name to NAGALAKSHMI KUNDALAGURKI VENKATARATHNAIAH SETTYvide affidavit dated 25-07-2022 sworn to before notary K.H. Venkatappa, Chickballapur.

I, D. DAVID, residing at #11 New #92, Chennappa Garden K.R Palyam Cox Town Jeevanahalli, Bangalore-05, have changed my name to SRIDHAR. D vide affidavit dated 26.07.2022 before Notary K.Venkateshan, Bangalore.

I, PIYUSH Himmathlal Patel, Residing at No. 1569, Ward No. 20, Bharathinagar, Chickballapur, have changed my name to PIYUSH HIMMATH PATEL vide affidavit dated 25-07-2022 sworn to before notary K.H. Venkatappa, Chickballapur.

I, SHITAL W/o 14849098A–SEP/MT– GEND VIKRAM VISHWAS R/a Meghjibhajiwadi Miraj, Miraj, Sangli, Maharashtra changed name from SHITAL to SHITAL VIKRAM GEND notary K.V.Mani, Bangalore.

ADMISSIONS OPEN 2022-2023
Govt. Recognised Diploma Courses
LABORATORY / RADIOLOGY OPHTHALMIC / OPERATION THEATER DIALYSIS TECHNICIAN COURSES
Eligibility & Duration: 3 years for SSLC & 2 years for PUC (Science)
SAI-22301
SRI SAI INSTITUTE OF PARAMEDICAL SCIENCES
(Recognised by Ministry of Medical Education, Govt of Karnataka)
375.1st Main Road. Vidhanasowdha Layout, Laggere, Bengaluru-560058
Contact: 9844068838 / 9036181812

I, TALYA SUHAS, aged 19 years R/a Flat 410 Deccan Arcade-1, 3rd main, BEML Layout 5th stage, Rajarajeshwari Nagar, Bengaluru-98, have changed my name to SUHAS TALYA JANARDHAN vide affidavit dated 26/07/2022 before Notary Ravi, Bangalore.

I, PAULA VYOMINI residing No.OMQ 376/1, Air Force Station Officers Mess, Jalahalli East, Bengaluru-560014 have changed my name to PAULA VYOMINI WILSON vide affidavit dated 25/07/2022 sworn before notary N.Peruvazhuthi, Bangalore.

I, VED Himmath Lal, Residing at No. 1569, Ward No. 20, Bharathinagar, Chickballapur, have changed my name to VED HIMMATH PATEL vide affidavit dated 25-07-2022 sworn to before notary K.H. Venkatappa, Chickballapur.

I, GANESH YOGESH BOLAR alias G.YOGESH BOLAR residing No.37, BOLARS, 17th Cross, 8th Main, BNS Layout, Muthyalnagar, Bangalore-560054 have changed my name to YOGESH BOLAR .G vide affidavit dated 25/07/2022 sworn before notary Ambika.S, Bangalore.

I, TRIVENI A G W/o Suresh Kumar Mendem R/at No.341, 6th Cross, 11th Main, KG Halli Bangalore- 560015, have changed my Son's Name from DEEPAK.R To DAIVIK .S vide affidavit dated: 26/7/2022 Before Notary Kundan Babu.M Bangalore.

I, GEETA HEBASUR R/at No.1570, 6th Main E Block, 2nd Stage, Rajajinagar, Bangalore- 560010 have changed my name to GEETHA M DESHPANDE vide affidavit dated: 26/7/2022 Before Notary Onkarappa N.R Bangalore.

CONNECT ಕ್ಲಾಸಿಫೈಡ್ಸ್

Grand Flea Market Presents
Entry Free
ಆರ್ಟಿಸನ್ಸ್ ಬಜಾರ್
ARTISANS BAZAAR
Date: 26th July 2022, Tuesday to 31st July 2022, Sunday
6 Days Exhibition
Timings: 11AM - 7PM
Art, Craft, Handlooms & Lifestyle Exhibition
Varamahalakshmi Shopping Carnival
Venue: Karnataka Chitrakala Parishath Kumara Krupa Road, Bengaluru
Yes, Covid19 Safety are in Place | Also open on Sunday | Entry Free!
For Details Contact : 6364685716 / 9036658774 | Direct from The Artisans



Entry Free!
The Shadow Show
By: Prahlad Acharya
30th July 2022
6 PM to 7 PM



Entry Free!
The Puppet Show
Live Performance
31st July 2022
5PM to 6:30PM

90+ Shopping Stalls | Live Performance | Much More!

DH ಪ್ರಜಾವಾಣಿ
Classifieds **EDUCATION SPECIAL**
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in


ಬುಧವಾರ, ಜುಲೈ 27, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 207 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಇತ್ತೀಚೆಗೆ ಆಕಾಶದಲ್ಲೂ ಕಸ ಸಂಗ್ರಹವಾಗುತ್ತಿದೆ! ಭೂಕಕ್ಷೆಯಲ್ಲಿನ ಉಪಗ್ರಹಗಳು ಅಲ್ಲಿನ ಇತರ ಉಪಗ್ರಹಗಳೊಂದಿಗೂ ಅಂತರಿಕ್ಷದಲ್ಲಿನ 'ಕಸ'ದೊಡನೆಯೂ ಡಿಕ್ಕಿ ಹೊಡೆಯಬಹುದು!!



ರಾಜ್ಯ-ವೈವಿಧ್ಯ
'ನೀಟ್'ಗೆ ತಮಿಳರ ವಿರೋಧ

ಇ.ಡಿಯಿಂದ 6 ತಾಸು ಸೋನಿಯಾ ವಿಚಾರಣೆ 10

ಬಿಜೆಪಿ ಹೆಸರಿಗೆ ಜಮೀನು ನೋಂದಣಿಗೆ ಅರ್ಜಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,268	16,483	₹52,480 (ಬೆಂಗಳೂರು)	₹55,700 (ಬೆಂಗಳೂರು)	79.78

ಪರಿಷ್ಕೃತ ಯೋಜನಾ ವರದಿ ಕೊನೆಗೂ ಜಲ ಆಯೋಗಕ್ಕೆ ಸಲ್ಲಿಕೆ

ಮಹದಾಯಿ: ಯೋಜನಾ ಮೊತ್ತ ಇಳಿಕೆ

• ಮಂಜುನಾಥ ಹೆಬ್ಬಾರ್

ಮುಖ್ಯಾಂಶಗಳು

- ಯೋಜನೆಗಾಗಿ 59 ಹೆಕ್ಟೇರ್ ಅರಣ್ಯ ಭೂಮಿ ಸ್ವಾಧೀನ
- ಅಣೆಕಟ್ಟಿನ ಎತ್ತರವೂ ಇಳಿಕೆ
- ಕಾಲುವೆ ನಿರ್ಮಾಣದ ಬದಲು ಪೈಪ್ ಮೂಲಕ ನೀರು

ನವದೆಹಲಿ: ಮಹದಾಯಿ (ಕಳಸಾ-ಬಂಡೂರಿ) ಯೋಜನೆಯ ಸ್ವರೂಪವನ್ನೇ ಬದಲಿಸಿರುವ ಕರ್ನಾಟಕ ಸರ್ಕಾರ, ಪರಿಷ್ಕೃತ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಅನ್ನು ಕೇಂದ್ರ ಜಲ ಆಯೋಗಕ್ಕೆ ಕೊನೆಗೂ ಸಲ್ಲಿಸಿದೆ.

ಈ ಯೋಜನೆಯು ಅವಳಿ ನಗರಗಳಾದ ಹುಬ್ಬಳ್ಳಿ-ಧಾರವಾಡ, ಸುತ್ತಮುತ್ತಲಿನ ಪಟ್ಟಣಗಳು ಹಾಗೂ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಗುರಿ ಹೊಂದಿದೆ. 2012ರಲ್ಲಿ ಈ ಯೋಜನೆಯ ವೆಚ್ಚ ₹840 ಕೋಟಿ ಆಗಿತ್ತು. ಕರ್ನಾಟಕ ಸರ್ಕಾರ 2021-22ರಲ್ಲಿ ಯೋಜನಾ ಮೊತ್ತವನ್ನು ₹1,677 ಕೋಟಿಗೆ ಏರಿಸಿ ಆಡಳಿತಾತ್ಮಕ ಅನುಮೋದನೆ ನೀಡಿತ್ತು. ಯೋಜನೆಯ ಸ್ವರೂಪ ಬದಲಿಸಿದ್ದರಿಂದ ಯೋಜನಾ ಮೊತ್ತ ₹1 ಸಾವಿರ ಕೋಟಿಗೆ ಇಳಿಕೆಯಾಗಿದೆ. ಈ ಸಲದ ಬಜೆಟ್‌ನಲ್ಲಿ ಮಹದಾಯಿ ಯೋಜನೆಯ ಅನುಷ್ಠಾನಕ್ಕಾಗಿ ₹500 ಕೋಟಿ ಮೀಸಲಿಡಲಾಗಿದೆ.

ಪ್ರಜಾವಾಣಿ ವಿಶೇಷ

ಈ ಯೋಜನೆಗೆ 499 ಹೆಕ್ಟೇರ್ ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಲಾಗಿತ್ತು. ಇದು ಕುಡಿಯುವ ನೀರಿನ ಯೋಜನೆ ಆಗಿರುವುದರಿಂದ 'ಪರಿಸರ ಪರಿಣಾಮ ಅಧ್ಯಯನ ಅಧಿಸೂಚನೆ-2006'ರ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ, ಯೋಜನೆ ಅನುಷ್ಠಾನಕ್ಕೆ ಯಾವುದೇ ತಕರಾರು ಇಲ್ಲ ಎಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ 2019ರಲ್ಲೇ ಸ್ಪಷ್ಟಪಡಿಸಿದೆ. ಆದರೂ, ಅರಣ್ಯ ಭೂಮಿ ಸ್ವಾಧೀನಕ್ಕೆ ಕೇಂದ್ರ ಪರಿಸರ ಸಚಿವಾಲಯದ ಒಪ್ಪಿಗೆ ಪಡೆಯಬೇಕಿದೆ. ಕಾಲುವೆಗಳ ಮೂಲಕ ನೀರು ಹರಿಸಿದರೆ 499 ಹೆಕ್ಟೇರ್ ಅರಣ್ಯ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ.



ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿ ಬಳಿ ಮಹದಾಯಿ ನದಿ

7ನೇ ಪುಟ ನೋಡಿ

ಮೇಕೆದಾಟು: ಪ್ರಾಧಿಕಾರಕ್ಕೆ ಅಧಿಕಾರ

ನವದೆಹಲಿ: 'ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಮಾರ್ಪಾಡಾಗಿರುವ ಅಂತಿಮ ತೀರ್ಪಿನ ಪ್ರಕಾರ, ಮೇಕೆದಾಟು ಯೋಜನೆಯ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ (ಸಿಡಬ್ಲ್ಯುಎಂಎ) ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದ್ದಾರೆ.

ಜಲಶಕ್ತಿ ಸಚಿವಾಲಯದ ಸಿಡಬ್ಲ್ಯುಎಂಎಗೆ ಸಲ್ಲಿಸಿದ ಅಭಿಪ್ರಾಯದಲ್ಲಿ ಮೆಹ್ತಾ, 'ಸಿಡಬ್ಲ್ಯುಎಂಎ ಸಂರಚನೆ ಬಗ್ಗೆ 2018ರ ಜೂನ್ 1ರಂದು ಹೊರಡಿಸಲಾದ ಅಧಿಸೂಚನೆಯ ಸೆಕ್ಷನ್ 3ರಲ್ಲಿ ಪ್ರತಿಯೊಂದು ಸಂತ್ರಸ್ತ ರಾಜ್ಯದ ಪ್ರತಿನಿಧಿಗಳನ್ನೂ ಅದು ಒಳಗೊಂಡಿರಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಅವುಗಳ ಅಧಿಕಾರ ಮತ್ತು ಕಾರ್ಯದ ಬಗ್ಗೆ ಸೆಕ್ಷನ್ 10ರ ಅಡಿ ಪಟ್ಟಿ ಮಾಡಲಾಗಿದೆ. ಈ ಅಧಿಕಾರಗಳು ವಿಶಾಲ ವ್ಯಾಪ್ತಿಯನ್ನು ಹೊಂದಿವೆ. ಈ ಕೆಲವು ಕಾರಣಗಳಿಂದಾಗಿಯೇ, ವಿವಾದಗಳನ್ನು ಮೊದಲು ಪರಿಶೀಲನೆಗೆ ಒಳಪಡಿಸಿ ನಂತರ ವರದಿ ನೀಡುವ ಸಲುವಾಗಿ ಸಿಡಬ್ಲ್ಯುಸಿಗೆ ಸಿಡಬ್ಲ್ಯುಎಂಎಯ ಅಗತ್ಯ ಇರುವಂತೆ ತೋರುತ್ತದೆ' ಎಂದು ತಿಳಿಸಿದ್ದಾರೆ

ಈ ಕಾರಣಗಳಿಂದಾಗಿ ಪ್ರಾಧಿಕಾರವು ಯೋಜನೆಯ ಬಗ್ಗೆ ಚರ್ಚಿಸಿ ಕೇಂದ್ರ ಜಲ ಆಯೋಗಕ್ಕೆ ವರದಿ ಸಲ್ಲಿಸಬಹುದು ಎಂದು ಅವರು ಪ್ರತಿಪಾದಿಸಿದ್ದಾರೆ.

ಮಂಗಳವಾರದ ವಿಚಾರಣೆ ವೇಳೆ ಪ್ರಾಧಿಕಾರದ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ವಾದ ಮಂಡಿಸಿ, ಈ ವಿಷಯದಲ್ಲಿ ಪ್ರಮಾಣಪತ್ರ ಸಲ್ಲಿಸಲು ಕಾಲಾವಕಾಶ ಕೋರಿದರು. ಬಳಿಕ ವಿಚಾರಣೆಯನ್ನು ಆಗಸ್ಟ್ 10ಕ್ಕೆ ಮುಂದೂಡಲಾಯಿತು.

ಮತ್ತೊಬ್ಬ ಶಂಕಿತ ಉಗ್ರ ಬಂಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಅಲ್‌ಕೈದಾ' ಉಗ್ರ ಸಂಘಟನೆಗೆ ನೇಮಕವಾಗಿ ಅಫ್ಘಾನಿಸ್ತಾನಕ್ಕೆ ಹೋಗಲು ಸಿದ್ಧನಾಗಿದ್ದ ಮತ್ತೊಬ್ಬ ಶಂಕಿತ ಅಬ್ದುಲ್ ಅಲೀಂ ಮಂಡಲ್ ಅಲಿಯಾಸ್ ಜುಬಾನನ್ನು (24) ನಗರದ ಸಿಸಿಬಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಪಶ್ಚಿಮ ಬಂಗಾಳದ ಅಬ್ದುಲ್ ಅಲೀಂ ತಮಿಳುನಾಡಿನ ಸೇಲಂನಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಬಡ ಕುಟುಂಬದ ಈತ, ಧರ್ಮ ರಕ್ಷಣೆ ಹಾಗೂ ಹಣದ ಆಸೆಗಾಗಿ 'ಅಲ್‌ಕೈದಾ' ಸಂಘಟನೆಗೆ ಸೇರಲು ಒಪ್ಪಿಕೊಂಡಿದ್ದ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಬೆಂಗಳೂರಿನ ತಿಲಕ್‌ನಗರದಲ್ಲಿ ಜುಲೈ 24ರಂದು ಬಂಧಿಸಲಾಗಿರುವ ಶಂಕಿತ ಅಖ್ತರ್ ಹುಸೇನ್ ಲಷ್ಕರ್ ಜೊತೆ ಅಬ್ದುಲ್ ಅಲೀಂ ಒಡನಾಟ ಹೊಂದಿದ್ದ. ಕುಟುಂಬದ ಸದಸ್ಯರು ಹಾಗೂ ಸ್ನೇಹಿತರಿಗೆ ಗೊತ್ತಾಗದಂತೆ ಅಲ್‌ಕೈದಾ ಉಗ್ರರನ್ನು ಸಂಪರ್ಕಿಸಿ ಸಂಘಟನೆಗೆ ನೇಮಕವಾಗಿದ್ದ ಇವರಿಬ್ಬರು ಜಮ್ಮು-ಕಾಶ್ಮೀರ ಮೂಲಕ ಅಫ್ಘಾನಿಸ್ತಾನಕ್ಕೆ ಹೋಗಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು.'

'ಅಖ್ತರ್‌ನನ್ನು ಬಂಧಿಸುತ್ತಿದ್ದಂತೆ ಅಬ್ದುಲ್ ಅಲೀಂ ಬಗ್ಗೆ ಮಾಹಿತಿ ಸಿಕ್ಕಿತ್ತು. ತಮಿಳುನಾಡಿಗೆ ಹೋಗಿದ್ದ ವಿಶೇಷ ತಂಡ, ಅಬ್ದುಲ್ ಅಲೀಂನನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಈತನನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿ, ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದಿವೆ.

ಸ್ವಾಗತಿಸಲು ಸಜ್ಜಾಗಿದ್ದ ಉಗ್ರರು: 'ಅಖ್ತರ್ ಹಾಗೂ ಅಬ್ದುಲ್ ಅಲೀಂನನ್ನು ಸಂಘಟನೆಗೆ ಸೇರಿಸಿಕೊಳ್ಳಲು ಮುಂದಾಗಿದ್ದ ಉಗ್ರರು, ಅವರ ಪ್ರಯಾಣಕ್ಕೆ ವ್ಯವಸ್ಥೆ ಮಾಡಿದ್ದರು. ಜಮ್ಮು-ಕಾಶ್ಮೀರ ಗಡಿ ಮೂಲಕ ಅವರಿಬ್ಬರನ್ನು ಪಾಕಿಸ್ತಾನಕ್ಕೆ ಕರೆಸಿ, ಅಲ್ಲಿಂದ ಅಫ್ಘಾನಿಸ್ತಾನಕ್ಕೆ ಕರೆದೊಯ್ಯಲು ಉಗ್ರರು ಯೋಚಿಸಿದ್ದರು. ಅಷ್ಟರಲ್ಲೇ ಶಂಕಿತರು ನಮ್ಮ ಕೈಗೆ ಸಿಕ್ಕಿಬಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

ಅಖ್ತರ್‌ಗೆ ಅಲ್‌ಕೈದಾ ಪತ್ರ?

ಶಂಕಿತ ಅಖ್ತರ್‌ಗೆ ಅಲ್‌ಕೈದಾ ಉಗ್ರರು ಬರೆದಿದ್ದಾರೆ ಎನ್ನಲಾದ ಪತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಆದರೆ, ಈ ಪತ್ರದ ಬಗ್ಗೆ ಮಾಹಿತಿ ಇಲ್ಲವೆಂದು ಸಿಸಿಬಿ ಮೂಲಗಳು ಹೇಳಿವೆ.

'ಪ್ರವಾದಿ ಅವರನ್ನು ನಾವು ರಕ್ಷಿಸಲು ವಿಫಲರಾದರೆ, ತಾಯಿಯನ್ನು ಕಳೆದುಕೊಂಡಂತೆ' ಎಂಬ ಶೀರ್ಷಿಕೆಯಡಿ ಪತ್ರವಿದೆ. 'ಪ್ರಪಂಚದ ಎಲ್ಲರಿಗೂ ನಾವು ಎಚ್ಚರಿಕೆ ನೀಡುತ್ತಿದ್ದೇವೆ. ಆದರೆ, ಹಿಂದುತ್ವ ಭಯೋತ್ಪಾದಕರು ಭಾರತವನ್ನು ಆವರಿಸಿಕೊಳ್ಳುತ್ತಿದ್ದಾರೆ. ಪ್ರವಾದಿಗಳ ಪ್ರತಿಷ್ಠೆಗಾಗಿ ನಾವು ಹೋರಾಡಬೇಕಿದೆ. ಈ ಮೂಲಕ ಪ್ರವಾದಿಗಳಿಗೆ ಗೌರವ ಸಲ್ಲಿಸಬೇಕು' ಎಂದೂ ಪತ್ರದಲ್ಲಿ ಬರೆಯಲಾಗಿದೆ.

ಟ್ವಿಟರ್ ಅರ್ಜಿ: ಕೇಂದ್ರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆ-2000ದ ಕಲಂ 69ಎ ಗೆ ವಿರುದ್ಧವಾಗಿರುವ 1,400ಕ್ಕೂ ಹೆಚ್ಚು ಟ್ವಿಟರ್ ಖಾತೆಗಳನ್ನು ಬ್ಲಾಕ್ ಮಾಡಬೇಕು' ಎಂಬ ನೋಟಿಸ್‌ಗಳನ್ನು ಪ್ರಶ್ನಿಸಿ 'ಟ್ವಿಟರ್' ಕಂಪನಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಟ್ವಿಟರ್' ಕಂಪನಿಯ ಬೆಂಗಳೂರಿನ ಪ್ರತಿನಿಧಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆಯನ್ನು ಆಗಸ್ಟ್ 25ಕ್ಕೆ ಮುಂದೂಡಲಾಗಿದೆ.

ರಾಜ್ಯಸಭೆ: 19 ಸದಸ್ಯರ ಅಮಾನತು

ನವದೆಹಲಿ (ಪಿಟಿಐ): ರಾಜ್ಯಸಭೆಯ ಕಲಾಪಕ್ಕೆ ಅಡ್ಡಿಪಡಿಸಿದ ಮತ್ತು ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಕಾರಣಕ್ಕೆ ವಿರೋಧ ಪಕ್ಷಗಳ ಒಟ್ಟು 19 ಸಂಸದರನ್ನು ಮಂಗಳವಾರ ರಾಜ್ಯಸಭೆಯಿಂದ ಒಂದು ವಾರದ ಅವಧಿಗೆ ಅಮಾನತುಗೊಳಿಸಲಾಗಿದೆ. ಲೋಕಸಭೆಯಲ್ಲಿ ಕಲಾಪಕ್ಕೆ ಅಡ್ಡಿಪಡಿಸಿದರೆಂದು ಕಾಂಗ್ರೆಸ್‌ನ ನಾಲ್ವರು ಸಂಸದರನ್ನು ಸೋಮವಾರ ಅಮಾನತುಗೊಳಿಸಲಾಗಿತ್ತು.

ಅಮಾನತುಗೊಂಡವರಲ್ಲಿ ತೃಣಮೂಲ ಕಾಂಗ್ರೆಸ್‌ನ ಏಳು, ಡಿಎಂಕೆಯ ಆರು, ತೆಲಂಗಾಣ ರಾಷ್ಟ್ರ ಸಮಿತಿಯ (ಟಿಆರ್‌ಎಸ್) ಮೂವರು, ಸಿಪಿಐಎಂನ ಇಬ್ಬರು ಹಾಗೂ ಸಿಪಿಐನ ಒಬ್ಬ ಸಂಸದ ಸೇರಿದ್ದಾರೆ.

'ಸಮೂಹ ನಾಶ ಶಸ್ತ್ರಾಸ್ತ್ರಗಳು ಹಾಗೂ ಅವುಗಳ ವಿತರಣಾ ವ್ಯವಸ್ಥೆಗಳ (ಕಾನೂನುಬಾಹಿರ ಚಟುವಟಿಕೆಗಳ ನಿಷೇಧ) ಕಾಯ್ದೆ' ತಿದ್ದುಪಡಿ ಮಸೂದೆ 2022ರ ಬಗ್ಗೆ ಚರ್ಚೆ ಮುಂದುವರಿಸಲು ಕಲಾಪದಲ್ಲಿ ನಿರ್ಧರಿಸಿದಾಗ, ವಿರೋಧ ಪಕ್ಷಗಳ ಸದಸ್ಯರು ಬೆಲೆ ಏರಿಕೆ ಬಗ್ಗೆ ತಕ್ಷಣ ಚರ್ಚೆ ನಡೆಸಬೇಕೆಂದು ಒತ್ತಾಯಿಸಿ ಸಭಾಧ್ಯಕ್ಷರ ಪೀಠದ ಎದುರು ಜಮಾಯಿಸಿದರು.

10ನೇ ಪುಟ ನೋಡಿ

ಪ್ರತಿಭಟನೆ: ರಾಹುಲ್ ಪೊಲೀಸ್ ವಶಕ್ಕೆ

ಬೆಲೆ ಏರಿಕೆ ಕುರಿತು ಸಂಸತ್ತಿನಲ್ಲಿ ಚರ್ಚೆಗೆ ಅವಕಾಶ ನೀಡದಿರುವುದು ಮತ್ತು ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯವು ವಿಚಾರಣೆಗೆ ಒಳಪಡಿಸಿದದ್ದನ್ನು ಖಂಡಿಸಿ ಕಾಂಗ್ರೆಸ್ ಸಂಸದರ ಜತೆಗೆ ರಾಹುಲ್ ಗಾಂಧಿ ದೆಹಲಿಯ ವಿಜಯ್ ಚೌಕದಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನಾ ಮೆರವಣಿಗೆಯನ್ನು ದೆಹಲಿ ಪೊಲೀಸರು ತಡೆದಿದ್ದಾರೆ. ನಂತರ ಕಾಂಗ್ರೆಸ್ ಸಂಸದರನ್ನು ವಶಕ್ಕೆ ಪಡೆದಿದ್ದಾರೆ. ರಾಹುಲ್ ಗಾಂಧಿ ಅವರನ್ನು ವಶಕ್ಕೆ ಪಡೆಯಲು ಮುಂದಾದಾಗ ಅವರು, ಅಲ್ಲಿಯೇ ರಸ್ತೆಯಲ್ಲಿ ಧರಣಿ ಕೂತಿದ್ದಾರೆ. ಆದರೂ ಪೊಲೀಸರು ಅವರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದ್ದಾರೆ.

ಒಳ ಪುಟ

₹28,732 ಕೋಟಿಯ ಶಸ್ತ್ರಾಸ್ತ್ರ ಖರೀದಿಗೆ ಒಪ್ಪಿಗೆ 10

6 ತುಂಬಿದರಷ್ಟೇ ಶಾಲೆ ಪ್ರವೇಶ

ಬೆಂಗಳೂರು: ಮಕ್ಕಳನ್ನು ಒಂದನೇ ತರಗತಿಗೆ ದಾಖಲಿಸಲು ಆಯಾ ಶೈಕ್ಷಣಿಕ ವರ್ಷದ ಜೂನ್ 1ನೇ ತಾರೀಕಿಗೆ ಕಡ್ಡಾಯವಾಗಿ ಆರು ವರ್ಷ ಪೂರ್ಣಗೊಂಡಿರಬೇಕು ಎಂದು ವಯೋಮಿತಿ ನಿಗದಿಪಡಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಒಂದನೇ ತರಗತಿಗೆ ಮಕ್ಕಳನ್ನು ದಾಖಲಿಸುವ ಸಂಬಂಧ ಈ ಹಿಂದೆ ಹೊರಡಿಸಿದ್ದ ಆದೇಶಗಳನ್ನು ಹಿಂಪಡೆದಿರುವ ಸರ್ಕಾರ, ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) -2009 ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು- 2012ರಂತೆ ಈ ವಯೋಮಿತಿ ನಿಗದಿಪಡಿಸಿದೆ.


2020ರ ಮಾರ್ಚ್ 20ರಂದು ಹೊರಡಿಸಿದ್ದ ಆದೇಶದಲ್ಲಿ ಎಲ್‌ಕೆಜಿಗೆ ದಾಖಲಾಗಲು ಜೂನ್ 1ನೇ ತಾರೀಕಿಗೆ 3 ವರ್ಷ 5 ತಿಂಗಳು ಹಾಗೂ ಒಂದನೇ ತರಗತಿಗೆ 5 ವರ್ಷ 5 ತಿಂಗಳು ವಯೋಮಿತಿ ನಿಗದಿಪಡಿಸಲಾಗಿತ್ತು.

5ಜಿ ಹರಾಜು: ₹ 1.45 ಲಕ್ಷ ಕೋಟಿ ಮೌಲ್ಯದ ಬಿಡ್

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ತರಂಗಾಂತರ ಹರಾಜು ಪ್ರಕ್ರಿಯೆಯ ಮೊದಲ ದಿನವಾದ ಮಂಗಳವಾರ ಒಟ್ಟು ₹ 1.45 ಲಕ್ಷ ಕೋಟಿ ಮೌಲ್ಯದ 5ಜಿ ತರಂಗಾಂತರಗಳಿಗೆ ಬಿಡ್‌ಗಳು ಸಲ್ಲಿಕೆಯಾಗಿವೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



'ನಿರುದ್ಯೋಗ ಸಮಸ್ಯೆ ನಿವಾರಣೆಗೆ ಉದ್ಯೋಗ ನೀತಿ ನೆರವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಉದ್ಯೋಗ ನೀತಿಯಡಿ ಖಾಸಗಿ ಕ್ಷೇತ್ರಗಳಲ್ಲೂ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶ ಒದಗಿಸುವ ಮೂಲಕ, ನಿರುದ್ಯೋಗ ಸಮಸ್ಯೆಯನ್ನು ಸರ್ಕಾರ ತಕ್ಕಮಟ್ಟಿಗೆ ನಿವಾರಿಸಲಿ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಆಶಯ ವ್ಯಕ್ತಪಡಿಸಿದ್ದಾರೆ.

'ಕರ್ನಾಟಕ ಉದ್ಯೋಗ ನೀತಿ 2022-25'ಕ್ಕೆ ಸಚಿವ ಸಂಪುಟದ ಒಪ್ಪಿಗೆ ದೊರೆತಿರುವುದನ್ನು ಸ್ವಾಗತಿಸಿರುವ ಅವರು,'ನಾಡಿನಲ್ಲಿ ನಮ್ಮವರೇ ನಿರುದ್ಯೋಗದ ಪಿಡುಗಿನಲ್ಲಿ ಸಿಲುಕಿಕೊಂಡಿದ್ದಾರೆ. ಸರ್ಕಾರಿ ಜತೆಗೆ ಖಾಸಗಿ ಕ್ಷೇತ್ರದಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಕನ್ನಡಿಗರಿಗೆ ಅವಕಾಶ ನೀಡಬೇಕು. ಈ ಬಗ್ಗೆ ಬಹುದಿನಗಳಿಂದ ಒತ್ತಾಯಿಸುತ್ತಾ ಬರಲಾಗಿತ್ತು. ಉದ್ಯೋಗ ನೀತಿಗೆ ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಿರುವುದು ಕನ್ನಡಿಗರ ಪಾಲಿಗೆ ಆಶಾಕಿರಣವಾಗಿದೆ' ಎಂದು ಹೇಳಿದ್ದಾರೆ.

'ಎಲ್ಲ ಉದ್ಯಮಗಳಲ್ಲಿ ಬಂಡವಾಳ ಹೂಡಿಕೆ ಮಾಡಿ, ಉದ್ಯಮಗಳನ್ನು ವಿಸ್ತರಿಸುವ ಸಂದರ್ಭದಲ್ಲಿ ಹೆಚ್ಚುವರಿಯಾಗಿ ಶೇ 2.5ರಿಂದ ಶೇ 3ರಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಬಂಡವಾಳದ ಹೂಡಿಕೆಯನ್ನು ಆಧರಿಸಿ ಸಣ್ಣ, ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು ಎಂದು ವರ್ಗೀಕರಿಸಲಾಗಿದೆ. ಇವುಗಳಲ್ಲಿ ಶೇ 3ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ಅಥವಾ ಸ್ಥಳೀಯರಿಗೆ ನೀಡಬೇಕು ಎನ್ನುವುದನ್ನು ಕಡ್ಡಾಯ ಮಾಡಲಾಗಿದೆ. ಇದು ಕಟ್ಟುನಿಟ್ಟಾಗಿ ಅನುಷ್ಠಾನವಾಗುವಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

'ಮುಂದಿನ ದಿನಗಳಲ್ಲಿ ಬಂಡವಾಳ ಹಾಕುವ ಉದ್ಯಮಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ನೀಡುವುದಕ್ಕೆ ಮನವೊಲಿಸಬೇಕು. ನಮ್ಮವರಿಗೆ ಪ್ರಾತಿನಿಧ್ಯ ಒದಗಿಸಲು ಸರ್ಕಾರದೊಂದಿಗೆ ಪರಿಷತ್ತು ಕೈ ಜೋಡಿಸಲಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಲಿಗೆ ರೇಡಿಯೊ ಕಾಲರ್: ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಹುಲಿಗೆ ರೇಡಿಯೊ ಕಾಲರ್ ಹಾಕಿರುವುದನ್ನು ಪ್ರಶ್ನಿಸಿರುವ ಪ್ರಕರಣದಲ್ಲಿ ಪರಿಗಣಿಸಬಹುದಾದ ಯಾವುದೇ ಅಂಶಗಳಿಲ್ಲ' ಎಂಬ ಅಭಿಪ್ರಾಯದೊಂದಿಗೆ ಹೈಕೋರ್ಟ್ ಅರ್ಜಿ ವಿಲೇವಾರಿ ಮಾಡಿದೆ.

ಈ ಸಂಬಂಧ ಕೃಷಿಕ ಚೇರಂಡ ನಂದ ಸುಬ್ಬಯ್ಯ ಸಲ್ಲಿಸಿದ್ದ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, 'ಅರ್ಜಿದಾರರು ವನ್ಯಜೀವಿ ಸಂರಕ್ಷಣಾ ಕಾಯ್ದೆ ಕಲಂ 28(1) (ಎ–ಡಿ) ನಿಯಮಗಳ ಸಿಂಧುತ್ವ ಪ್ರಶ್ನಿಸಿದ್ದಾರೆ. ಆದರೆ, ಇದಕ್ಕೆ ಯಾವುದೇ ಆಧಾರವಿಲ್ಲ. ಅಂತೆಯೇ, ಯಾವುದೇ ಮೂಲಭೂತ ಹಕ್ಕುಗಳೂ ಉಲ್ಲಂಘನೆಯಾಗಿಲ್ಲ. ಆದ್ದರಿಂದ, ಅರ್ಜಿ ವಿಲೇವಾರಿ ಮಾಡಲಾಗುತ್ತಿದೆ' ಎಂದು ಹೇಳಿದೆ.

'ಹುಲಿಗೆ ರೇಡಿಯೊ ಕಾಲರ್ ಅಳವಡಿಸಲು ಅನಧಿಕೃತವಾಗಿ ಅನುಮತಿ ನೀಡಲಾಗಿದ್ದು ಈ ಸಂಬಂಧ ಪಿಸಿಸಿಎಫ್ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಈ ಘಟನೆ ಬಗ್ಗೆ ಸಿಬಿಐ ತನಿಖೆಗೆ ಆದೇಶಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದರು.

ಭಾರತ ತೊರೆಯಲ್ಲ: ಫ್ರ್ಯಾಂಕ್ಲಿನ್ ಟೆಂಪಲ್‌ಟನ್

ಮುಂಬೈ (ಪಿಟಿಐ): ಆಸ್ತಿ ನಿರ್ವಹಣಾ ಕಂಪನಿ ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ತಾನು ಭಾರತದಲ್ಲಿನ ವಹಿವಾಟು ಸ್ಥಗಿತಗೊಳಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ದೇಶದಲ್ಲಿ ತನ್ನ ಬ್ರ್ಯಾಂಡ್‌ಅನ್ನು ಮತ್ತೆ ಕಟ್ಟುವುದಾಗಿ ಅದು ಹೇಳಿದೆ.

ಕಂಪನಿಯು 26 ವರ್ಷಗಳಿಂದ ಭಾರತದಲ್ಲಿ ವಹಿವಾಟು ನಡೆಸುತ್ತಿದೆ. ₹ 56 ಸಾವಿರ ಕೋಟಿಗೂ ಹೆಚ್ಚಿನ ಮೌಲ್ಯದ ಆಸ್ತಿಯನ್ನು ನಿರ್ವಹಿಸುತ್ತಿದೆ. 20 ಲಕ್ಷ ಹೂಡಿಕೆದಾರರು ಕಂಪನಿಯ ಮೂಲಕ ಹಣ ಹೂಡಿಕೆ ಮಾಡಿದ್ದಾರೆ ಎಂದು ಕಂಪನಿಯ ಭಾರತದ ಅಧ್ಯಕ್ಷ ಅವಿನಾಶ್ ಸತ್ವಾಲೇಕರ್ ಹೇಳಿದ್ದಾರೆ.

ಮೂರು ಲಕ್ಷ ಹೂಡಿಕೆದಾರರು ಹಣ ತೊಡಗಿಸಿದ್ದ ಆರು ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್ ಯೋಜನೆಗಳನ್ನು ಫ್ರ್ಯಾಂಕ್ಲಿನ್ ಟೆಂಪಲ್‌ಟನ್ 2020ರ ಏಪ್ರಿಲ್‌ನಲ್ಲಿ ಸಮಾಪ್ತಿಗೊಳಿಸುವ ತೀರ್ಮಾನ ಕೈಗೊಂಡಿತ್ತು. ಇದಕ್ಕೆ ಸಂಬಂಧಿಸಿದಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು 2020ರ ನವೆಂಬರ್‌ನಲ್ಲಿ ಕಂಪನಿಗೆ ನೋಟಿಸ್ ಜಾರಿಗೊಳಿಸಿತ್ತು.

ಕಳೆದ ಎರಡು ವರ್ಷಗಳಲ್ಲಿ ಕಂಪನಿಯ ಬ್ರ್ಯಾಂಡ್‌ಗೆ ಧಕ್ಕೆಯಾಗಿದೆ ಎಂಬುದನ್ನು ಒಪ್ಪಿಕೊಂಡಿರುವ ಸತ್ವಾಲೇಕರ್ ಅವರು, ಬ್ರ್ಯಾಂಡ್‌ಅನ್ನು ಮತ್ತೆ ಗಟ್ಟಿಗೊಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಮುಂದಿನ ಆರರಿಂದ ಹನ್ನೆರಡು ತಿಂಗಳುಗಳಲ್ಲಿ ಕಂಪನಿಯು ನಿರಂತರವಾಗಿ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ ಎಂದು ಅವರು ಹೇಳಿದ್ದಾರೆ.

ಬಿಬಿಎಂಪಿ: ನಿಯಮ ರೂಪಿಸಲು ಆ.31ರ ಗಡುವು

ಬೆಂಗಳೂರು: ಬಿಬಿಎಂಪಿ ಅಧಿನಿಯಮದ ಪ್ರಕಾರ ನಿಯಮಗಳ ಕರಡು ಸಲ್ಲಿಸಲು ಸಮಿತಿ ರಚಿಸಿ, ಆ.31ರ ಗಡುವು ನೀಡಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶ ಹೊರಡಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ 2020 ಕಳೆದ ವರ್ಷದ ಜನವರಿ 11ರಿಂದ ಜಾರಿಗೆ ಬಂದಿದೆ. ಅದಕ್ಕೆ ಸಂಬಂಧಿಸಿದ ನಿಯಮಗಳು, ಬೈಲಾ, ಬಿಬಿಎಂಪಿ ಹುದ್ದೆಗಳ ಪುನರ್‌ನಾಮಕರಣ, ವಲಯಗಳ ಪುನರ್ ವಿಂಗಡಣೆ ಇತ್ಯಾದಿಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕಾಗಿದೆ. ಹೀಗಾಗಿ, ಕಾಯ್ದೆಯನ್ನು ವಿಸ್ತೃತವಾಗಿ ಪರಿಶೀಲಿಸಿ ನಿಯಮ/ಬೈಲಾಗಳನ್ನು ರಚಿಸಲು ಮುಖ್ಯ ಆಯುಕ್ತರು ಸಮಿತಿ ರಚಿಸಿದ್ದಾರೆ.

ಸಮಿತಿ: ಕಾನೂನು ಕೋಶದ ಮುಖ್ಯಸ್ಥ ಈ ಸಮಿತಿ ಅಧ್ಯಕ್ಷರಾಗಿದ್ದಾರೆ. ಪ್ರಧಾನ ಎಂಜಿನಿಯರ್, ಉಪ ಅರಣ್ಯ ಸಂರಕ್ಷಣಾಧಿಕಾರಿ, ಮುಖ್ಯ ನಗರ ಯೋಜಕ, ಮುಖ್ಯ ಲೆಕ್ಕಾಧಿಕಾರಿ, ಘನತ್ಯಾಜ್ಯ ನಿರ್ವಹಣೆ ಜಂಟಿ ಆಯುಕ್ತ, ಪಶು ಸಂಗೋಪನೆ ಜಂಟಿ ನಿರ್ದೇಶಕ, ಕಂದಾಯ ಜಂಟಿ ಆಯುಕ್ತ, ಆಡಳಿತ ಉಪ ಆಯುಕ್ತ, ಭೂಸ್ವಾಧೀನ ಉಪ ಆಯುಕ್ತ, ಮಾರುಕಟ್ಟೆ ಮತ್ತು ಕಲ್ಯಾಣ ಉಪ ಆಯುಕ್ತ, ಮುಖ್ಯ ಆರೋಗ್ಯಾಧಿಕಾರಿ, ಕೌನ್ಸಿಲ್ ಕಾರ್ಯದರ್ಶಿ, ಜಾಹೀರಾತು ಸಹಾಯಕ ಆಯುಕ್ತ, ಆಸ್ತಿಗಳ ಸಹಾಯಕ ಆಯುಕ್ತ ಸದಸ್ಯರಾಗಿದ್ದಾರೆ. ಉಪ ಕಾನೂನು ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಕೋವಿಡ್: ದೃಢ ಪ್ರಮಾಣ ಶೇ 6.15ಕ್ಕೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 1,425 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 6.15ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 23,150 ಪರೀಕ್ಷೆಗಳನ್ನು ನಡೆಸಲಾಗಿದೆ. ರಾಜ್ಯದ 23 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 1,198 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಮೈಸೂರಿನಲ್ಲಿ 53, ತುಮಕೂರಿನಲ್ಲಿ 18, ಧಾರವಾಡದಲ್ಲಿ 17, ಬಳ್ಳಾರಿಯಲ್ಲಿ 15, ಬೆಳಗಾವಿ ಹಾಗೂ ವಿಜಯಪುರದಲ್ಲಿ ತಲಾ 12 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆ ಇದೆ.

8,861 ಸಕ್ರಿಯ ಪ್ರಕರಣಗಳಿವೆ. ಬೆಂಗಳೂರಿನಲ್ಲಿ 7,504 ಸೋಂಕಿತರಿದ್ದಾರೆ. ಕೋವಿಡ್ ಪೀಡಿತರಲ್ಲಿ ಧಾರವಾಡದ 77 ವರ್ಷದ ವೃದ್ಧರೊಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 39.98 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ 39.49 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಮೃತರ ಸಂಖ್ಯೆ 40,092ಕ್ಕೆ ಏರಿಕೆಯಾಗಿದೆ.

'ಕ್ಷೇತ್ರ ಬಿಟ್ಟು ಕೊಡಲು ಸಿದ್ಧ'

ಬಾಗೇಪಲ್ಲಿ: 'ಬಾಗೇಪಲ್ಲಿ, ಗುಡಿಬಂಡೆ, ಚೇಳೂರು ತಾಲ್ಲೂಕುಗಳ ಅಭಿವೃದ್ಧಿಯ-ಹಿತದೃಷ್ಟಿಯಿಂದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರದ ಅಭ್ಯರ್ಥಿಯಾಗಲಿ. ಅವರಿಗೆ ಕ್ಷೇತ್ರ ಬಿಟ್ಟು ಕೊಡಲು ಸಿದ್ಧ' ಎಂದು ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಹೇಳಿದರು.

ಕೋವಿಡ್ ನಿಯಂತ್ರಣದ ನಂತರ ನಗರದಲ್ಲಿ ಗರಿಗೆದರಿದ ಸಾಂಸ್ಕೃತಿಕ ಚಟುವಟಿಕೆ

ಕಳೆಗಟ್ಟಿದ ಸರ್ಕಾರಿ ರಂಗಮಂದಿರಗಳು

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಬರುತ್ತಿದ್ದಂತೆ ಕಲಾ ಪ್ರಪಂಚ ಚೇತರಿಸಿಕೊಳ್ಳಲಾರಂಭಿಸಿದೆ. ಇದರಿಂದಾಗಿ ನಗರದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಗರಿಗೆದರಿವೆ. ಬೆರಳಣಿಕೆಯಷ್ಟು ಮಾತ್ರ ಸರ್ಕಾರಿ ರಂಗಮಂದಿರಗಳು ಇರುವುದರಿಂದ ದರ ಏರಿಕೆಯ ನಡುವೆಯೂ ಬೇಡಿಕೆ ಹೆಚ್ಚಳವಾಗುತ್ತಿದೆ.

2020ರ ಮಾರ್ಚ್ ತಿಂಗಳಲ್ಲಿ-ಕೋವಿಡ್ ಕಾಣಿಸಿಕೊಂಡ ಬಳಿಕ ಸೂಕ್ತ ನಿರ್ವಹಣೆ ಇಲ್ಲದೆಯೇ ರಂಗಮಂದಿರಗಳು ಕಳೆಗುಂದಿದ್ದವು. ಸಾಂಸ್ಕೃತಿಕ ಚಟುವಟಿಕೆಗಳಿಗೆ ನಿರ್ಬಂಧಗಳನ್ನು ವಿಧಿಸಿದ್ದರಿಂದ ಕೆಲ ತಿಂಗಳು ರಂಗಮಂದಿರಗಳು ಬಾಗಿಲು ಮುಚ್ಚಬೇಕಾಗಿತ್ತು. ಈಗ ಜನಜೀವನ ಕೋವಿಡ್ ಪೂರ್ವದ ಸ್ಥಿತಿಗೆ ಮರಳುತ್ತಿರುವುದರಿಂದ ಕಲಾ ಚಟುವಟಿಕೆಗಳಿಗೂ ಉತ್ತೇಜನ ಸಿಗಲಾರಂಭಿಸಿದೆ. ಹೀಗಾಗಿ, ವಿವಿಧ ಸಂಘ–ಸಂಸ್ಥೆಗಳು ಈ ಮೊದಲಿನಂತೆ ಕಾರ್ಯಕ್ರಮಗಳನ್ನು ನಡೆಸಲಾರಂಭಿಸಿವೆ. ಖಾಸಗಿ ರಂಗಮಂದಿರಗಳಲ್ಲಿ ಬಾಡಿಗೆ ದುಬಾರಿ ಇರುವುದರಿಂದ ಸರ್ಕಾರಿ ರಂಗಮಂದಿರಗಳಿಗೆ ಬೇಡಿಕೆ ಹೆಚ್ಚಳವಾಗಿದೆ.

ಪ್ರಜಾವಾಣಿ ವಿಶೇಷ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳೂ ಸೇರಿವೆ. 2018ರ ಡಿಸೆಂಬರ್ ತಿಂಗಳಲ್ಲಿ ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ಅವಘಡಕ್ಕೆ ಒಳಗಾಗಿದ್ದ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯ, ಮೂರೂವರೆ ವರ್ಷಗಳ ಬಳಿಕ ಪ್ರದರ್ಶನಗಳಿಗೆ ವೇದಿಕೆ ಒದಗಿಸಿದೆ. ಕಳೆದ ಏಪ್ರಿಲ್ ತಿಂಗಳಿಂದ ಅಲ್ಲಿ ಪ್ರದರ್ಶನಗಳಿಗೆ ಅವಕಾಶ ಮಾಡಿಕೊಡಲಾಗಿದೆ. ರವೀಂದ್ರ ಕಲಾಕ್ಷೇತ್ರ, ನಯನ ಸಭಾಂಗಣ ಹಾಗೂ ಸಾಂಸ್ಕೃತಿಕ ಸಮುಚ್ಚಯಕ್ಕೆ ಬೇಡಿಕೆ ಹೆಚ್ಚಿದೆ.

ಚೇತರಿಕೆಯ ಹಾದಿ: ಕೋವಿಡ್ ಪೂರ್ವ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರತಿ ತಿಂಗಳು ಸರಾಸರಿ 30 ಕಾರ್ಯಕ್ರಮಗಳು ನಡೆಯುತ್ತಿದ್ದವು. 2019-20ನೇ ಸಾಲಿನಲ್ಲಿ 385 ಕಾರ್ಯಕ್ರಮಗಳು ನಡೆದಿವೆ. ಬಳಿಕ ಬೆರಳಣಿಕೆಯಷ್ಟು ಕಾರ್ಯಕ್ರಮಗಳು ಮಾತ್ರ ನಡೆದಿದ್ದವು. ಈಗ ರಂಗಮಂದಿರಗಳ ಕಾಯ್ದಿರಿಸುವಿಕೆ ಕೋವಿಡ್ ಪೂರ್ವದ ಸ್ಥಿತಿಗೆ ಮರಳುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷನ್ಮಂದಿರ ಸೇರಿ ಕೆಲ ಖಾಸಗಿ ಸಭಾಂಗಣಗಳ ನವೀಕರಣ ಪ್ರಕ್ರಿಯೆ ನಡೆಯುತ್ತಿದೆ. ಇದರಿಂದಾಗಿ ಕನ್ನಡ ಭವನದಲ್ಲಿರುವ ನಯನ ಸಭಾಂಗಣಕ್ಕೂ ಬೇಡಿಕೆ ಹೆಚ್ಚಿದೆ.

ಸರ್ಕಾರಿ ರಂಗಮಂದಿರಗಳ ಕಾಯ್ದಿರಿಸುವಿಕೆಯಲ್ಲಿ ಪಾರದರ್ಶಕತೆ ತರಲು 2022ರ ಏ.1ರಿಂದ ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಸರ್ಕಾರಿ ನಿಯಮಗಳ ಅನುಸಾರ ನಿಗದಿಯಾದ ಕಾರ್ಯಕ್ರಮ ನಿಂತಲ್ಲಿ, ಈಗ ಹಣ ಹಿಂತಿರುಗಿಸುವ ಬದಲು, ಮತ್ತೊಂದು ದಿನಾಂಕ ಆಯ್ಕೆಗೆ ಅವಕಾಶ ನೀಡಲಾಗುತ್ತಿದೆ. ಮೂರು ದಿನಗಳಿಗಿಂತಲೂ ಹೆಚ್ಚಿನ ಅವಧಿಗೆ ಸತತವಾಗಿ ಸಭಾಂಗಣ ಕಾಯ್ದಿರಿಸಲು ಅವಕಾಶವಿಲ್ಲ.

'ರಂಗಮಂದಿರಗಳನ್ನು ಮುಂಚಿತವಾಗಿ ಕಾಯ್ದಿರಿಸುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಕೆಲವೇ ದಿನಗಳಲ್ಲಿ ಕೋವಿಡ್ ಪೂರ್ವದ ಸ್ಥಿತಿ ತಲುಪಲಿದ್ದೇವೆ. ಸೆಪ್ಟೆಂಬರ್ ಅಂತ್ಯದವರೆಗೂ ವಾರಾಂತ್ಯ ಕಾಯ್ದಿರಿಸಲ್ಪಟ್ಟಿದೆ. ಅಕ್ಟೋಬರ್ ತಿಂಗಳ ಕಾಯ್ದಿರಿಸುವಿಕೆಯನ್ನೂ ಪ್ರಾರಂಭಿಸಲಾಗುವುದು' ಎಂದು ರವೀಂದ್ರ ಕಲಾಕ್ಷೇತ್ರದ ವ್ಯವಸ್ಥಾಪಕ ಬಿ.ಎಸ್. ಶಿವಪ್ರಕಾಶ್ ಅವರು ತಿಳಿಸಿದರು.



ರವೀಂದ್ರ ಕಲಾಕ್ಷೇತ್ರದ ಹೊರನೋಟ – ಪ್ರಜಾವಾಣಿ ಚಿತ್ರ

ಸರ್ಕಾರಿ ರಂಗಮಂದಿರದಲ್ಲಿ ಕಾಯ್ದಿರಿಸುವಿಕೆ

ರಂಗ ಮಂದಿರ	2022ರ ಆಗಸ್ಟ್	ಸೆಪ್ಟೆಂಬರ್
ರವೀಂದ್ರ ಕಲಾಕ್ಷೇತ್ರ	27	15
ನಯನ ಸಭಾಂಗಣ	22	15
ಸಾಂಸ್ಕೃತಿಕ ಸಮುಚ್ಚಯ	17	8

ಸರ್ಕಾರಿ ರಂಗಮಂದಿರದಲ್ಲಿ ಪ್ರದರ್ಶನಗಳು

ರಂಗ ಮಂದಿರ	2022ರ ಜೂನ್	ಜುಲೈ (26ರವರೆಗೆ)
ರವೀಂದ್ರ ಕಲಾಕ್ಷೇತ್ರ	17	14
ನಯನ ಸಭಾಂಗಣ	24	16
ಸಾಂಸ್ಕೃತಿಕ ಸಮುಚ್ಚಯ	12	19

* ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಇರುವ ರಂಗ ಮಂದಿರಗಳು

ದುಬಾರಿಯಾದ ಕಲಾ ಕೇಂದ್ರಗಳು

ಕೋವಿಡ್ ಕಾಣಿಸಿಕೊಂಡ ಬಳಿಕ ರಂಗಮಂದಿರಗಳ ದರಗಳಲ್ಲೂ ವ್ಯತ್ಯಾಸವಾಗುತ್ತಿದೆ. ನಿರ್ವಹಣಾ ವೆಚ್ಚವನ್ನು ಸರಿದೂಗಿಸಲು ಕೆಲ ರಂಗಮಂದಿರಗಳ ಬಾಡಿಗೆ ಹೆಚ್ಚಳ ಮಾಡಲಾಗುತ್ತಿದೆ. ಸರ್ಕಾರಿ ರಂಗಮಂದಿರಗಳ ಬಾಡಿಗೆಯೂ ಶೇ 10ರಿಂದ ಶೇ 20ರಷ್ಟು ಹೆಚ್ಚಳವಾಗಿದೆ.

ರವೀಂದ್ರ ಕಲಾಕ್ಷೇತ್ರಕ್ಕೆ ಒಂದು ಪಾಳಿಗೆ ₹ 10,900 (ನಾಟಕ ಪ್ರದರ್ಶನಕ್ಕೆ) ಪಾವತಿಸಬೇಕಿದೆ. ಇದರಲ್ಲಿ ₹ 5 ಸಾವಿರ ಠೇವಣಿಯೂ ಸೇರಿದ್ದು, ಕಾರ್ಯಕ್ರಮದ ಬಳಿಕ ಹಿಂದಿರುಗಿಸಲಾಗುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ₹ 12,080 ಪಾವತಿಸಬೇಕಿದೆ. ಖಾಸಗಿ ರಂಗಮಂದಿರಗಳನ್ನು ಮುಖ್ಯಸ್ಥರು ನವೀಕರಿಸಿ, ದರ ಹೆಚ್ಚಿಸುತ್ತಿದ್ದಾರೆ.

ಡಾ. ಅಂಬೇಡ್ಕರ್ ಭವನ, ಚೌಡಯ್ಯ ಸ್ಮಾರಕ ಭವನ, ಸೇಂಟ್ ಜಾನ್ ಆಡಿಟೋರಿಯಂ, ಕುವೆಂಪು ಕಲಾಕ್ಷೇತ್ರ, ಸರ್ ಪುಟ್ಟಣ್ಣಚೆಟ್ಟಿ ಪುರಭವನ, ಎಚ್.ಎನ್. ಕಲಾಕ್ಷೇತ್ರ, ಗುರುನಾನಕ್ ಭವನ ಹಾಗೂ ಎಡಿಎ ರಂಗಮಂದಿರ 500ಕ್ಕೂ ಅಧಿಕ ಆಸನಗಳ ಸಾಮರ್ಥ್ಯ ಹೊಂದಿವೆ. ಇಲ್ಲಿ ಬಾಡಿಗೆ ಒಂದು ಲಕ್ಷ ರೂಪಾಯಿವರೆಗೂ ಇದೆ.



ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಸೌತ್ ಇಂಡಿಯಾ ಗಾರ್ಮೆಂಟ್ಸ್ ಮೇಳಕ್ಕೆ ಚನ್ನಬಸಪ್ಪ ಆ್ಯಂಡ್ ಸನ್ಸ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಶಿವಕುಮಾರ್ ಮಂಗಳವಾರ ಚಾಲನೆ ನೀಡಿದರು

ಸೌತ್ ಇಂಡಿಯಾ ಗಾರ್ಮೆಂಟ್ಸ್ ಮೇಳಕ್ಕೆ ಚಾಲನೆ

ಬೆಂಗಳೂರು: ಸೌತ್ ಇಂಡಿಯಾ ಅಸೋಸಿಯೇಷನ್ ವತಿಯಿಂದ ಅರಮನೆ ಮೈದಾನದ ಪ್ರಿನ್ಸೆಸ್ ಶ್ರೇನ್‌ನಲ್ಲಿ ಆಯೋಜಿಸಿರುವ ಗಾರ್ಮೆಂಟ್ಸ್ ಮೇಳಕ್ಕೆ ಚನ್ನಬಸಪ್ಪ ಆ್ಯಂಡ್ ಸನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಶಿವಕುಮಾರ್ ಮಂಗಳವಾರ ಚಾಲನೆ ನೀಡಿದರು.

'ಮಂಗಳವಾರದಿಂದ ಮೂರು ದಿನ ನಡೆಯುವ ಮೇಳದಲ್ಲಿ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ರಾಜ್ಯಗಳ ವ್ಯಾಪಾರಿಗಳು ಪಾಲ್ಗೊಳ್ಳುತ್ತಿದ್ದಾರೆ. 100ಕ್ಕೂ ಹೆಚ್ಚು ಬ್ರ್ಯಾಂಡ್‌ನ ಸಿದ್ಧ ಉಡುಪುಗಳ ಮಳಿಗೆಗಳನ್ನು ತೆರೆಯಲಾಗಿದೆ' ಎಂದು ತಿಳಿಸಿದರು.

'ದೇಶೀಯ ಜವಳಿ ಉದ್ಯಮ ವಲಯವನ್ನು ಪ್ರೋತ್ಸಾಹಿಸುವ ಅಗತ್ಯವಿದೆ. ದೇಶೀಯವಾಗಿ ಉತ್ಪಾದನೆಯಾಗುವ ಬಟ್ಟೆಗಳನ್ನು ಖರೀದಿಸುವ ಮನಃಸ್ಥಿತಿ ಬೆಳೆಯಬೇಕು' ಎಂದರು.

ಕೇಂದ್ರ ಸರ್ಕಾರ ಎಲ್ಲಾ ಬಟ್ಟೆಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ವಿಧಿಸಬೇಕು' ಎಂದು ಸೌತ್ ಇಂಡಿಯಾ ಗಾರ್ಮೆಂಟ್ಸ್ ಉತ್ಪಾದಕರ ಸಂಘದ ಅಧ್ಯಕ್ಷ ಅನುರಾಗ್ ಸಿಂಗ್ಲಾ ಒತ್ತಾಯಿಸಿದರು.

ಜಿ.ಆರ್.ಅರ್ಕಾದಾಸ್, ನಟಿ ಕಾವ್ಯ ಶೆಟ್ಟಿ, ರಾಜೇಶ್ ಚಾಹವತ್, ನರೇಶ್ ಲಖನ್ ಪಾಲ್, ಕಿಶನ್ ಜೈನ್ ಇದ್ದರು.



ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ 20 ಬಸವ ಅಧ್ಯಯನ ಕೇಂದ್ರಗಳಿಗೆ ಶಿಕ್ಷಣತಜ್ಞ ಡಾ.ವೂಡೆ ಪಿ. ಕೃಷ್ಣ ಚಾಲನೆ ನೀಡಿದರು. ಶಿವರುದ್ರ ಸ್ವಾಮೀಜಿ, ಅರವಿಂದ ಜತ್ತಿ, ಎನ್‌.ಆರ್‌.ಪಂಡಿತಾರಾಧ್ಯ ಹಾಜರಿದ್ದರು

ಬಸವ ಅಧ್ಯಯನ ಕೇಂದ್ರಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬಸವಣ್ಣ ಅವರ ತತ್ವಗಳು ಬಹಳ ಸರಳ ಮತ್ತು ಸುಲಭವಾಗಿದ್ದು, ಇವುಗಳನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಂಡರೆ ದೊಡ್ಡ ಮಾರ್ಪಾಡು ಆಗಲಿದೆ ಎಂದು ಬೇಲಿಮಠ ಮಹಾಸಂಸ್ಥಾನದ ಶಿವರುದ್ರ ಸ್ವಾಮೀಜಿ ಅವರು ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ '20 ಬಸವ ಅಧ್ಯಯನ ಕೇಂದ್ರಗಳ' ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಎಲ್ಲ ಮಹಾನ್ ಪುರುಷರ ಚಿಂತನೆಗಳು ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರಬೇಕಾದರೆ ನಿರಂತರ ಅಧ್ಯಯನದ ಅಗತ್ಯವಿದೆ ಎಂದು ಹೇಳಿದರು.

ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ ಮಾತನಾಡಿದರು. ಶಿಕ್ಷಣ ತಜ್ಞ ಡಾ.ವೂಡೆ ಪಿ. ಕೃಷ್ಣ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಉಪಾಧ್ಯಕ್ಷ ಟಿ.ಎಸ್. ಹೆಂಜಾರಪ್ಪ, ಡಬ್ಲ್ಯು.ಎಚ್.ಅನಿಲ್ ಕುಮಾರ್, ಖಜಾಂಚಿ ಬಿ.ಎಂ.ಪಾರ್ಥಸಾರಥಿ, ಸಹಾಯಕ ಕಾರ್ಯದರ್ಶಿ ಎಂ.ಎಸ್. ನಟರಾಜ, ಟ್ರಸ್ಟಿ ಕೃಷ್ಣಸ್ವಾಮಿ, ಪ್ರಾಂಶುಪಾಲ ಡಾ.ಎಸ್.ಎನ್. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಲಿಂಗಾಯತ ಮಹಾ ಅಧಿವೇಶನ

ಬೀದರ್: 'ಜಾಗತಿಕ ಲಿಂಗಾಯತ ಮಹಾಸಭಾದಿಂದ ಬಸವಕಲ್ಯಾಣದಲ್ಲಿ ನವೆಂಬರ್ 25 ರಿಂದ 27ರವರೆಗೆ ಪ್ರಥಮ ರಾಷ್ಟ್ರೀಯ ಲಿಂಗಾಯತ ಮಹಾ ಅಧಿವೇಶನ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಹೇಳಿದರು.

ಇಲ್ಲಿಯ ಗಾಂಧಿಗಂಜ್‌ನ ಬಸವೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಜಾಗತಿಕ ಲಿಂಗಾಯತ ಮಹಾಸಭಾದಿಂದ ನಡೆದ ಸಭೆಯಲ್ಲಿ ಮಾತನಾಡಿದ ಅವರು, '900 ವರ್ಷಗಳ ಹಿಂದೆ ಬಸವಣ್ಣನವರು ನೀಡಿದ ಲಿಂಗಾಯತ ಧರ್ಮದ ಬಗ್ಗೆ ಲಿಂಗಾಯತರಲ್ಲಿ ಜಾಗೃತಿ ಮೂಡಿಸುವುದೇ ಮಹಾ ಅಧಿವೇಶನದ ಉದ್ದೇಶ. ದೇಶದ ವಿವಿಧೆಡೆಯ ಲಿಂಗಾಯತರು ಅಧಿವೇಶನದಲ್ಲಿ ಪಾಲ್ಗೊಳ್ಳುವರು' ಎಂದರು.

ಚಿತ್ರಾವಳಿ



ಕಾರ್ಗಿಲ್ ವಿಜಯ್ ದಿವಸದ ಅಂಗವಾಗಿ ಮಂಗಳವಾರ ನಗರದ ಇಂದಿರಾಗಾಂಧಿ ಮ್ಯೂಸಿಕಲ್ ಫೌಂಟೇನ್ ಪಾರ್ಕ್‌ನಲ್ಲಿರುವ ರಾಷ್ಟ್ರೀಯ ಸೇನಾ ಸ್ಮಾರಕದಲ್ಲಿ ರಕ್ಷಣಾ ಸಿಬ್ಬಂದಿ, ಯೋಧರು, ಹುತಾತ್ಮ ಯೋಧರ ಕುಟುಂಬದ ಸದಸ್ಯರು, ವಿದ್ಯಾರ್ಥಿಗಳು ಮತ್ತು ಎನ್‌ಸಿಸಿ ಕೆಡೆಟ್‌ಗಳು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿದರು –ಪ್ರಜಾವಾಣಿ ಚಿತ್ರ



ವಿಶ್ವ ಐವಿಎಫ್ ದಿನಾಚರಣೆ ಅಂಗವಾಗಿ ಓಯಸಿಸ್ ಫರ್ಟಿಲಿಟಿ ಆಸ್ಪತ್ರೆಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ವಾಕಥಾನ್‌ನಲ್ಲಿ ಆಸ್ಪತ್ರೆಯ ಸಿಬ್ಬಂದಿ 'ಬಂಜೆತನಕ್ಕೆ ಲಿಂಗಭೇದವಿಲ್ಲ'ವೆಂದು ಜಾಗೃತಿ ಮೂಡಿಸಿದರು.



ಉತ್ತರ ಕರ್ನಾಟಕ ಸ್ನೇಹಲೋಕ ಟ್ರಸ್ಟ್ ವತಿಯಿಂದ 2021–22ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಎಸ್‌.ಜೆ.ಆರ್‌. ಪ್ರೌಢಶಾಲೆಯಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ನಿವೃತ್ತ ಪೊಲೀಸ್ ಕಮಿಷನರ್ ಜ್ಯೋತಿ ಪ್ರಕಾಶ ಮಿರ್ಜಿ, ಟ್ರಸ್ಟ್‌ನ ಅಧ್ಯಕ್ಷ ಗಂಗಾಧರ ವಾಲಿ, ಅರುಣ ಯಾದವಾಡ ಇದ್ದಾರೆ.

ಈಜಿಪುರ–ಕೋರಮಂಗಲ ಮೇಲ್ಸೇತುವೆ: ಅರ್ಜಿ ವಿಲೇವಾರಿ

'ಭಿನ್ನಾಭಿಪ್ರಾಯ ಬಿಟ್ಟು ಕಾಮಗಾರಿ ಮುಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಜಿಪುರ ಹಾಗೂ ಕೋರಮಂಗಲ ಮಧ್ಯದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಗುತ್ತಿಗೆದಾರ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿ ನಡುವೆ ಯಾವುದೇ ತಕರಾರಿದ್ದರೂ ಇದೊಂದು ಸಾರ್ವಜನಿಕ ಹಿತಾಸಕ್ತಿ ಹೊಂದಿದ ಪ್ರಕರಣವಾಗಿದ್ದು, ಕಾಮಗಾರಿ ಕಾಲಮಿತಿಯಲ್ಲಿ ಪೂರ್ಣಗೊಳ್ಳಬೇಕಿದೆ' ಎಂದು ಹೈಕೋರ್ಟ್ ಅಭಿಪ್ರಾಯ ಪಟ್ಟಿದೆ.

ಕಾಮಗಾರಿ ವಿಳಂಬ ಪ್ರಶ್ನಿಸಿ ಕೋರಮಂಗಲ ನಿವಾಸಿ ಆದಿನಾರಾಯಣ ಶೆಟ್ಟಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಒಂದು ವಾರದಲ್ಲಿ ಕಂಪನಿ ಜೊತೆಗೆ ಸಭೆ ನಡೆಸಿ ಭಿನ್ನಾಭಿಪ್ರಾಯ ಪರಿಹರಿಸಿಕೊಳ್ಳಿ. ಮುಂದಿನ ಎರಡು ವಾರಗಳಲ್ಲಿ ಕಂಪನಿಗೆ ನೀಡಿರುವ ಗುತ್ತಿಗೆ ಮುಂದುವರಿಸಬೇಕೆ ಅಥವಾ ಹೊಸದಾಗಿ ಟೆಂಡರ್ ಕರೆಯಬೇಕೆ ಎಂಬ ಬಗ್ಗೆ ಸ್ವತಂತ್ರವಾಗಿ ನಿರ್ಣಯ ಕೈಗೊಳ್ಳಿ' ಎಂದು ಬಿಬಿಎಂಪಿಗೆ ನಿರ್ದೇಶಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

'ಕಾಮಗಾರಿ ಮುಂದುವರಿಸಲು ಅನುಮತಿ ನೀಡಿದರೆ ಕಾಮಗಾರಿ ವಿಳಂಬ ಮಾಡಿರುವುದಕ್ಕೆ ಕಂಪನಿ ವಿರುದ್ಧ ಈ ಹಿಂದೆ ದಾಖಲಿಸಿರುವ ಎಫ್‌ಐಆರ್ ಅನ್ನು ಬಿಬಿಎಂಪಿ ಹಿಂಪಡೆಯಬೇಕು' ಎಂದೂ ನಿರ್ದೇಶಿಸಿದೆ. ಅರ್ಜಿದಾರರ ಪರ ವಕೀಲ ಎಚ್. ಸುನಿಲ್ ಕುಮಾರ್ ಹಾಜರಿದ್ದರು.

ಪ್ರಕರಣವೇನು?: ನಗರದ ಈಜಿಪುರ ಜಂಕ್ಷನ್‌ನಿಂದ ಕೋರಮಂಗಲದ ಕೇಂದ್ರೀಯ ಸದನದವರೆಗಿನ 2.5 ಕಿ.ಮೀ ಉದ್ದದ ಮೇಲ್ಸೇತುವೆ ನಿರ್ಮಾಣಕ್ಕೆ ಕೇಂದ್ರ, ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿ ಸಹಭಾಗಿತ್ವದಲ್ಲಿ ಯೋಜನೆ ರೂಪಿಸಲಾಗಿತ್ತು. ಇದಕ್ಕಾಗಿ ಬಿಬಿಎಂಪಿ 2014ರಲ್ಲಿ ₹ 157.66 ಕೋಟಿ ಮೊತ್ತದ ಟೆಂಡರ್ ಕರೆದಿತ್ತು.

'ಒಪ್ಪಂದದ ಪ್ರಕಾರ 2019ರ ನವೆಂಬರ್ 4ಕ್ಕೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಆದರೆ, ಈವರೆಗೂ ಕಾಮಗಾರಿ ಪೂರ್ಣಗೊಂಡಿಲ್ಲ. ಸದ್ಯ ಕಾಮಗಾರಿ ಸ್ಥಗಿತಗೊಂಡಿದ್ದು, ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ' ಎಂದು ಆರೋಪಿಸಿ ಪಿಐಎಲ್ ಸಲ್ಲಿಸಲಾಗಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, ಕಾಮಗಾರಿ ವಿಳಂಬವನ್ನು ಆಕ್ಷೇಪಿಸಿ ಗುತ್ತಿಗೆ ರದ್ದುಪಡಿಸುವಂತೆ ಬಿಬಿಎಂಪಿ ಹಾಗೂ ಸರ್ಕಾರಕ್ಕೆ 2022ರ ಫೆಬ್ರುವರಿ 17ರಂದು ನಿರ್ದೇಶಿಸಿತ್ತು. ಇದರನ್ವಯ ಸರ್ಕಾರ 2022ರ ಮಾರ್ಚ್ 3 ರಂದು ಗುತ್ತಿಗೆ ರದ್ದುಪಡಿಸಿತ್ತು. ಅಂತೆಯೇ ಕಂಪನಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ನಂತರ ಕಂಪನಿಯು, ಹೈಕೋರ್ಟ್ ಮೊರೆಹೋಗಿ, 'ಅನುಮತಿ ನೀಡಿದರೆ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು' ಎಂದು ತಿಳಿಸಿತ್ತು. ಈ ಮನವಿ ಆಲಿಸಿದ ನ್ಯಾಯಪೀಠ, ಕಾಮಗಾರಿ ಮುಂದುವರಿಸಲು ಅನುಮತಿಸುವ ಬಗ್ಗೆ ಮರು ಪರಿಶೀಲಿಸುವಂತೆ ಬಿಬಿಎಂಪಿಗೆ ಸಲಹೆ ನೀಡಿತ್ತು.

ಕೆಎಸ್‌ಆರ್‌ಟಿಸಿ ಆಸ್ಪತ್ರೆ ಖಾಸಗೀಕರಣ: ಎಎಪಿ ಕಿಡಿ

ಬೆಂಗಳೂರು: 'ಜಯನಗರದಲ್ಲಿರುವ ಕೆಎಸ್‌ಆರ್‌ಟಿಸಿ ಆಸ್ಪತ್ರೆಯನ್ನು ಖಾಸಗೀಕರಣಗೊಳಿಸಲು ಸಂಸದ ತೇಜಸ್ವಿ ಸೂರ್ಯ ಯತ್ನಿಸಿದ್ದಾರೆ' ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ದೂರಿದ್ದಾರೆ.

'ಹಲವು ವರ್ಷಗಳಿಂದ ಕೆಎಸ್‌ಆರ್‌ಟಿಸಿ ಆಸ್ಪತ್ರೆಯಲ್ಲಿ ನೌಕರರು ಅಗತ್ಯ ಚಿಕಿತ್ಸೆಗಳನ್ನು ಪಡೆಯುತ್ತಿದ್ದಾರೆ. ಸಾರಿಗೆ ನೌಕರರಿಗೆ ಇರುವ ಏಕೈಕ ಆಸ್ಪತ್ರೆ ಇದಾಗಿದೆ. ಇನ್ನೂ ಒಂದು ಆಸ್ಪತ್ರೆ ತೆರೆದು ಹೆಚ್ಚಿನ ಸೌಲಭ್ಯ ಕಲ್ಪಿಸುವ ಬಗ್ಗೆ ಸರ್ಕಾರ ಯೋಚಿಸಬೇಕು. ಆದರೆ, ಸಂಸದ ತೇಜಸ್ವಿ ಸೂರ್ಯ ಅವರು ಈಗಿರುವ ಆಸ್ಪತ್ರೆಯನ್ನೂ ಖಾಸಗೀಕರಣದ ಹೆಸರಿನಲ್ಲಿ ಮಾರಾಟ ಮಾಡಲು ಹೊರಟಿರುವುದು ಖಂಡನೀಯ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕಮಿಷನ್ ಆಸೆಗಾಗಿ ತೇಜಸ್ವಿ ಸೂರ್ಯ ಈ ಆಸ್ಪತ್ರೆಯನ್ನು ಖಾಸಗಿಯವರಿಗೆ ನೀಡಲು ಮುಂದಾಗಿದ್ದಾರೆ. ಇದರಿಂದಾಗಿ ಅಲ್ಲಿರುವ ನೌಕರರು ಕೆಲಸ ಕಳೆದುಕೊಳ್ಳುವ ಅಪಾಯವಿದೆ. ಸಾರಿಗೆ ನೌಕರರು ಸಣ್ಣಪುಟ್ಟ ಚಿಕಿತ್ಸೆಗೂ ದುಬಾರಿ ಬೆಲೆ ತೆರಬೇಕಾದ ಸ್ಥಿತಿ ಬಂದರೂ ಆಶ್ಚರ್ಯವಿಲ್ಲ. ಸರ್ಕಾರವು ಹಲವು ವರ್ಷಗಳಿಂದ ಕಾಪಾಡಿಕೊಂಡಿರುವ ಸಂಸ್ಥೆಗಳನ್ನು ಬಿಜೆಪಿ ಒಂದೊಂದಾಗಿಯೇ ಮಾರಾಟ ಮಾಡುತ್ತಿದೆ' ಎಂದು ತಿಳಿಸಿದ್ದಾರೆ. 'ಕೆಎಸ್‌ಆರ್‌ಟಿಸಿ ನೌಕರರು ಏಳನೇ ವೇತನ ಶ್ರೇಣಿಗಾಗಿ ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಸರಿಯಾದ ಪಿಂಚಣಿ, ವಿಮಾ ಸೌಲಭ್ಯ ಇಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ತುಟಿ ಬಿಚ್ಚದ ಸಂಸದ ತೇಜಸ್ವಿ ಸೂರ್ಯ ಅವರು ಕೆಎಸ್‌ಆರ್‌ಟಿಸಿ ಆಸ್ಪತ್ರೆಯನ್ನು ಮಾರಾಟ ಮಾಡಲು ನಿರ್ಧರಿಸಿರುವುದು ನಾಚಿಕೆಗೇಡಿನ ಸಂಗತಿ. ಈ ನಿರ್ಧಾರದಿಂದ ಹಿಂದೆ ಸರಿಯಬೇಕು' ಎಂದರು.

'ಸುವಿಧಾ ತಂತ್ರಾಂಶ ಬಳಕೆ ಕಡ್ಡಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದ ವಿವಿಧ ನಿಗಮಗಳ ಮೂಲಕ ಅನುಷ್ಠಾನಗೊಳಿಸುವ ಯೋಜನೆಗಳ ಫಲಾನುಭವಿಗಳ ಆಯ್ಕೆಯನ್ನು ಕಡ್ಡಾಯವಾಗಿ ಸುವಿಧಾ ತಂತ್ರಾಂಶದ ಮೂಲಕವೇ ನಡೆಸಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಂಗಳವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲ ನಿಗಮಗಳೂ ಸುವಿಧಾ ತಂತ್ರಾಂಶದಲ್ಲೇ ಅರ್ಜಿಗಳನ್ನು ಆಹ್ವಾನಿಸಬೇಕು. ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ ಮಾಡುವುದು ಕಡ್ಡಾಯ. ಯೋಜನೆಗಳನ್ನು ಅತ್ಯಂತ ಪಾರದರ್ಶಕವಾಗಿ ಅನುಷ್ಠಾನಕ್ಕೆ ತರಬೇಕು' ಎಂದು ಸೂಚಿಸಿದರು.

ಇಲಾಖೆಯ ವ್ಯಾಪ್ತಿಯ ವಿವಿಧ ನಿಗಮಗಳ ಮೂಲಕ ಗಂಗಾ ಕಲ್ಯಾಣ ಯೋಜನೆಯಡಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ 11,000 ಕೊಳವೆ ಬಾವಿಗಳನ್ನು ಕೊರೆಸುವ ಗುರಿ ಹೊಂದಲಾಗಿದೆ. ಪ್ರತಿ ಜಿಲ್ಲೆಗೆ ಕನಿಷ್ಠ 61, ಶಾಸಕರ ವಿವೇಚನಾ ಕೋಟಾದಡಿ ತಲಾ 41 ಕೊಳವೆ ಬಾವಿಗಳನ್ನು ಕೊರೆಸುವ ಗುರಿ ನಿಗದಿಪಡಿಸಲಾಗುವುದು. ಎಲ್ಲ ಯೋಜನೆಗಳಲ್ಲೂ ಶೇಕಡ 100ರಷ್ಟು ಗುರಿ ಸಾಧನೆಗೆ ಪೂರಕವಾಗಿ ಕೆಲಸ ಮಾಡಬೇಕು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ, ಆಯುಕ್ತ ಕೆ.ಎ. ದಯಾನಂದ ಹಾಗೂ ವಿವಿಧ ಅಭಿವೃದ್ಧಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಸಭೆಯಲ್ಲಿ ಉಪಸ್ಥಿತರಿದ್ದರು.

ನಾಲ್ವರಿಗೆ ಒಂದೇ ಫ್ಲ್ಯಾಟ್ ಮಾರಾಟ: ನಿರ್ದೇಶಕ ವಶಕ್ಕೆ

ಬೆಂಗಳೂರು: ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್ ಅನ್ನು ನಾಲ್ವರಿಗೆ ಮಾರಾಟ ಮಾಡಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದ್ದ ಆರೋಪದಡಿ ಹಿರೇನ್ ವಾಹೇನ್ ಕಂಪನಿ ನಿರ್ದೇಶಕ ವಾಹೆಂಗಬಮ್ ಲಲಿತ್ ಸಿಂಗ್ ಎಂಬುವರನ್ನು ಜಯನಗರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಫ್ಲ್ಯಾಟ್ ಖರೀದಿಸಿ ವಂಚನೆಗೀಡಾಗಿದ್ದ ವ್ಯಕ್ತಿಯೊಬ್ಬರು ದೂರು ನೀಡಿದ್ದಾರೆ. ಕೆಲ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮುಖ್ಯಮಂತ್ರಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಬಿಬಿಎಂಪಿ ಆಯುಕ್ತ ಹಾಗೂ ಇತರೆ ಪ್ರಭಾವಿಗಳೆಲ್ಲರೂ ತನಗೆ ಗೊತ್ತು ಎನ್ನುತ್ತಿದ್ದ ಆರೋಪಿ, ಗ್ರಾಹಕರನ್ನು ಬೆದರಿಸುತ್ತಿದ್ದನೆಂದು ಗೊತ್ತಾಗಿದೆ’ ಎಂದೂ ತಿಳಿಸಿವೆ.

ಬೆಸ್ಕಾಂ: 2024ಕ್ಕೆ ಎಲೆಕ್ಟ್ರೊ ಮೀಟರ್‌ಗಳನ್ನು ಡಿಜಿಟಲ್ ಮೀಟರ್‌ಗೆ ಬದಲಿಸುವ ಕಾರ್ಯ ಪೂರ್ಣ

‘ಗ್ರಾಹಕಸ್ನೇಹಿ ಡಿಜಿಟಲ್ ಮೀಟರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂನಿಂದ ಗ್ರಾಹಕರು ವಿದ್ಯುತ್ ಪ್ರಮಾಣದ ನಿಖರ ಮಾಹಿತಿ ತಿಳಿದುಕೊಳ್ಳಲು ಡಿಎಲ್‌ಎಂಎಸ್ ಸ್ಟ್ಯಾಟಿಕ್ (ಡಿವೈಸ್ ಲ್ಯಾಂಗ್ವೇಜ್ ಮೆಸೇಜ್ ಸ್ಪೆಸಿಫಿಕೇಷನ್) ಡಿಜಿಟಲ್ ಮೀಟರ್ ಅಳವಡಿಸಲಾಗುತ್ತಿದೆ.

ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶದ ವ್ಯಾಪ್ತಿಯಲ್ಲಿ 17,68,000 ಎಲೆಕ್ಟ್ರೊ ಮೆಕ್ಯಾನಿಕಲ್ ಮೀಟರ್‌ಗಳನ್ನು ಡಿಎಲ್‌ಎಂಎಸ್ ಸ್ಟ್ಯಾಟಿಕ್ ಡಿಜಿಟಲ್ ಮೀಟರ್‌ಗೆ ಉಚಿತವಾಗಿ ಬದಲಾವಣೆ ಮಾಡುವ ಕಾರ್ಯ ಆರಂಭಗೊಂಡಿದೆ.

ರಾಜಾಜಿನಗರ, ರಾಜರಾಜೇಶ್ವರಿನಗರ, ಇಂದಿರಾನಗರ ಮತ್ತು ವೈಟ್‌ಫೀಲ್ಡ್ ವಿಭಾಗಗಳಲ್ಲಿ ಈಗಾಗಲೇ 16 ಸಾವಿರ ಸಿಂಗಲ್ ಫೇಸ್ ಮತ್ತು 3 ಫೇಸ್ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಲಾಗಿದೆ. ನಿತ್ಯ 700ರಿಂದ 900 ಮೀಟರ್‌ಗಳನ್ನು ಅಳವಡಿಸಲಾಗುತ್ತಿದೆ. ಬೆಸ್ಕಾಂನ ಒಂದು ವಿಭಾಗದಲ್ಲಿ ಮೀಟರ್ ಅಳವಡಿಕೆ ಕಾರ್ಯ ಪೂರ್ಣಗೊಂಡ ನಂತರವೇ ಇನ್ನೊಂದು ವಿಭಾಗದಲ್ಲಿ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳಲಾಗುವುದು. 2024ರ ವೇಳೆಗೆ ಎಲ್ಲ ಎಲೆಕ್ಟ್ರೊ ಮೀಟರ್‌ಗಳನ್ನು ಡಿಜಿಟಲ್ ಮೀಟರ್‌ಗೆ ಬದಲಿಸುವ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಬೆಸ್ಕಾಂನ ಮಾಪಕ ಮತ್ತು ವಾಣಿಜ್ಯ ವಿಭಾಗದ ಪ್ರಧಾನ ವ್ಯವಸ್ಥಾಪಕ ಪಿ.ರಂಗಸ್ವಾಮಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ನಿಖರ ಮಾಹಿತಿ ತಿಳಿದುಕೊಳ್ಳಲು ಅಳವಡಿಕೆ
- 17,68,000 ಎಲೆಕ್ಟ್ರೊ ಮೆಕ್ಯಾನಿಕಲ್ ಮೀಟರ್‌ಗಳ ಬದಲಾವಣೆ
- ಉಚಿತವಾಗಿ ಮೀಟರ್ ಬದಲಾವಣೆ



ಬೆಸ್ಕಾಂನ ಡಿಎಲ್‌ಎಂಎಸ್ ಸ್ಟ್ಯಾಟಿಕ್ ಡಿಜಿಟಲ್ ಮೀಟರ್

ಡಿಎಲ್‌ಎಂಎಸ್ ಸ್ಟ್ಯಾಟಿಕ್ ಮೀಟರ್ ಗ್ರಾಹಕಸ್ನೇಹಿಯಾಗಿದ್ದು, ಸಿಂಗಲ್ ಫೇಸ್ ಅಥವಾ 3 ಫೇಸ್ ಮೀಟರ್ ಅಳವಡಿಸಿಕೊಂಡಿರುವ ಗ್ರಾಹಕರು ವಿದ್ಯುತ್ ವೊಲ್ಟೇಜ್ ಮತ್ತು ಬಳಕೆ ಕುರಿತು ಮಾಹಿತಿ ಪಡೆಯಬಹುದಾಗಿದೆ. 10 ವರ್ಷಗಳ ಹಿಂದೆ ಅಳವಡಿಸಿರುವ ಎಲೆಕ್ಟ್ರೊ ಮೆಕ್ಯಾನಿಕಲ್ ಮೀಟರ್‌ಗಳನ್ನು ಬದಲಿಸಲಾಗುತ್ತಿದೆ ಎಂದಿದ್ದಾರೆ.

ಗ್ರಾಹಕರು ತಾವು ಎರಡು ವರ್ಷ ಬಳಸಿದ ವಿದ್ಯುತ್ ಪ್ರಮಾಣದ ವಿವರಗಳನ್ನು ಬೆಸ್ಕಾಂ ಕಚೇರಿಯಿಂದ ಪಡೆದು, ಅದನ್ನು ವಿದ್ಯುತ್ ಬಿಲ್ ಜೊತೆ ತುಲನೆ ಮಾಡಬಹುದಾದ ಅನುಕೂಲ ಡಿಜಿಟಲ್ ಮೀಟರ್‌ನಿಂದ ದೊರೆಯಲಿದೆ. ಬೆಂಗಳೂರು ನಗರದ ನಂತರ ಬೆಂಗಳೂರು ಗ್ರಾಮಾಂತರ ಪ್ರದೇಶ ಮತ್ತು ಚಿತ್ರದುರ್ಗ-ದಾವಣಗೆರೆ ಪ್ರದೇಶ ವಲಯದಲ್ಲಿ ಡಿಜಿಟಲ್ ಮೀಟರ್ ಅಳವಡಿಸಲಾಗುವುದು ಎಂದರು.

ಡಿಜಿಟಲ್ ಮೀಟರ್ ಅಳವಡಿಕೆ ಕಾರ್ಯದ ಗುತ್ತಿಗೆಯನ್ನು ಎರಡು ಖಾಸಗಿ ಕಂಪನಿಗಳಿಗೆ ನೀಡಲಾಗಿದ್ದು, ಎಲ್ಲಾ ವಿಭಾಗಗಳಲ್ಲಿ ಹಂತ ಹಂತವಾಗಿ ಅಳವಡಿಸಲಾಗುವುದು. ಈ ಯೋಜನೆಯ ಒಟ್ಟು ಮೊತ್ತ ₹285.16 ಕೋಟಿ. ಸಿಂಗಲ್ ಫೇಸ್ ಡಿಜಿಟಲ್ ಮೀಟರ್‌ಗೆ ₹933 ಮತ್ತು 3 ಫೇಸ್ ಮೀಟರ್‌ಗೆ ₹2,300 ವೆಚ್ಚವಾಗಲಿದ್ದು, ಅದನ್ನು ಬೆಸ್ಕಾಂ ಭರಿಸಲಿದೆ.

ಮಾರಾಟ ಮಳಿಗೆ: ಹೊಸ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರಿಗೆ ಅನುಕುಲವಾಗಲು ಬೆಸ್ಕಾಂನ ಎಲ್ಲಾ ವಿಭಾಗಗಳಲ್ಲಿ ಸಿಂಗಲ್ ಫೇಸ್ ಮತ್ತು 3 ಫೇಸ್ ಡಿಜಿಟಲ್ ಮೀಟರ್‌ಗಳ ಮಾರಾಟ ಮಳಿಗೆಗಳನ್ನು ತೆರೆಯಲು ನಿರ್ಧರಿಸಲಾಗಿದೆ ಎಂದರು.

ಸುದ್ದಿ 2 ನಿಮಿಷ

ರಾಘವೇಂದ್ರ ಬ್ಯಾಂಕ್: ವಿಚಾರಣೆ ಮುಂದೂಡಿಕೆ

ಬೆಂಗಳೂರು: ‘ಗುರು ರಾಘವೇಂದ್ರ ಬ್ಯಾಂಕ್ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ನೀಡಿರುವ ಆದೇಶಗಳ ಅನುಪಾಲನಾ ವರದಿಯನ್ನು ಸಲ್ಲಿಸಿ’ ಎಂದು ಹೈಕೋರ್ಟ್ ಅರ್ಜಿದಾರರಿಗೆ ಸೂಚಿಸಿದೆ.

ಈ ಸಂಬಂಧ ಬಸವನಗುಡಿಯ ಕೆ.ಆರ್. ನರಸಿಂಹಮೂರ್ತಿ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವೆಂಕಟೇಶ್ ಪಿ. ದಳವಾಯಿ, ವರದಿ ಸಲ್ಲಿಕೆಗೆ ಎರಡು ವಾರಗಳ ಕಾಲಾವಕಾಶ ಕೋರಿದರು.

‘ಕೋರ್ಟ್ ಆದೇಶಗಳ ಪಾಲನೆ ಬಗ್ಗೆ ವರದಿ ಸಲ್ಲಿಸಿ’ ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಪಿಇಎಸ್: ಉದ್ಯಮಶೀಲತಾ ಕೌಶಲ ಪ್ರದರ್ಶನ



ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ವೆಂಚರ್ ಲ್ಯಾಬ್‌ನ ವಿದ್ಯಾರ್ಥಿಗಳು ವಾಣಿಜ್ಯೋದ್ಯಮದಲ್ಲಿ ತಮ್ಮ ಉದ್ಯಮಶೀಲತಾ ಕೌಶಲ ಹಾಗೂ ಸ್ಟಾರ್ಟ್‌ಅಪ್‌ಗಳನ್ನು ಪ್ರದರ್ಶಿಸಿದರು.

ಕುಲಾಧಿಪತಿ ಪ್ರೊ.ಎಂ.ಆರ್.ದೊರೆಸ್ವಾಮಿ ಮಾತನಾಡಿ, ’ಉದಯೋನ್ಮುಖ ಉದ್ಯಮಿಗಳನ್ನು ಗುರುತಿಸುವ ಗುರಿಯ ಜೊತೆಗೆ ವೆಂಚರ್ ಲ್ಯಾಬ್ ಸ್ಥಾಪಿಸಲಾಗಿದೆ. ಕ್ಯಾಂಪಸ್ ಆಧಾರಿತ ಕಲ್ಪನೆ ಹುಡುಕಲು ಸಹಾಯ ಮಾಡಲಿದೆ’ ಎಂದರು.

ಕೊಕ್ರಿಯೇಟ್‌ನ ಸಹ ಸಂಸ್ಥಾಪಕ ಸುರೇಶ್ ನರಸಿಂಹ ಮಾತನಾಡಿ, ‘ಪಿಇಎಸ್ ವೆಂಚರ್ ಲ್ಯಾಬ್‌ನಲ್ಲಿ ನಾವು ವಿದ್ಯಾರ್ಥಿ ಉದ್ಯಮಿಗಳಿಗೆ ತಮ್ಮ ಸ್ಟಾರ್ಟ್‌ಅಪ್ ಕಲ್ಪನೆಯ ಹಂತದಿಂದ ಬೆಳೆಸಲು ಅನುವು ಮಾಡಿಕೊಡುವ ಸಂಘಟಿತ, ಪೂರಕ ವ್ಯವಸ್ಥೆ ನಿರ್ಮಿಸಿದ್ದೇವೆ’ ಎಂದು ಹೇಳಿದರು.

ಪ್ರತ್ಯೇಕ ಅಪಘಾತ: ಮೂವರ ಸಾವು

ಬೆಂಗಳೂರು: ನಗರದ ಮೂರು ಕಡೆ ಸೋಮವಾರ ರಾತ್ರಿ ಹಾಗೂ ಭಾನುವಾರ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಮೂವರು ಮೃತಪಟ್ಟಿದ್ದಾರೆ.

‘ವೆಂಕಟೇಶ್ (65), ಮಂಜುನಾಥ್ (27) ಹಾಗೂ ವೃದ್ಧೆ ಚಿನ್ನಪಿಳ್ಳೈ (72) ಮೃತರು. ಅಪಘಾತಗಳ ಬಗ್ಗೆ ಮಲ್ಲೇಶ್ವರ, ಯಶವಂತಪುರ ಹಾಗೂ ಮೈಕೊ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸರು ಹೇಳಿದರು.

ಪಾದಚಾರಿಗೆ ಗುದ್ದಿದ ಕಾರು: ‘ನಿವೃತ್ತ ಉದ್ಯೋಗಿ ವೆಂಕಟೇಶ್, ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿರುವ ಒರಾಯನ್ ಮಾಲ್ ಎದುರು ರಸ್ತೆ ದಾಟುತ್ತಿದ್ದರು. ಅತಿ ವೇಗವಾಗಿ ಬಂದ ಕಾರು ಅವರಿಗೆ ಗುದ್ದಿತ್ತು. ತೀವ್ರ ಗಾಯಗೊಂಡು ವೆಂಕಟೇಶ್ ಮೃತಪಟ್ಟಿದ್ದಾರೆ’ ಎಂದು ಮಲ್ಲೇಶ್ವರ ಸಂಚಾರ ಪೊಲೀಸರು ಹೇಳಿದರು.

‘ಉದ್ಯಮಿ ದಿವೀಜ್ ಎಂಬಾತ ಕಾರು ಚಲಾಯಿಸುತ್ತಿದ್ದ. ಈತನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಕಾರು ಜಪ್ತಿ ಮಾಡಿ ಚಾಲಕನನ್ನು ಬಂಧಿಸಲಾಗಿದೆ. ಈತ ಮದ್ಯ ಕುಡಿದಿದ್ದ ಮಾಹಿತಿ ಇದ್ದು, ವೈದ್ಯಕೀಯ ಪರೀಕ್ಷೆ ಮಾಡಿಸಲಾಗಿದೆ’ ಎಂದು ತಿಳಿಸಿದರು.

ದೇವಸ್ಥಾನಕ್ಕೆ ಹೊರಟಿದ್ದಾಗ ಅಪಘಾತ: ‘ಲಗ್ಗೆರೆ ನಿವಾಸಿ ಮಂಜುನಾಥ್ ಹಾಗೂ ಯಲ್ಲಮ್ಮ ಎಂಬುವರು ಬೈಕ್‌ನಲ್ಲಿ ತಮಿಳುನಾಡಿನ ತಿರುವಣ್ಣಾಮಲೈ ದೇವಸ್ಥಾನಕ್ಕೆ ಹೊರಟಿದ್ದರು. ಬೆಳಿಗ್ಗೆ 4.30ರ ಸುಮಾರಿಗೆ ಹೊರವರ್ತುಲ ರಸ್ತೆಯಲ್ಲಿ ಅತೀ ವೇಗವಾಗಿ ಬಂದ ವಾಹನವೊಂದು ಬೈಕ್‌ಗೆ ಡಿಕ್ಕಿ ಹೊಡೆದಿದೆ’ ಎಂದು ಮೈಕೊ ಲೇಔಟ್ ಸಂಚಾರ ಪೊಲೀಸರು ಹೇಳಿದರು.

‘ರಸ್ತೆಗೆ ಬಿದ್ದು ತೀವ್ರ ಗಾಯಗೊಂಡ ಮಂಜುನಾಥ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಯಲ್ಲಮ್ಮ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದರು.

ಬಿಎಂಟಿಸಿ ಬಸ್ ಗುದ್ದಿ ವೃದ್ಧೆ ಸಾವು: ‘ಅಂಬೇಡ್ಕರ್ ನಗರದ ನಿವಾಸಿಯಾದ ವೃದ್ಧೆ ಚಿನ್ನಪಿಳ್ಳೈ (72), ಆರ್‌ಎಂಸಿ ಯಾರ್ಡ್ ಎದುರು ರಸ್ತೆ ದಾಟುತ್ತಿದ್ದರು. ಇವರಿಗೆ ಬಿಎಂಟಿಸಿ ಬಸ್ ಗುದ್ದಿತ್ತು. ಕೆಳಗೆ ಬಿದ್ದ ವೃದ್ಧೆ ಮೇಲೆಯೇ ಬಸ್ಸಿನ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ವೃದ್ಧೆ ಮೃತಪಟ್ಟಿದ್ದಾರೆ’ ಎಂದು ಯಶವಂತಪುರ ಸಂಚಾರ ಪೊಲೀಸರು ಹೇಳಿದರು.

‘ನಿತ್ಯವೂ ಎಪಿಎಂಸಿ ಆವರಣಕ್ಕೆ ಬರುತ್ತಿದ್ದ ವೃದ್ಧೆ, ಮಳಿಗೆಗಳ ಎದುರು ಬಿದ್ದಿರುತ್ತಿದ್ದ ಈರುಳ್ಳಿ ಆಯ್ದುಕೊಂಡು ಹೋಗುತ್ತಿದ್ದರು. ಸೋಮವಾರ ರಾತ್ರಿಯೂ ಈರುಳ್ಳಿ ತೆಗೆದುಕೊಂಡು ಮನೆಗೆ ವಾಪಸು ಹೋಗುತ್ತಿದ್ದಾಗ ಅವಘಡ ಸಂಭವಿಸಿದೆ. ಅಪಘಾತದಿಂದಾಗಿ ಸ್ಥಳದಲ್ಲಿ ಸೇರಿದ್ದ ಜನ, ಬಸ್ಸಿನ ಗಾಜು ಒಡೆದು ಆಕ್ರೋಶ ಹೊರಹಾಕಿದರು’ ಎಂದು ತಿಳಿಸಿದರು.

ಆಂಧ್ರಪ್ರದೇಶದಿಂದ ಅಕ್ರಮ ಸಾಗಣೆ: ಹೆಸರಘಟ್ಟದಲ್ಲಿ ಸಂಗ್ರಹ

ನೀರಿನ ಸಂಪಿನಲ್ಲಿ ರಕ್ತಚಂದನ ಬಚ್ಚಿಟ್ಟು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟದ ಮನೆಯ ನೀರಿನ ಸಂಪಿನಲ್ಲಿ ರಕ್ತಚಂದನ ಬಚ್ಚಿಟ್ಟು ಮಾರುತ್ತಿದ್ದ ಜಾಲ ಭೇದಿಸಿರುವ ಬ್ಯಾಟರಾಯನಪುರ ಪೊಲೀಸರು, ಆರೋಪಿ ವಿನೋದ್ ಎಂಬುವರನ್ನು ಬಂಧಿಸಿದ್ದಾರೆ.

‘ಮೈಸೂರು ರಸ್ತೆಯ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬಳಿಯ ನ್ಯೂ ಟಿಂಬರ್ ಬಡಾವಣೆಯಲ್ಲಿ ಆರೋಪಿ ವಿನೋದ್ ಹಾಗೂ ಸಹಚರ ಅಕ್ರಮವಾಗಿ ರಕ್ತಚಂದನ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಗಿತ್ತು. ಅಜಯ್ ಓಡಿಹೋದ. ವಿನೋದ್ ಸಿಕ್ಕಿಬಿದ್ದ’ ಎಂದು ಪೊಲೀಸರು ಹೇಳಿದರು.

‘ತಮಿಳುನಾಡಿನ ವಿನೋದ್, ರಕ್ತಚಂದನ ಮಾರಲೆಂದೇ ನಗರಕ್ಕೆ ಆಗಾಗ ಬಂದು ಹೋಗುತ್ತಿದ್ದ. ಬಂಧಿತ ವಿನೋದ್ ನೀಡಿದ್ದ ಮಾಹಿತಿ ಆಧರಿಸಿ ₹2.68 ಕೋಟಿ ಮೌಲ್ಯದ 1,693 ಕೆ.ಜಿ ರಕ್ತಚಂದನ ತುಂಡುಗಳನ್ನು ಜಪ್ತಿ ಮಾಡಲಾಗಿದೆ. ರಕ್ತಚಂದನ ಅಕ್ರಮ ಸಾಗಣೆ ಹಾಗೂ ಮಾರಾಟದಲ್ಲಿ ಭಾಗಿಯಾಗಿದ್ದ ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ’ ಎಂದೂ ತಿಳಿಸಿದರು.

ಹೆಸರಘಟ್ಟದಲ್ಲಿ ಸಂಗ್ರಹ: ‘ಜಾಲದ ಪ್ರಮುಖ ಆರೋಪಿಗಳು ರಕ್ತಚಂದನವನ್ನು ಆಂಧ್ರಪ್ರದೇಶದಿಂದ ಬೆಂಗಳೂರಿಗೆ ತರುತ್ತಿದ್ದರು. ವಿನೋದ್ ಹಾಗೂ ಇತರರು ರಕ್ತ ಚಂದನವನ್ನು ನಗರದಲ್ಲಿ ಮಾರಾಟ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಹೆಸರಘಟ್ಟ ಬಳಿಯ ತೋಟದ ಮನೆಯೊಂದರ ನೀರಿನ ಸಂಪಿನಲ್ಲಿ ರಕ್ತಚಂದನ ತುಂಡುಗಳನ್ನು ವಿನೋದ್ ಬಚ್ಚಿಡುತ್ತಿದ್ದ. ಅಲ್ಲಿಂದಲೇ ಗ್ರಾಹಕರಿಗೆ ರಕ್ತಚಂದನ ತುಂಡುಗಳನ್ನು ಪೂರೈಕೆ ಮಾಡುತ್ತಿದ್ದ. ವಿನೋದ್ ಬಂಧನ ವಾಗುತ್ತಿದ್ದಂತೆ ತೋಟದ ಮನೆ ಮೇಲೆ ದಾಳಿ ಮಾಡಿ ರಕ್ತಚಂದನ ಜಪ್ತಿ ಮಾಡಲಾಯಿತು’ ಎಂದು ತಿಳಿಸಿದರು.



ಬ್ಯಾಟರಾಯನಪುರ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿರುವ ರಕ್ತಚಂದನ ತುಂಡುಗಳು

ಅಪರಾಧ ಸುದ್ದಿ

‘ಮೊಬೈಲ್ ಸುಲಿಗೆ, ಕಳ್ಳತನ: ದೂರು ದಾಖಲು ಕಡ್ಡಾಯ’

ಬೆಂಗಳೂರು: ‘ಸಾರ್ವಜನಿಕರ ಮೊಬೈಲ್ ಕಳ್ಳತನ ಹಾಗೂ ಸುಲಿಗೆಯಾದರೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕೆಂದು ಪೊಲೀಸರಿಗೆ ಸೂಚನೆ ನೀಡಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಕಳ್ಳತನ ಹಾಗೂ ಸುಲಿಗೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇಂಥ ಪ್ರಕರಣಗಳ ಪತ್ತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ’ ಎಂದರು.

‘ಗುರುತಿನ ಚೀಟಿಗಳು ಹಾಗೂ ಇತರೆ ಯಾವುದೇ ದಾಖಲೆಗಳು ಕಳೆದುಹೋದರೆ ‘ಇ-ಲಾಸ್ಟ್’ ಆ್ಯಪ್ ಮೂಲಕ ದೂರು ನೀಡಬಹುದು. ಆದರೆ, ಮೊಬೈಲ್ ಸುಲಿಗೆ ಹಾಗೂ ಕಳ್ಳತನ ನಡೆದರೆ ಸಾರ್ವಜನಿಕರು ಠಾಣೆಗೆ ಬಂದು ದೂರು ನೀಡಬೇಕು. ಇಂಥ ಪ್ರಕರಣಗಳನ್ನು ಪೊಲೀಸರು ಕಡ್ಡಾಯವಾಗಿ ದಾಖಲಿಸಿಕೊಳ್ಳಲಿದ್ದಾರೆ. ನಿರ್ಲಕ್ಷ್ಯ ತೋರಿದರೆ ಪೊಲೀಸರ ವಿರುದ್ಧವೂ ಶಿಸ್ತುಕ್ರಮ ಜರುಗಿಸಲಾಗುವುದು’ ಎಂದು ಹೇಳಿದರು.



ನೇತಾಜಿ ಜನ್ಮದಿನೋತ್ಸವ

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ವತಿಯಿಂದ ನೇತಾಜಿ ಸುಭಾಷ್ ಚಂದ್ರ ಭೋಸ್ ಅವರ 125ನೇ ಜನ್ಮ ದಿನೋತ್ಸವದ ಅಂಗವಾಗಿ ಎಸ್.ಜೆ.ಪಿ. ಕಾಲೇಜಿನ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಮೈಸೂರು ರಾಜ್ಯ ಕರ್ನಾಟಕ ಆಗಿದ್ದು ಮರೆತ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರು’ ರಾಜ್ಯವನ್ನು ‘ಕರ್ನಾಟಕ’ ಎಂದು ನಾಮಕರಣ ಮಾಡಲು ವಿಧಾನಸಭೆಯಲ್ಲಿ ಐತಿಹಾಸಿಕ ನಿರ್ಣಯ ತೆಗೆದುಕೊಂಡು ಜುಲೈ 26ಕ್ಕೆ 50 ವರ್ಷ ತುಂಬಿದ್ದು, ಈ ಐತಿಹಾಸಿಕ ದಿನವನ್ನು ರಾಜ್ಯ ಸರ್ಕಾರ ಮರೆತಿರುವುದು ಅಕ್ಷಮ್ಯ ಎಂದು ಮಾಜಿ ಶಾಸಕ ವಾಟಾಳ್ ನಾಗರಾಜ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘1972ರಲ್ಲಿ ಈ ಘಟನೆ ನಡೆದದ್ದು. ಆಗ ಮೈಸೂರನ್ನು ಕರ್ನಾಟಕ ರಾಜ್ಯ ಎಂದು ಬದಲಿಸಲು ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಮನಸ್ಸು ಇರಲಿಲ್ಲ. ಅಂದಿನ ವಿವಿಧ ಪಕ್ಷಗಳ ಮುಖಂಡರ ಒತ್ತಾಯಕ್ಕೆ ಅವರು ಮಣಿಯಲೇಬೇಕಾಯಿತು ಮತ್ತು ವಿಧಾನಸಭೆಯಲ್ಲಿ ಕರ್ನಾಟಕ ಎಂದು ಹೆಸರು ಬದಲಿಸುವ ನಿರ್ಣಯ ಮಂಡಿಸಿದರು’ ಎಂದರು.

ಈ ನಿರ್ಣಯ ತೆಗೆದುಕೊಂಡಿದ್ದಕ್ಕೆ ಅರಸು ಅವರ ಮೇಲೆ ನಾವು ಹಲವು ಶಾಸಕರು ಸೇರಿ ಮಲ್ಲಿಗೆ ಹೂವಿನ ವೃಷ್ಟಿ ಮಾಡಿದ್ದೆವು. ಆ ಸಂದರ್ಭದಲ್ಲಿ ‘ಪ್ರಜಾವಾಣಿ’ ಪತ್ರಿಕೆ ವಿಸ್ತೃತವಾದ ವಿಶ್ಲೇಷಣೆಯನ್ನು ಬರೆದಿತ್ತು. ಆದರೆ ಇಂದಿನ ಬೊಮ್ಮಾಯಿ ಸರ್ಕಾರಕ್ಕೆ ಅದರ ನೆನಪೇ ಇಲ್ಲ. ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿಷಯಗಳನ್ನು ಬಿಟ್ಟರೆ ನಾಡು– ನುಡಿಯ ವಿಚಾರಗಳ ಬಗ್ಗೆ ಏನೂ ಮಾಡುತ್ತಿಲ್ಲ. 50 ವರ್ಷಗಳ ನೆನಪಿನಲ್ಲಿ ವಿಧಾನಮಂಡಲದ ವಿಶೇಷ ಅಧಿವೇಶನ ಕರೆಯಬೇಕಿತ್ತು ಎಂದು ಅವರು ಹೇಳಿದರು.

ಭಾರತಾಂಬೆಗೆ ಗೀತ–ನೃತ್ಯ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ‘ಅಮೃತಭಾರತಿ’ ಕಾರ್ಯಕ್ರಮದಲ್ಲಿ ಭಾರತಾಂಬೆಗೆ ಗೀತ–ನೃತ್ಯ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ‘ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಆರ್ಯವೈಶ್ಯ ಸಮಾಜದ ಕೊಡುಗೆ ಅಪಾರ. ಸಿನಿಮಾ, ಸಾಹಿತ್ಯ, ವ್ಯಾಪಾರ, ಶಿಕ್ಷಣ ಸೇರಿ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಅಸ್ತಿತ್ವ ಕಂಡುಕೊಂಡಿದ್ದಾರೆ. ಅನೇಕ ಸಮಾಜಮುಖಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವ ಈ ಸಮುದಾಯ, ಜನಸೇವಾ ಸಮುದಾಯವಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ರಾಗಶ್ರೀ ತಂಡ, ಸ್ವರ ಮಾಧುರ್ಯ ತಂಡ, ಸಂಗೀತ ಲಹರಿ, ಸಾಯಿ ಸ್ವರ ರಾಗಾಲಯ, ಸ್ವರ ಭಾರತಿ, ಸುರಾಗ ತಂಡ, ಆರ್ಯವೈಶ್ಯ ವನಿತಾ ಸಂಘ ಹಾಗೂ ವಾಸವಿ ಯುವತಿಯರ ಸಂಘದವರು ವೃಂದ ಗಾಯನ ಪ್ರಸ್ತುತಪಡಿಸಿದರು. ಕಲಾವಿದೆ ರಶ್ಮಿ ಹರ್ಷ ಅವರು ಗಾಯನದ ವೇಳೆ ಭಾರತಾಂಬೆಯನ್ನು ಚಿತ್ರಿಸಿದರು.

ನೃತ್ಯ ಶೃಂಖಲ ತಂಡ, ಗಿರಿವಾಸವಿ ಆನಂದ ನೃತ್ಯ ತಂಡ, ಮೇದಿನಿ ನೃತ್ಯ ನಿಕೇತನ ಹಾಗೂ ನವ್ಯ ನರ್ತನ ತಂಡದವರು ಸಮೂಹ ನೃತ್ಯ ಪ್ರದರ್ಶಿಸಿದರು. ವಾಸವಿ ಸಾಂಸ್ಕೃತಿಕ ಸೌರಭ ತಂಡ ಕಿರು ನಾಟಕ ಪ್ರದರ್ಶಿಸಿತು.



ವೃಂದ ಗಾಯನದ ವೇಳೆ ಕಲಾವಿದೆ ರಶ್ಮಿ ಹರ್ಷ ಅವರು ಭಾರತಾಂಬೆಯ ಚಿತ್ರ ಬಿಡಿಸಿದರು – ಪ್ರಜಾವಾಣಿ ಚಿತ್ರ

ಬೇಡಿಕೆ ಈಡೇರಿಕೆ: ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿ ಕ್ಷೇಮಾಭಿವೃದ್ಧಿ, ನೀರು ಸರಬರಾಜು ವಿಭಾಗಗಳಲ್ಲಿ ಗುತ್ತಿಗೆ ಮತ್ತು ಹೊರ ಗುತ್ತಿಗೆಯಡಿ ವಿವಿಧ ವೃಂದಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪೌರ ನೌಕರರ ಬೇಡಿಕೆಗಳನ್ನು ಹಂತ– ಹಂತವಾಗಿ ಈಡೇರಿಸುವುದಾಗಿ ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ಭರವಸೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಪೌರ ನೌಕರರ ಸಂಘ, ನಗರ ಸ್ಥಳೀಯ ಸಂಸ್ಥೆಗಳ ನೀರು ಸರಬರಾಜು ನೌಕರರ ಸಂಘದ ಪ್ರತಿನಿಧಿಗಳ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಪೌರ ನೌಕರರ ಸಂಘವು 17 ಬೇಡಿಕೆಗಳನ್ನು ಮುಂದಿಟ್ಟಿದೆ. ನೀರು ಪೂರೈಕೆ, ಸ್ವಚ್ಛತೆ, ಲೋಡರ್ಸ್, ಸ್ವಚ್ಛತಾ ಮೇಲ್ವಿಚಾರಣಾ, ಚಾಲಕರು ಸೇರಿ ವಿವಿಧ ವೃಂದಗಳಲ್ಲಿ ಕೆಲಸ ಮಾಡುತ್ತಿರುವವರ ಸೇವೆ ಕಾಯಂ ಮಾಡಬೇಕು ಎಂಬುದು ಪ್ರಮುಖ ಬೇಡಿಕೆ. ಇವೆಲ್ಲವುಗಳ ಬಗ್ಗೆ ಮುಖ್ಯಮಂತ್ರಿ ಜತೆ ಮಾತನಾಡುತ್ತೇನೆ. ಆದಷ್ಟು, ಬೇಗ ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗುವುದು. ಆದರೆ ಅದಕ್ಕೆ ಗಡುವು ನಿಗದಿ ಮಾಡಲು ಸಾಧ್ಯವಿಲ್ಲ’ ಎಂದರು.

ಗುತ್ತಿಗೆ, ಹೊರಗುತ್ತಿಗೆ ಪದ್ಧತಿ ರದ್ದುಗೊಳಿಸಿ ನೌಕರರ ಸೇವೆ ಕಾಯಂಗೊಳಿಸುವ ವಿಚಾರವನ್ನು ಕಾನೂನು ಮತ್ತು ಆರ್ಥಿಕ ಇಲಾಖೆ ಜತೆ ಚರ್ಚಿಸಬೇಕಾಗುತ್ತದೆ ಎಂದು ನಾಗರಾಜ್ ಹೇಳಿದರು. ಸಭೆಯಲ್ಲಿ ನಗರಾಭಿವೃದ್ಧಿ ಕಾರ್ಯದರ್ಶಿ ಅಜಯ್ ನಾಗಭೂಷಣ್, ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶಿವಸ್ವಾಮಿ ಮತ್ತಿತರರು ಇದ್ದರು.



ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಪದಾಧಿಕಾರಿಗಳು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಎಂಟಿಬಿ ನಾಗರಾಜ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. (ಎಡದಿಂದ) ಸಂಘದ ಸಂಘಟನಾ ಕಾರ್ಯದರ್ಶಿ ರಮೇಶ್, ರಾಜ್ಯ ಉಪಾಧ್ಯಕ್ಷ ಮಂಡ್ಯ ನಾಗರಾಜ್, ರಾಜ್ಯ ಕಾರ್ಯಾಧ್ಯಕ್ಷ ಮುರಳಿ, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ರಾಜ್ಯಾಧ್ಯಕ್ಷ ಪ್ರಭಾಕರ್, ದಾವಣಗೆರೆ ಜಿಲ್ಲಾಧ್ಯಕ್ಷ ಗೋವಿಂದರಾಜು ಮತ್ತು ಸಾಂಸ್ಕೃತಿಕ ಕಾರ್ಯದರ್ಶಿ ಮಾಯಣ್ಣ ಇದ್ದರು

ಪೀಣ್ಯ ಮೇಲ್ಸೇತುವೆಯಲ್ಲಿ ಸರಣಿ ಅಪಘಾತ

ಬೆಂಗಳೂರು: ಬಿಡಿಎ ಅಧ್ಯಕ್ಷರೂ ಆದ ಶಾಸಕ ಎಸ್.ಆರ್. ವಿಶ್ವನಾಥ್ ಜನ್ಮದಿನದ ಶುಭಾಶಯ ಕೋರುವ ಫ್ಲೆಕ್ಸ್ ತೆರವುಗೊಳಿಸುವ ವೇಳೆ ಪೀಣ್ಯ ಮೇಲ್ಸೇತುವೆಯಲ್ಲಿ ಮಂಗಳವಾರ ಸರಣಿ ಅಪಘಾತ ಸಂಭವಿಸಿದೆ.

‘ನಗರದಿಂದ ತುಮಕೂರಿಗೆ ಹೋಗುವ ಪೀಣ್ಯ ಮೇಲ್ಸೇತುವೆಯಲ್ಲಿ ಮಧ್ಯಾಹ್ನ 12 ಗಂಟೆ ಸುಮಾರಿಗೆ ಅಪಘಾತ ನಡೆದಿದೆ. ಮೂರು ಕಾರು ಹಾಗೂ ಗೂಡ್ಸ್ ವಾಹನ ಜಖಂಗೊಂಡಿವೆ. ಅಪಘಾತದ ಬಗ್ಗೆ ಯಾರೊಬ್ಬರೂ ಸದ್ಯಕ್ಕೆ ದೂರು ನೀಡಿಲ್ಲ’ ಎಂದು ಸಂಚಾರ ಪೊಲೀಸರು ಹೇಳಿದರು.

‘ತುಮಕೂರು ರಸ್ತೆಯ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ವಿಶ್ವನಾಥ್ ಜನ್ಮದಿನದ ಶುಭಾಶಯ ಕೋರುವ ಫ್ಲೆಕ್ಸ್ ಅಳವಡಿಸಲಾಗಿತ್ತು. ಹೆದ್ದಾರಿ ಪ್ರಾಧಿಕಾರದ ಗಸ್ತು ಸಿಬ್ಬಂದಿ ಮಂಗಳವಾರ ಬೆಳಿಗ್ಗೆಯಿಂದ ಫ್ಲೆಕ್ಸ್ ತೆರವು ಕಾರ್ಯಾಚರಣೆ ಆರಂಭಿಸಿದ್ದರು.’

‘ಪೀಣ್ಯ ಮೇಲ್ಸೇತುವೆ ಬದಿಯಲ್ಲಿ ಗಸ್ತು ವಾಹನ ನಿಲ್ಲಿಸಿ ಫ್ಲೆಕ್ಸ್ ತೆಗೆಯುತ್ತಿದ್ದರು. ಇದೇ ವೇಳೆ ನಗರದಿಂದ ತುಮಕೂರಿನತ್ತ ಹೊರಟಿದ್ದ ಕಾರು, ಗಸ್ತು ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ಅದರ ಹಿಂದೆಯೇ ಬಂದ ಕಾರುಗಳು ಹಾಗೂ ಗೂಡ್ಸ್ ವಾಹನ ಸಹ ಒಂದಕ್ಕೊಂದು ಗುದ್ದಿದ್ದವು.’

‘ಅಪಘಾತದಿಂದ ಆಕ್ರೋಶಗೊಂಡ ವಾಹನಗಳ ಮಾಲೀಕರು ರಸ್ತೆಯಲ್ಲಿ ಗಸ್ತು ವಾಹನ ನಿಲ್ಲಿಸಿದ್ದ ಪ್ರಾಧಿಕಾರದ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು. ಇದರಿಂದಾಗಿ ಕೆಲ ಕಾಲ ಸ್ಥಳದಲ್ಲಿ ದಟ್ಟಣೆ ಉಂಟಾಗಿತ್ತು. ಎಲ್ಲ ವಾಹನ ತೆರವು ಮಾಡಿದ ಮೇಲೆ ಸಂಚಾರ ಸ್ಥಿತಿ ಯಥಾಸ್ಥಿತಿಗೆ ಮರಳಿತು’ ಎಂದೂ ಪೊಲೀಸರು ತಿಳಿಸಿದರು.



ಮಂಗಳವಾರ ರಾತ್ರಿ 10.12ಕ್ಕೆ ಎಂ.ಜಿ.ರಸ್ತೆಯಿಂದ ಹೊರಟ ಮೆಟ್ರೊ ರೈಲು ತಾಂತ್ರಿಕ ತೊಂದರೆಯಿಂದಾಗಿ ಸರ್ ಎಂ. ವಿಶ್ವೇಶ್ವರಯ್ಯ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಇಳಿಸಿತು. 7 ನಿಮಿಷದ ಬಳಿಕ ಬಂದ ಮತ್ತೊಂದು ರೈಲಿನಲ್ಲಿ ಪ್ರಯಾಣಿಕರನ್ನು ಕೆಂಗೇರಿ ಮಾರ್ಗದ ಕಡೆಗೆ ಕಳುಹಿಸಲಾಯಿತು. ಸುಮಾರು 300 ಪ್ರಯಾಣಿಕರು ಇದ್ದರು

ಸಂಶೋಧನೆಗೆ ಅವಕಾಶ

ಬೆಂಗಳೂರು: ರೇವಾ ವಿಶ್ವವಿದ್ಯಾಲಯದ ಪ್ರದರ್ಶನ ಕಲೆ ಮತ್ತು ಭಾರತೀಯ ಅಧ್ಯಯನ ಶಾಸ್ತ್ರ ವಿಭಾಗವು 8 ಶಾಸ್ತ್ರೀಯ ನೃತ್ಯ ಪ್ರಕಾರಗಳ ಪೈಕಿ, 5 ಶಾಸ್ತ್ರೀಯ ನೃತ್ಯ ಪ್ರಕಾರಗಳಾದ ಭರತನಾಟ್ಯ, ಕೂಚಿಪುಡಿ, ಒಡಿಸ್ಸಿ, ಮೋಹಿನಿಯಾಟ್ಟಂ ಮತ್ತು ಕಥಕ್ ನೃತ್ಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ (ಆನ್‌ಲೈನ್), ಸರ್ಟಿಫಿಕೇಟ್ (ಆನ್‌ಲೈನ್) ಕೋರ್ಸ್‌ಗಳಲ್ಲದೆ ಈ ಎಲ್ಲ ವಿಭಾಗಗಳಲ್ಲಿ ಸಂಶೋಧನೆ ನಡೆಸುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ಮತ್ತು ಆಸಕ್ತರಿಗೆ ಕಲ್ಪಿಸಿದೆ.

ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ ಶೈಲಿಗಳಲ್ಲಿ ಹಾಗೂ ನಾಟಕ ವಿಭಾಗದಲ್ಲಿ ಸರ್ಟಿಫಿಕೇಟ್ ಡಿಪ್ಲೊಮಾ ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಅವಕಾಶ ನೀಡಿದೆ. ಈ ಎಲ್ಲ ವಿಭಾಗಗಳಲ್ಲಿ ಪರಿಣತ ಅಧ್ಯಾಪಕರನ್ನು ನೇಮಕ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರತಿಭೆ ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗುವುದು ಎಂದು ಅಧ್ಯಯನ ವಿಭಾಗದ ಪ್ರಕಟಣೆ ತಿಳಿಸಿದೆ.

ಭಾರತೀಯ ಅಧ್ಯಯನ ಶಾಸ್ತ್ರ ವಿಭಾಗದಲ್ಲಿ ಇಂಡಾಲಜಿ ಡಿಪ್ಲೊಮಾ ಮತ್ತು ಇಂಡಾಲಜಿ ಸ್ನಾತಕೋತ್ತರ ಪದವಿ ಮತು ಡಿಪ್ಲೊಮಾ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. **ಹೆಚ್ಚಿನ ಮಾಹಿತಿಗೆ:** 98860 62843 ಹಾಗೂ 98866 73452 ಸಂಪರ್ಕಿಸಬಹುದು.

ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ದುಂಡು ಮೇಜಿನ ಚರ್ಚೆ

‘ಮಧ್ಯಂತರ ಆದೇಶದಿಂದ ಹೋರಾಟಕ್ಕೆ ಸ್ಫೂರ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೈಂಗಿಕ ಕಾರ್ಮಿಕರ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ಆದೇಶ ನಮ್ಮ ಭವಿಷ್ಯದ ಹೋರಾಟಕ್ಕೆ ಬಾಗಿಲು ತೆರೆದಂತಾಗಿದೆ. ಚಳವಳಿಗೆ ಸ್ಫೂರ್ತಿ ಸಿಕ್ಕಿದೆ’ ಎಂದು ರೀಚ್‌ಲಾ ಸಂಸ್ಥೆಯ ಸ್ಥಾಪಕ ಬಿ.ಟಿ. ವೆಂಕಟೇಶ್ ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ಲೈಂಗಿಕ ಕಾರ್ಮಿಕರ ಹಾಗೂ ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ದುಂಡು ಮೇಜಿನ ಚರ್ಚೆಯಲ್ಲಿ ಮಾತನಾಡಿ, ‘ಅಂತಿಮ ತೀರ್ಪಿಗೆ ಸಮುದಾಯವು ಕಾಯುತ್ತಿದೆ. ಮಧ್ಯಂತರ ಆದೇಶದಲ್ಲೂ ವೃತ್ತಿಯ ಬಗ್ಗೆ ಕೆಲವು ಗೊಂದಲಗಳಿವೆ. ವೃತ್ತಿ ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ. ಎಲ್ಲ ವೃತ್ತಿಯಂತೆ ಅದು ಸಹ ವೃತ್ತಿ. ದೈಹಿಕ ಶ್ರಮದ ಕೆಲಸ. ಬೇರೆ ವೃತ್ತಿಗಳಿಗೂ ದೈಹಿಕ ಶ್ರಮ ಅಗತ್ಯ ಅಲ್ಲವೇ? ಎಂದ ಅವರು, ಲೈಂಗಿಕ ಅಲ್ಪಸಂಖ್ಯಾತರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಅವರೂ ಮನುಷ್ಯರು. ಅನಿವಾರ್ಯ ಹಾಗೂ ಹಸಿವಿನ ಕಾರಣಕ್ಕೆ ಈ ವೃತ್ತಿಗೆ ಬಂದಿದ್ದಾರೆ’ ಎಂದು ಹೇಳಿದರು.

ಪರ್ಯಾಯ ಕಾನೂನು ವೇದಿಕೆಯ ಸಂಯೋಜಕಿ ಆರ್. ಪೂರ್ಣ ಮಾತನಾಡಿ, ’ಸಂವಿಧಾನದ ಪ್ರಕಾರ ಲೈಂಗಿಕ ಕಾರ್ಯಕರ್ತರಿಗೆ ಕಾನೂನಿನ ರಕ್ಷಣೆ, ಬಲವಿದೆ. ಇವರನ್ನು ಪೊಲೀಸರು ಗೌರವದಿಂದ ನಡೆಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಆದೇಶದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ. ದುರುದ್ದೇಶದಿಂದ ಅವರನ್ನು ಶೋಷಿಸುವಂತಿಲ್ಲ‘ ಎಂದರು.

ಒಪ್ಪಿತ ಲೈಂಗಿಕ ಕ್ರಿಯೆಯಲ್ಲಿ ಭಾಗವಹಿಸುವ ಕಾರ್ಯಕರ್ತೆಯರ ಮೇಲೆ ಅಪರಾಧಿಕ ಕ್ರಮ ತೆಗೆದುಕೊಳ್ಳುವಂತಿಲ್ಲ. ಒಂದು ವೇಳೆ ದೌರ್ಜನ್ಯಕ್ಕೆ ಒಳಗಾದರೆ 357 ‘ಸಿ’ ಅಡಿಯಲ್ಲಿ ಸಂತ್ರಸ್ತರಿಗೆ ನೀಡಲಾಗುವ ಎಲ್ಲ ಸೌಲಭ್ಯಗಳನ್ನೂ ಇವರಿಗೂ ನೀಡಬೇಕು. ಆದೇಶದಲ್ಲೂ ಇದನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ದಾಳಿಯಾದ ವೇಳೆ ಲೈಂಗಿಕ ಕಾರ್ಯಕರ್ತೆಯರನ್ನು ಪೊಲೀಸರು ಬಂಧಿಸಲು ಅವಕಾಶ ಇಲ್ಲ ಎಂದು ಹೇಳಿದರು.

ವಕೀಲ ಅರವಿಂದ್ ಮಾತನಾಡಿ, ’ವೃತ್ತಿ ಗೊಂದಲವು ಅಂತಿಮ ತೀರ್ಪಿನಲ್ಲಿ ಬಗೆಹರಿಯಲಿದೆ. ಈ ಮಧ್ಯಂತರ ಆದೇಶದ ಆಧಾರದಲ್ಲಿಯೇ ಭವಿಷ್ಯದ ಹೋರಾಟ ರೂಪಿಸಬೇಕು. ಲೈಂಗಿಕ ಅಲ್ಪಸಂಖ್ಯಾತರಿಗೆ ಪೊಲೀಸರು ಚಿತ್ರಹಿಂಸೆ ನೀಡುವಂತಿಲ್ಲ‘ ಎಂದರು.

ಸಾಧನಾ ಮಹಿಳಾ ಸಂಘದ ಗೀತಾ, ‘ಈ ಆದೇಶ ಬರುವುದಕ್ಕೂ ಮೊದಲು ಸಾಕಷ್ಟು ಕಷ್ಟ ಅನುಭವಿಸುವ ಸ್ಥಿತಿಯಿತ್ತು. ಲಾಠಿ, ಬೂಟಿನ ಏಟು ಕೊಟ್ಟು, ಖಾರದ ಪುಡಿ ಹಾಕಿ ಪೊಲೀಸರು ಹಿಂಸಿಸುತ್ತಿದ್ದರು’ ಎಂದು ಅಳಲು ತೋಡಿಕೊಂಡರು.

ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ, ಲೈಂಗಿಕ ಕಾರ್ಮಿಕರ ಹಕ್ಕುಗಳ ಹೋರಾಟಗಾರ್ತಿ ಸುಧಾ ಹಾಜರಿದ್ದರು.



ನಗರದಲ್ಲಿ ಸೋಮವಾರ 'ಒಂದೆಡೆ' ಆಯೋಜಿಸಿದ್ದ "ಲೈಂಗಿಕ ಕಾರ್ಮಿಕರ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಸಮುದಾಯದ ಕುರಿತು ದುಂಡು ಮೇಜಿನ ಚರ್ಚೆ"ಯಲ್ಲಿ ಪರ್ಯಾಯ ಕಾನೂನು ವೇದಿಕೆ ಸಂಯೋಜಕಿ ಪೂರ್ಣ (ಎಡದಿಂದ ಐದನೆಯವರು) ಮಾತನಾಡಿದರು. (ಎಡದಿಂದ) ನಿವೃತ್ತ ವಕೀಲ ಬಿ.ಟಿ ವೆಂಕಟೇಶ್, ವಕೀಲ ಅರವಿಂದ ನಾರಾಯಣ್, ಮಹಿಳಾ ಹೋರಾಟಗಾರ್ತಿ ಗೀತಾ, ಲೈಂಗಿಕ ಕಾರ್ಮಿಕರ ಹಕ್ಕುಗಳ ಹೋರಾಟಗಾರ್ತಿ ಸುಧಾ ಮತ್ತು ಜಾಗತಿಕ ವಿಶ್ಲೇಷಕಿ ಆಸಿಂಧ್ಯ ಇದ್ದರು ಪ್ರಜಾವಾಣಿ ಚಿತ್ರ

‘ಏರೋ ಇಂಡಿಯಾ 2023’ಕ್ಕೆ ಸಿದ್ಧತೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ವಾಯುನೆಲೆಯಲ್ಲಿ ಮುಂದಿನ ಫೆಬ್ರುವರಿಯಲ್ಲಿ ‘ಏರೋ ಇಂಡಿಯಾ–2023’ ವೈಮಾನಿಕ ಪ್ರದರ್ಶನ ನಡೆಯುವ ನಿರೀಕ್ಷೆ ಇದ್ದು, ರಾಜ್ಯ ಸರ್ಕಾರ ಪೂರಕ ಸಿದ್ಧತೆ ಆರಂಭಿಸಿದೆ. ಸಂಚಾರ ದಟ್ಟಣೆ ನಿಯಂತ್ರಣ, ವಾಹನ ನಿಲುಗಡೆಗೆ ಸ್ಥಳ ನಿಗದಿ, ವ್ಯವಸ್ಥಿತವಾಗಿ ಬಸ್ ಸಂಚಾರ ಕಲ್ಪಿಸಲು ಈಗಿನಿಂದಲೇ ತಯಾರಿ ಆರಂಭವಾಗಿದೆ.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ಬಿಬಿಎಂಪಿ, ಬಿಎಂಟಿಸಿ, ಭಾರತೀಯ ವಾಯುಪಡೆ ಮತ್ತು ಸಂಚಾರ ಪೊಲೀಸರ ಜತೆ ಇದೇ 22ರಂದು ಉನ್ನತಮಟ್ಟದ ಸಭೆ ನಡೆಸಿರುವ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಸಿದ್ಧತೆ ಕುರಿತು ನಿರ್ದೇಶನಗಳನ್ನು ನೀಡಿದ್ದಾರೆ. ವಿವಿಧ ಇಲಾಖೆಗಳು, ಸಂಸ್ಥೆಗಳಿಗೆ ಜವಾಬ್ದಾರಿ ಹಂಚಿಕೆಯನ್ನೂ ಮಾಡಿದ್ದಾರೆ.

20,000 ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡುವುದಾಗಿ ವಾಯುಪಡೆ ಅಧಿಕಾರಿಗಳು ತಿಳಿಸಿದ್ದಾರೆ. ವಾಯುಪಡೆ ಕೇಂದ್ರದಲ್ಲಿನ ಎರಡು, ಗಡಿ ಭದ್ರತಾ ಪಡೆ ಕ್ಯಾಂಪಸ್, ಜಕ್ಕೂರು ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಆವರಣ, ಅರಮನೆ ಮೈದಾನ, ಹೆಬ್ಬಾಳದ ಗಾಂಧಿ



ಏರೋ ಇಂಡಿಯಾ 2021 (ಸಂಗ್ರಹ ಚಿತ್ರ)

ಕೃಷಿ ವಿಜ್ಞಾನ ಕೇಂದ್ರದ ಆವರಣಗಳಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡುವ ಯೋಜನೆಯನ್ನು ವಾಯುಪಡೆ ಅಧಿಕಾರಿಗಳು ರೂಪಿಸಿದ್ದಾರೆ.

ವೈಮಾನಿಕ ಪ್ರದರ್ಶನ ಸ್ಥಳದ ಸಮೀಪದ ವಾಹನ ನಿಲುಗಡೆ ಸ್ಥಳಗಳಿಗೆ ಹೆಚ್ಚು ದರದ ಟಿಕೆಟ್ ಖರೀದಿಸಿದವರ ವಾಹನಗಳಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ಟಿಕೆಟ್‌ನಲ್ಲೇ ವಾಹನ ನಿಲುಗಡೆ ಶುಲ್ಕವನ್ನೂ ವಿಧಿಸಲಾಗುತ್ತದೆ ಎಂಬ ಮಾಹಿತಿಯನ್ನು ವಾಯುಪಡೆ ಅಧಿಕಾರಿಗಳು ಹಂಚಿಕೊಂಡಿದ್ದಾರೆ.

ವಾಹನ ದಟ್ಟಣೆ ತಪ್ಪಿಸುವುದಕ್ಕಾಗಿ ವೈಮಾನಿಕ ಪ್ರದರ್ಶನದ ಅವಧಿಯಲ್ಲಿ ಯಲಹಂಕ ವಾಯುನೆಲೆಗೆ ಹೆಚ್ಚಿನ ಬಸ್‌ಗಳನ್ನು ಓಡಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಬಿಎಂಟಿಸಿಗೆ ಸೂಚಿಸಲಾಗಿದೆ. ವಾಹನ ನಿಲುಗಡೆ ಸ್ಥಳಗಳಿಂದ ಜನರನ್ನು ಕರೆದೊಯ್ಯುವುದಕ್ಕೆ ಬಸ್‌ಗಳನ್ನು ಓಡಿಸುವಂತೆಯೂ ಸೂಚನೆ ನೀಡಲಾಗಿದೆ. ಜನದಟ್ಟಣೆಯನ್ನು ತಪ್ಪಿಸುವುದಕ್ಕಾಗಿ ಪ್ರತಿದಿನ ಬೆಳಿಗ್ಗೆ 9.30ಕ್ಕೆ ಮೊದಲ ಪ್ರದರ್ಶನ ಆರಂಭಿಸಿ, 10.30ರಿ.ದ 11 ಗಂಟೆಯೊಳಗೆ ಮುಕ್ತಾಯಗೊಳಿಸುವಂತೆ ವಾಯಪಡೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಪರ್ಯಾಯ ಮಾರ್ಗಗಳ ಸಿದ್ಧತೆ: ವಾಯನೆಲೆಯನ್ನು ಸಂಪರ್ಕಿಸಲು 15 ಪರ್ಯಾಯ ಮಾರ್ಗಗಳನ್ನು ಗುರುತಿಸಿರುವ ಸಂಚಾರ ವಿಭಾಗದ ಪೊಲೀಸರು, ಈ ರಸ್ತೆಗಳಲ್ಲಿ ಗುಂಡಿ ಮುಚ್ಚುವುದು ಮತ್ತು ಡಾಂಬರೀಕರಣ ಕಾಮಗಾರಿ ಕೈಗೊಳ್ಳುವಂತೆ ಕೋರಿದ್ದಾರೆ. ಈ ಕೆಲಸವನ್ನು ನಿರ್ವಹಿಸುವಂತೆ ಬಿಬಿಎಂಪಿ ಹಾಗೂ ಲೋಕೋಪಯೋಗಿ ಇಲಾಖೆಗೆ ನಿರ್ದೇಶನ ನೀಡಲಾಗಿದೆ.

ನಗರ ಪೊಲೀಸ್ ಕಮಿಷನರ್ ಪ್ರತಾಪ್‌ರೆಡ್ಡಿ, ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ಮೂಲಸೌಲಭ್ಯ ಅಬೌಭಭಿವೃದ್ಧಿ ಇಲಾಖೆ ಜಂಟಿ ಕಾರ್ಯದರ್ಶಿ ಹೆಪ್ಸಿಬಾ ರಾಣಿ ಕೊರ್ಲಪಾಟಿ, ಬಿಬಿಎಂಪಿ ವಿಶೇಷ ಆಯುಕ್ತ ಎಸ್. ರಂಗಪ್ಪ, ಜಂಟಿ ಆಯುಕ್ತೆ ಪೂರ್ಣಿಮಾ, ಯಲಹಂಕ ವಾಯುನೆಲೆಯ ಗ್ರೂಪ್ ಕ್ಯಾಪ್ಟನ್ ಎಸ್. ಗಿರೀಶ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ನಾಲ್ವರು ಇಒಗಳ ಮೇಲೆ ಶಿಸ್ತುಕ್ರಮಕ್ಕೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೂಚನೆ

ಧರ್ಮರಾಯ ದೇವಾಲಯದ ಆಸ್ತಿ ಒತ್ತುವರಿ

● ಆರ್. ಮಂಜುನಾಥ್

ಬೆಂಗಳೂರು: ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ಹಲಸೂರು ಪೇಟೆ ನೀಲಸಂದ್ರದಲ್ಲಿರುವ ಆಸ್ತಿಗಳ ರಕ್ಷಣೆ ಹಾಗೂ ಒತ್ತುವರಿ ತೆರವಿನ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

ಧರ್ಮರಾಯಸ್ವಾಮಿ ದೇವಾಲಯಕ್ಕೆ 6 ವರ್ಷಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಾಗಿದ್ದ ಎಂ. ನಾರಾಯಣ ಸ್ವಾಮಿ, ಟಿ. ಸೆಲ್ವಮಣಿ, ಮಂಜುಳ ಟಿ.ಎನ್. ಹಾಗೂ ಶ್ರೀನಿವಾಸಮೂರ್ತಿ ಅವರು ಒತ್ತುವರಿ ತೆರವುಗೊಳಿಸಲು ಹಾಗೂ ಸಂರಕ್ಷಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಒತ್ತುವರಿಗೆ ಸಹಕರಿಸಿದಂತಾಗಿದೆ. ನ್ಯಾಯಾಲಯದ ಪ್ರಕರಣಗಳಲ್ಲಿ ಕೂಡ ಸಮಯಕ್ಕೆ ಸರಿಯಾಗಿ ಪ್ರಕರಣಗಳು ವಿಲೇ ಆಗಲು ಅಗತ್ಯ ಕ್ರಮ ಕೈಗೊಳ್ಳದೆ ಇರುವುದು ಕಂಡುಬಂದಿದೆ. ಆದ್ದರಿಂದ ಈ ಅಧಿಕಾರಿಗಳ ವಿರುದ್ಧ ಇಲಾಖೆಯ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳಲು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೂಚಿಸಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕು ನೀಲಸಂದ್ರ ಗ್ರಾಮದಲ್ಲಿರುವ ಮುಜರಾಯಿ ಇಲಾಖೆಯ ಅಧೀನದಲ್ಲಿರುವ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ಸರ್ವೆ ನಂ. 79ರಲ್ಲಿರುವ ಆಸ್ತಿಗಳ ಸಂರಕ್ಷಣೆ ಬಗ್ಗೆ ಜನವರಿ 5ರಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಸಭೆ ನಡೆಸಲಾಗಿತ್ತು. ಈ ಸಭೆಯ ನಡಾವಳಿಯನ್ನು ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಕಂದಾಯ ಇಲಾಖೆಗೆ ಕಳುಹಿಸಿದ್ದರು. ಆಸ್ತಿಗಳ ರಕ್ಷಣೆಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಕಂದಾಯ ಇಲಾಖೆಯು ನಗರಾಭಿವೃದ್ಧಿ ಇಲಾಖೆಗೆ ಜುಲೈ 5ರಂದು ಟಿಪ್ಪಣಿ ಕಳುಹಿಸಿದ್ದಾರೆ.

ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ಜಮೀನನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿ ಧಾರ್ಮಿಕ ದತ್ತಿ ಇಲಾಖೆಗೆ ಹಸ್ತಾಂತರಿಸಿದ ನಂತರವೂ ನೂರಾರು ಅನಧಿಕೃತ ಒತ್ತುವರಿಗಳಾಗಿದ್ದು, ಆರ್‌ಸಿಸಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇಲಾಖೆ ಅಧಿಕಾರಿಯ ಸಹಮತ ಇಲ್ಲದೆ ಹೀಗೆ ಆಗುವುದಿಲ್ಲ ಎಂದು ಸಭೆಯಲ್ಲಿ ಅಭಿಪ್ರಾಯಪಟ್ಟ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ.

ಕ್ರಮಕ್ಕೆ ಆಗ್ರಹ: ‘ಧರ್ಮರಾಯಸ್ವಾಮಿ ದೇವಾಲಯದ ಆಸ್ತಿ ಉಳಿಸಿ ಎಂದು ಹಲವು ವರ್ಷದಿಂದ ಹೋರಾಟ ನಡೆಸಲಾಗುತ್ತಿದೆ. ಆದರೆ ಸರ್ಕಾರ ಈ ಬಗ್ಗೆ ಇನ್ನೂ ಕ್ರಮ ಕೈಗೊಂಡಿಲ್ಲ. ದೂರು ನೀಡಿದಾಗ 15 ದಿನದಲ್ಲಿ ಕ್ರಮ ಆಗುತ್ತದೆ ಎಂದು ಸಚಿವರು ಹೇಳುತ್ತಾರೆ. ಇನ್ನೂ ಯಾವುದೇ ಕ್ರಮ ಆಗಿಲ್ಲ. ಧಾರ್ಮಿಕ ದತ್ತಿ ಇಲಾಖೆ ಕೂಡಲೇ ಕ್ರಮ ಕೈಗೊಂಡು, ಒತ್ತುವರಿ ತೆರವು ಮಾಡಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಆಗ್ರಹಿಸಿದರು.



ಧರ್ಮರಾಯಸ್ವಾಮಿ ದೇವಾಲಯ

ಸಭೆಯಲ್ಲಿ ನಿರ್ಧಾರ ಕೈಗೊಂಡಂತೆ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಈ ಬಗ್ಗೆ ಶೀಘ್ರವೇ ಕ್ರಮ ಕೈಗೊಳ್ಳಲಾಗುತ್ತದೆ.
ರೋಹಿಣಿ ಸಿಂಧೂರಿ
ಆಯುಕ್ತೆ, ಧಾರ್ಮಿಕ ದತ್ತಿ ಇಲಾಖೆ

ದೇವಾಲಯದ ಆಸ್ತಿಗಳ ಒತ್ತುವರಿಯಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಕಾಣದ ಕೈಗಳೇ ಇವೆ. ಕಠಿಣ ಕ್ರಮ ಕೈಗೊಂಡು ಆಸ್ತಿ ಉಳಿಸಬೇಕು.
ಪಿ.ಆರ್. ರಮೇಶ್
ವಿಧಾನ ಪರಿಷತ್ ಸದಸ್ಯ

ಪ್ರಜಾವಾಣಿ ವಿಶೇಷ

ಅಧಿಕಾರಿಗಳಿಗೆ ರಕ್ಷಣೆ ಹೊಣೆ

ದೇವಾಲಯದ ಆಸ್ತಿ ರಕ್ಷಣೆ ಹಾಗೂ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಜವಾಬ್ದಾರಿಗಳನ್ನು ಅಧಿಕಾರಿಗಳಿಗೆ ಹಂಚಲಾಗಿದ್ದು, ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಪ್ರಕರಣಗಳನ್ನು ಎರಡು ವಾರಗಳಲ್ಲಿ ತೆರವುಗೊಳಿಸಲು ಕ್ರಮ ಕೈಗೊಳ್ಳಲು ಮುಜರಾಯಿ ಸಹಾಯಕ ಆಯುಕ್ತರಿಗೆ ಸೂಚಿಸಿದ್ದಾರೆ. ದೇವಾಲಯಕ್ಕೆ ಸೇರಿದ ಆಸ್ತಿ, ಸ್ವತ್ತು, ಜಮೀನುಗಳ ಪಹಣಿಗಳು ದೇವಾಲಯದ ಹೆಸರು ಬರುವಂತೆ ಕ್ರಮ ಕೈಗೊಳ್ಳುವ ಜವಾಬ್ದಾರಿ ಧಾರ್ಮಿಕ ದತ್ತಿ ಹೆಚ್ಚುವರಿ ಜಿಲ್ಲಾಧಿಕಾರಿ, ಧಾರ್ಮಿಕ ದತ್ತಿ ಇಲಾಖೆ ಉಪ ಆಯುಕ್ತ, ಧರ್ಮರಾಯ ಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ಅವರದ್ದಾಗಿದೆ.

14 ವರ್ಷದಿಂದ ಬಾಕಿ ಇರುವ ಪ್ರಕರಣದ ಬಗ್ಗೆ ಬೆಂಗಳೂರು ಉತ್ತರ ವಿಶೇಷ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಎಲ್ಲ ರೀತಿಯ ದಾಖಲೆ ಒದಗಿಸಲು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚಿಸಲಾಗಿದೆ. ಸರ್ವೆ ನಂ.79ರಲ್ಲಿ ಚದುರಿದಂತೆ ಖಾಲಿ ಜಾಗ ಇರುವುದಾಗಿ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ಹೊಸ ಸರ್ವೆ ನಂ. 119 ಹಾಗೂ 120ರ ದುರಸ್ತಿಗಳನ್ನು ರದ್ದುಪಡಿಸಲು, 15 ದಿನದಲ್ಲಿ ಕ್ರಮ ಕೈಗೊಳ್ಳಲು ಧಾರ್ಮಿಕ ದತ್ತಿ ಇಲಾಖೆ ಉಪ ಆಯುಕ್ತ, ಭೂದಾಖಲೆಗಳ ಜಂಟಿ ನಿರ್ದೇಶಕ, ಸರ್ವೆ ಇಲಾಖೆ ಉಪ ನಿರ್ದೇಶಕ, ಬೆಂಗಳೂರು ಉತ್ತರ ತಾಲ್ಲೂಕು ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಜವಾಬ್ದಾರಿ ವಹಿಸಲಾಗಿದೆ.

ಕನಕದಾಸರ ಹೆಸರಿನಲ್ಲಿ ವಿದ್ಯಾರ್ಥಿ ನಿಲಯ: ಒಪ್ಪಿಗೆ

ರಾಜರಾಜೇಶ್ವರಿನಗರ: ಕನಕದಾಸರ ಹೆಸರಿನಲ್ಲಿ 50 ವಿದ್ಯಾರ್ಥಿ ನಿಲಯ ಪ್ರಾರಂಭಿಸಲು ಸಚಿವ ಸಂಪುಟದಲ್ಲಿ ಅನುಮೋದನೆ ಸಿಕ್ಕಿದೆ. ಸದ್ಯದಲ್ಲಿಯೇ ಕಟ್ಟಡ ಕಾಮಗಾರಿ ಮತ್ತು ನಿಲಯ ಪ್ರಾರಂಭಿಸಲಾಗುವುದು ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ₹5.17 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

‘ಡಾ.ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ 100 ವಿದ್ಯಾರ್ಥಿ ನಿಲಯ ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿದೆ. ರಾಜ್ಯದಲ್ಲಿ 2,400 ವಿದ್ಯಾರ್ಥಿ ನಿಲಯಗಳಲ್ಲಿ ಎಲ್ಲ ವರ್ಗದ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಪಂಡಿತ್ ದೀನದಯಾಳು ಹೆಸರಿನಲ್ಲಿ 5 ಹಾಸ್ಟೆಲ್ ನಿರ್ಮಾಣ ಮಾಡಲಾಗುತ್ತಿದೆ’ ಎಂದು ಹೇಳಿದರು.

ನಗರದಲ್ಲಿ ಇಂದು

ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮಾವಳಿಗಳ ಕುರಿತು ಚರ್ಚಿಸುವ ರಾಜ್ಯಮಟ್ಟದ ಸಮಾಲೋಚನಾ ಸಭೆ: ಉದ್ಘಾಟನೆ: ಎಂ.ಶಿವಣ್ಣ(ಕೋಟೆ), ಅಧ್ಯಕ್ಷತೆ: ನಾರಾಯಣ್, ಅತಿಥಿಗಳು: ಎಚ್.ಎನ್. ನಾಗಮೋಹನ ದಾಸ್, ಎಸ್. ಜಾಫೆಟ್, ಮಾವಳ್ಳಿ ಶಂಕರ್, ಆಯೋಜನೆ: ಕರ್ನಾಟಕ ಸಫಾಯಿ ಕರ್ಮಚಾರಿಗಳ ಆಯೋಗ, ಸ್ಥಳ: ಕೃಷ್ಣಪ್ಪ ಸ್ಮಾರಕ ಸಭಾಂಗಣ, ರಾಷ್ಟ್ರೀಯ ಕಾನೂನು ಶಾಲೆ, ನಾಗರಬಾವಿ, ಬೆಳಿಗ್ಗೆ 10

ಜಾನಪದ ಜಾತ್ರೆ: ಚಾಲನೆ: ಎಂ.ಕೃಷ್ಣಪ್ಪ, ಅತಿಥಿಗಳು: ಸಿ.ಎಂ. ನರಸಿಂಹಮೂರ್ತಿ, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ಉಪಸ್ಥಿತಿ: ರಘುನಂದನ.ಬಿ.ಆರ್., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10

ಸೀಡ್ಸ್ ಆಫ್ ಕಲ್ಚರ್ ಪ್ರದರ್ಶನ: ಅತಿಥಿಗಳು: ಕೆ. ವಿಜಯ್ ರಾಘವನ್, ಸೀತಾರಾಮ್.ಟಿ.ಜಿ., ಸತ್ಯಜಿತ್ ಮೇಯರ್, ಅಣ್ಣಮ್ಮ ಸ್ಪೂಡಿಚ್, ಆಯೋಜನೆ: ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ರಾಷ್ಟ್ರೀಯ ಜೈವಿಕ ವಿಜ್ಞಾನಗಳ ಕೇಂದ್ರ, ಸ್ಥಳ: ವಿಶ್ವೇಶ್ವರಯ್ಯ ಕೈಗಾರಿಕಾ, ತಾಂತ್ರಿಕ ಮತ್ತು ವಸ್ತು ಸಂಗ್ರಹಾಲಯ ಕಸ್ತೂರಬಾ ರಸ್ತೆ, ಬೆಳಿಗ್ಗೆ 11

ಪದವಿ ಪ್ರದಾನ ಕಾರ್ಯಕ್ರಮ: ಅತಿಥಿಗಳು: ಸುಬ್ರೊತೊ ಬಗಚಿ, ಸೇನಾಪತಿ ಕ್ರಿಸ್ ಗೋಪಾಲಕೃಷ್ಣನ್, ಆಯೋಜನೆ ಮತ್ತು ಸ್ಥಳ: ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಆವರಣ, ಜೆ.ಎನ್. ಟಾಟಾ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 11

‘ಯಥಾ ಪ್ರಕಾರ’ ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಭೀಷ್ಮ ರಾಮಯ್ಯ, ಸಂಗೀತ ಮೇಘನಾ, ಬೆಳಕು: ಸ್ವರೂಪ್ ಕಿರಣ ಎ., ಆಯೋಜನೆ: ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ಸ್ಥಳ: ಕೆ.ಜಿ.ಎಸ್. ಕ್ಲಬ್, ಕಬ್ಬನ್ ಪಾರ್ಕ್, ಮಧ್ಯಾಹ್ನ 1.35

ಗೋಪಿ–ಗೀತಾ ಭಾಗವತ ಪ್ರವಚನ: **ಪ್ರಸ್ತುತಿ:** ದ್ವೈಪಾಯನಾಚಾರ್, ಭಜನೆ: ಶಾರದಾ ಭಜನಾ ಮಂಡಳಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ಕನ್ನಿಕಾ ಪರಮೇಶ್ವರಿ ದೇವಸ್ಥಾನ, ರಾಜಾಜಿನಗರ, ಸಂಜೆ 6

ಸಂಕ್ಷಿಪ್ತ ಸುದ್ದಿ

ರಾಜಶೇಖರ ಹಳೆಮನೆಗೆ ನರಹಳ್ಳಿ ಪ್ರತಿಷ್ಠಾನ ಪ್ರಶಸ್ತಿ



ರಾಜಶೇಖರ ಹಳೆಮನೆ

ಬೆಂಗಳೂರು: ಡಾ. ನರಹಳ್ಳಿ ಪ್ರತಿಷ್ಠಾನ ನೀಡುವ 2022ನೇ ಸಾಲಿನ ಯುವ ಬರಹಗಾರ ಪ್ರಶಸ್ತಿಗೆ ಉಜಿರೆಯ ರಾಜಶೇಖರ ಹಳೆಮನೆ ಆಯ್ಕೆಯಾಗಿದ್ದಾರೆ.

ಕವಿ ಡಾ.ಎಚ್.ಎಸ್. ವೆಂಕಟೇಶ ಮೂರ್ತಿ ಅಧ್ಯಕ್ಷತೆಯ ಸಮಿತಿ ಈ ಆಯ್ಕೆ ಮಾಡಿದೆ. ಬಿ.ಆರ್. ಲಕ್ಷ್ಮಣರಾವ್, ನರಹಳ್ಳಿ ಬಾಲಸುಬ್ರಹ್ಮಣ್ಯ, ಆನಂದ ರಾಮ ಉಪಾಧ್ಯ, ಸಿ.ಕೆ. ರಾಮೇಗೌಡ, ರಜನಿ ನರಹಳ್ಳಿ ಹಾಗೂ ನ. ರವಿ ಕುಮಾರ್ ಅವರು ಪ್ರಶಸ್ತಿ ಆಯ್ಕೆ ಸಭೆಯಲ್ಲಿದ್ದರು. ಪ್ರಶಸ್ತಿಯು ₹15 ಸಾವಿರ ನಗದು ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆ.18ರಂದು ಬೆಳಿಗ್ಗೆ 10.30ಕ್ಕೆ ನ್ಯಾಷನಲ್ ಕಾಲೇಜಿನ ಎಚ್.ಎನ್. ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಆನಂದರಾಮ ಉಪಾಧ್ಯ ತಿಳಿಸಿದ್ದಾರೆ.

ಗುರುತಿನ ಚೀಟಿಗೆ ಆಧಾರ್ ಲಿಂಕ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗೆ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಆಧಾರ್ ಸಂಖ್ಯೆಯನ್ನೂ ಲಿಂಕ್ ಮಾಡಿಕೊಳ್ಳಲಾಗುತ್ತದೆ.

‘ಮತದಾರರ ಗುರುತಿನ ಚೀಟಿಗೆ ಆಧಾರ್ ಲಿಂಕ್ ಮಾಡಿಕೊಳ್ಳಲು ಕೇಂದ್ರ ಚುನಾವಣೆ ಆಯೋಗದಿಂದ ನಮಗೆ ನಿರ್ದೇಶನ ಬಂದಿದೆ. ಅದರಂತೆ ಕ್ರಮಕೈಗೊಳ್ಳಲು ನಮ್ಮ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಅರ್ಜಿಯನ್ನು ಎಲ್ಲ ಮತದಾರರಿಗೂ ನೀಡಲಾಗುತ್ತದೆ. ಆ್ಯಪ್ ಮೂಲಕ ಲಿಂಕ್ ಮಾಡಿಕೊಳ್ಳಬಹುದು’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆಡಳಿತ) ಹಾಗೂ ಚುನಾವಣಾಧಿಕಾರಿಯಾಗಿರುವ ರಂಗಪ್ಪ ತಿಳಿಸಿದರು.

‘ಮತದಾರರ ಪಟ್ಟಿ ಪರಿಷ್ಕರಣೆ ಮಾಡಬೇಕು ಎಂದು ರಾಜ್ಯ ಚುನಾವಣೆ ಆಯೋಗ ಕೂಡ ಅಧಿಕಾರಿಗಳನ್ನು ನೇಮಕ ಮಾಡಿದೆ. ಸಿಬ್ಬಂದಿಗೆ ಎಲ್ಲ ರೀತಿಯ ತರಬೇತಿ ನೀಡಲಾಗುತ್ತಿದ್ದು, ಚುನಾವಣೆ ಆಯೋಗ ಹೇಳಿದ ಕೂಡಲೇ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಆರಂಭವಾಗುತ್ತದೆ. ಆಧಾರ್ ಲಿಂಕ್ ಮಾಡಿಕೊಳ್ಳುವುದು ಕಡ್ಡಾಯವಲ್ಲ. ಇದು ನಾಗರಿಕರ ಆಯ್ಕೆಯಾಗಿರುತ್ತದೆ’ ಎಂದರು.

‘ಚುನಾವಣೆಗಾಗಿ ಉನ್ನತ ಸಮಿತಿ’

ಬೆಂಗಳೂರು: ‘ಪರಿಸರ ಸೂಕ್ಷ್ಮವಲಯ ಕುರಿತ ವರದಿ ಜಾರಿ ವಿಚಾರವಾಗಿ ಉನ್ನತ ಸಮಿತಿ ರಚಿಸಿರುವುದು ಮುಂಬರುವ ಚುನಾವಣೆ ಎದುರಿಸುವ ಉದ್ದೇಶಕ್ಕೇ ಹೊರತು, ವರದಿ ಅನುಷ್ಠಾನ ತಡೆಯುವುದಕ್ಕಾಗಿ ಅಲ್ಲ. ಮಲೆನಾಡು ವ್ಯಾಪ್ತಿ ಜಿಲ್ಲೆಗಳ ನಿವಾಸಿಗಳು ಈ ವಿಚಾರ ಅರ್ಥೈಸಿಕೊಳ್ಳಬೇಕು’ ಎಂದು ಮಲೆನಾಡು ಜನಪರ ಒಕ್ಕೂಟದ ಅಧ್ಯಕ್ಷ ಅನಿಲ್ ಹೊಸಕೊಪ್ಪ ಮನವಿ ಮಾಡಿದ್ದಾರೆ.

‘ವರದಿ ಜಾರಿ ಖಚಿತ ಎನ್ನುವುದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಮಾತಿನಿಂದಲೇ ತಿಳಿಯುತ್ತಿದೆ. ಜನರು ಸಂಪೂರ್ಣ ವರದಿಯನ್ನೇ ವಿರೋಧಿಸಿದರೆ ಶೋಭಾ ಒಂದು ವರ್ಷ ಮುಂದೂಡಿದ್ದಕ್ಕೆ ಸಂಭ್ರಮಿಸುತ್ತಿರುವುದು ಹಾಸ್ಯಾಸ್ಪದ’ ಎಂದು ಟೀಕಿಸಿದ್ದಾರೆ.

ದೂರು ಬಂದರೆ ಕ್ರಮ: ಕಮಿಷನರ್

ಪಬ್‌ನಲ್ಲಿ ಕಾಲೇಜು ವಿದ್ಯಾರ್ಥಿಗಳ ವಿದಾಯಕೂಟಕ್ಕೆ ಅಡ್ಡಿ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಬಜರಂಗ ದಳದವರು ದಾಂದಲೆ ನಡೆಸಿದ ಬಗ್ಗೆ ರಿ-ಸೈಕಲ್ ಪಬ್ ಮಾಲೀಕರಿಂದ ಅಥವಾ ಸಂತ್ರಸ್ತ ವಿದ್ಯಾರ್ಥಿಗಳಿಂದ ದೂರು ಬಂದರೆ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಲು ಅವಕಾಶವಿಲ್ಲ. ಈ ಬಗ್ಗೆ ಪಬ್ ಮಾಲೀಕರಿಂದಾಗಲೀ, ಸಂತ್ರಸ್ತರಿಂದಾಗಲೀ ಇದುವರೆಗೆ ಯಾವುದೇ ದೂರು ಬಂದಿಲ್ಲ’ ಎಂದು ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದರು.

ಬಜರಂಗ ದಳದವರು ಎನ್ನಲಾದ ಕೆಲವರು ಸೋಮವಾರ ರಾತ್ರಿ ನಗರದ ಬಲ್ಮಠ ರಸ್ತೆಯಲ್ಲಿರುವ ರಿ-ಸೈಕಲ್ ಪಬ್‌ಗೆ ಬಂದು, ವಿದ್ಯಾರ್ಥಿಗಳು ಪಾರ್ಟಿ ಮಾಡುವುದನ್ನು ತಡೆದರು ಎಂದು ಆರೋಪಿಸಲಾಗಿತ್ತು. ಈ ಪಬ್‌ಗೆ ಮಂಗಳವಾರ ಬೆಳಿಗ್ಗೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಕಮಿಷನರ್ ಸುದ್ದಿಗಾರರ ಜೊತೆ ಮಾತನಾಡಿದರು.

‘ರಿ-ಸೈಕಲ್ ಪಬ್ ನ ವ್ಯವಸ್ಥಾಪಕ ಮತ್ತು ಬೌನ್ಸರ್ ಅವರ ಹೇಳಿಕೆ ಪಡೆಯಲಾಗಿದೆ. ಸೋಮವಾರ ರಾತ್ರಿ 9 ಗಂಟೆಗೆ ಸಂಘಟನೆಗೆ ಸೇರಿದ ಐದಾರು ಹುಡುಗರು ಪಬ್‌ಗೆ ಹೋಗಿದ್ದಾರೆ. ಇಲ್ಲಿನ ಬೌನ್ಸರ್ ದಿನೇಶ್ ಅವರನ್ನು ಕರೆದು, ‘ಪಬ್‌ಗೆ ಪರವಾನಗಿ ಇದೆಯೇ. ಒಳಗಡೆ ಅಪ್ರಾಪ್ತ ಹುಡುಗ-ಹುಡುಗಿಯರು ಇದ್ದಾರೆ’ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಬಳಿಕ ಪಬ್ ವ್ಯವಸ್ಥಾಪಕರು ಒಳಗೆ ಹೋಗಿ ಪರಿಶೀಲನೆ ಮಾಡಿದ್ದಾರೆ. ಸ್ಥಳೀಯ ಕಾಲೇಜಿನ ಕೆಲ ವಿದ್ಯಾರ್ಥಿಗಳು ಒಳಗಿದ್ದರು. ಪಬ್‌ನ ವ್ಯವಸ್ಥಾಪಕರು ಸೂಚಿಸಿದ ಬಳಿಕವಷ್ಟೇ ವಿದ್ಯಾರ್ಥಿಗಳು ಹೊರಗೆ ಹೋಗಿದ್ದಾರೆ’ ಎಂದು ತಿಳಿಸಿದರು.

‘ಬೌನ್ಸರ್ ನೀಡಿದ ಹೇಳಿಕೆ ಪ್ರಕಾರ ಸಂಘಟನೆ ಕಾರ್ಯಕರ್ತರು ಪಬ್ ಒಳಗೆ ಹೋಗಿಲ್ಲ. ಹೊರ ಭಾಗದಲ್ಲೇ ಇದ್ದರು. ಆದರೂ ಹೊರಗಿನ ವ್ಯಕ್ತಿಗಳು ಬಂದು ಈ ರೀತಿ ವಿಚಾರಣೆ ನಡೆಸಲು ಅವಕಾಶ ಇಲ್ಲ. ಈ ಬಗ್ಗೆ ಸಿಸಿಟಿವಿ ಪರಿಶೀಲನೆ ಮಾಡಿ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

ನಗರದ ಕಾಲೇಜೊಂದರ ವಿದ್ಯಾರ್ಥಿಗಳ ಅಸಭ್ಯ ವಿಡಿಯೊ ಹರಿದಾಡಿದ ಪ್ರಕರಣಕ್ಕೂ ಸೋಮವಾರ ರಾತ್ರಿ ಪಬ್ ನಲ್ಲಿ ನಡೆದ ವಿದಾಯ ಕೂಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೂ ಸಂಬಂಧ ಇಲ್ಲ. ಅಂತಿಮ ವರ್ಷದಲ್ಲಿ ವ್ಯಾಸಂಗ ನಡೆಸುತ್ತಿರುವ ಪದವಿ ವಿದ್ಯಾರ್ಥಿಗಳು ಪಬ್‌ಗೆ ಬಂದಿದ್ದರು’ ಎಂದು ಸ್ಪಷ್ಟಪಡಿಸಿದರು.

‘1967ರ ಕರ್ನಾಟಕ ಅಬಕಾರಿ ಪರವಾನಗಿ (ಸಾಮಾನ್ಯ ಷರತ್ತುಗಳು) ನಿಯಮಗಳ ಪ್ರಕಾರ 21 ವರ್ಷದೊಳಗಿನವರಿಗೆ ಮದ್ಯ ಪೂರೈಸುವಂತಿಲ್ಲ. ನಿನ್ನೆ ವಿದಾಯ ಕೂಟದಲ್ಲಿ ಭಾಗವಹಿಸಿದ 18 ಮಂದಿಯ ವಿವರ ಕಲೆಹಾಕಿದ್ದೇವೆ. ಅವರಲ್ಲಿ 8 ಮಂದಿ 21 ವರ್ಷದೊಳಗಿನವರು ಇದ್ದರು ಎಂದು ತಿಳಿದುಬಂದಿದೆ’ ಎಂದು ಅವರು ತಿಳಿಸಿದರು.

‘21 ವರ್ಷದೊಳಗಿನವರಿಗೆ ಮದ್ಯ ಪೂರೈಕೆ ಮಾಡಲಾಗಿದೆಯೇ’ ಎಂಬ ಬಗ್ಗೆ ಅವರು ಖಚಿತಪಡಿಸಿಲ್ಲ.

ಹಫ್ತಾ ನೀಡದ ಕಾರಣಕ್ಕೆ ದಾಳಿ: ಯು.ಟಿ.ಖಾದರ್

‘ಪಬ್‌ನವರು ಹಫ್ತಾ ನೀಡದ ಕಾರಣಕ್ಕೆ ಬಜರಂಗ ದಳದವರು ದಾಳಿ ನಡೆಸಿದ್ದಾರೆ. ಈ ಬಗ್ಗೆ ಪೊಲೀಸರು ಸಮಗ್ರ ತನಿಖೆ ನಡೆಸಬೇಕು’ ಎಂದು ವಿಧಾನ ಸಭೆ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಒತ್ತಾಯಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಈ ಘಟನೆಯಿಂದ ಮಂಗಳೂರಿನ ಬ್ರ್ಯಾಂಡ್‌ಗೆ ಕಳಂಕ ಬಂದಿದೆ. ದಾರಿ ತಪ್ಪಿದ ಯುವಕರು ಸಮಾಜದ್ರೋಹಿ ಶಕ್ತಿಗಳ ಜೊತೆ ಸೇರಿ ಇಂತಹ ಕೃತ್ಯದಲ್ಲಿ ತೊಡಗಿದ್ದಾರೆ. ಇಂತಹವರನ್ನು ಪತ್ತೆಹಚ್ಚಿ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಪ್ರಶ್ನಿಸಿದ್ದು ನಿಜ; ಹಲ್ಲೆ ಮಾಡಿಲ್ಲ: ಬಜರಂಗದಳ

‘ಪಬ್‌ನಲ್ಲಿ ಅಪ್ರಾಪ್ತ ವಯಸ್ಸಿನವರಿಗೆ ಮದ್ಯ ಪೂರೈಸುತ್ತಿರುವ ಬಗ್ಗೆ ನಾವು ಪ್ರಶ್ನೆ ಮಾಡಿದ್ದು ನಿಜ. ಆದರೆ, ಯಾವುದೇ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿಲ್ಲ’ ಎಂದು ಬಜರಂಗದಳದ ದಕ್ಷಿಣ ಕನ್ನಡ ಜಿಲ್ಲಾ ಸಂಚಾಲಕ ಪುನೀತ್ ಅತ್ತಾವರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾನೂನು ಪ್ರಕಾರವಾಗಿ ಪಬ್ ನಡೆಸುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ಅವಧಿ ಮೀರಿ ಅವುಗಳು ಕಾರ್ಯಾಚರಿಸುವುದಕ್ಕೆ, ವಾರಾಂತ್ಯ ಪಾರ್ಟಿಗಳ ಹೆಸರಿನಲ್ಲಿ ಅಪ್ರಾಪ್ತ ವಯಸ್ಸಿನವರನ್ನು ದಾರಿತಪ್ಪಿಸುವುದಕ್ಕೆ ನಮ್ಮ ವಿರೋಧವಿದೆ’ ಎಂದರು.

‘ಕ್ರಮ ಕೈಗೊಂಡರೆ ಗಂಟುಮೂಟೆ ಕಟ್ಟಬೇಕಾಗುತ್ತದೆ’

‘ಬಜರಂಗ ದಳದವರಿಂದ ಪಬ್ ಮೇಲೆ ದಾಳಿ ನಡೆದೇ ಇಲ್ಲ ಎಂಬ ನಗರ ಪೊಲೀಸ್ ಕಮಿಷನರ್ ಅವರ ಹೇಳಿಕೆ ಹಿಂದಿರುವ ಅಸಹಾಯಕತೆಯನ್ನು ನಾನು ಬಲ್ಲೆ. ಇಂತಹ ದಬ್ಬಾಳಿಕೆ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳುವ ಪೊಲೀಸರು ಸಂಜೆ ಒಳಗಡೆ ಗಂಟುಮೂಟೆ ಕಟ್ಟಬೇಕಾಗುತ್ತದೆ’ ಎಂದು ಆಮ್ ಆದ್ಮಿ ಪಾರ್ಟಿಯ ರಾಜ್ಯ ಘಟಕದ ಉಪಾಧ್ಯಕ್ಷ ಭಾಸ್ಕರ ರಾವ್ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ರಾಜಕೀಯ ಬಲ ಇರುವಾಗ ಮತೀಯ ಗೂಂಡಾಗಿರಿ ನಡೆಸುವುದಕ್ಕೆ ಧೈರ್ಯ ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಳಿಕೋರರಿಗೆ ರಕ್ಷಣೆ ಸಿಗುತ್ತಿದೆ. ಇದು ಬೇಸರದ ವಿಷಯ’ ಎಂದರು.

29ರಿಂದ ಏಷ್ಯಾ ಜ್ಯುವೆಲ್ಸ್ ಷೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಭಾರತದ ಅತ್ಯಂತ ಮನಮೋಹಕ ಆಭರಣ ಪ್ರದರ್ಶನ ‘ಏಷ್ಯಾ ಜ್ಯುವೆಲ್ಸ್ ಷೋ- 2022’ ಅನ್ನು ಜುಲೈ 29,30 ಮತ್ತು 31ರಂದು ನಗರದ ಗಾಯತ್ರಿ ವಿಹಾರ ಅರಮನೆ ಮೈದಾನದಲ್ಲಿ (ಗೇಟ್ ಸಂಖ್ಯೆ4) ಆಯೋಜಿಸಲಾಗಿದೆ ಎಂದು ನಟಿ ಹರ್ಷಿಕಾ ಪೂಣಚ್ಚ ತಿಳಿಸಿದರು.

‘ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಮೂರು ದಿನಗಳ ಏಷ್ಯಾ ಜ್ಯುವೆಲ್ಸ್ ಷೋ ಏರ್ಪಡಿಸಲಾಗಿದೆ. ಒಂದೇ ಸೂರಿನಡಿ ದೇಶದ ಅತ್ಯುತ್ತಮ ಆಭರಣ ವಿನ್ಯಾಸಕರು ಮತ್ತು ಬ್ರ್ಯಾಂಡ್‌ಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವೇದಿಕೆ ಕಲ್ಪಿಸಲಾಗಿದೆ’ ಎಂದು ಮಾಹಿತಿ ನೀಡಿದರು.

‘ಪ್ರತಿ ದಿನ ಬೆಳಿಗ್ಗೆ 10.30ರಿಂದ ರಾತ್ರಿ 8ರವರೆಗೆ ಈ ಆಭರಣ ಮೇಳ ನಡೆಯಲಿದ್ದು, ಪ್ರದರ್ಶನವು ಅತ್ಯಂತ ವಿಶೇಷವಾಗಿದೆ. ಅತ್ಯುತ್ತಮವಾಗಿ ಆಯ್ಕೆ ಮಾಡಿದ ಮತ್ತು ಅಪರೂಪದ ಅತ್ಯುತ್ತಮ ಆಭರಣ ವಿನ್ಯಾಸಗಳನ್ನು ಒಂದೇ ಸೂರಿನಡಿ ಪ್ರದರ್ಶಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಏಷ್ಯಾ ಜ್ಯುವೆಲ್ಸ್ ಷೋ’ ಎನ್ನುವುದು ವಿಶೇಷವಾದ ಮತ್ತು ಉನ್ನತ ಮಟ್ಟದ ಉತ್ತಮ ಬ್ರ್ಯಾಂಡ್ ಚಿನ್ನ ಮತ್ತು ವಜ್ರದ ಆಭರಣಗಳನ್ನು ಪ್ರದರ್ಶಿಸುವ ಪ್ರಮುಖ ಕಾರ್ಯಕ್ರಮವಾಗಿದೆ. ಉತ್ತಮ ಚಿನ್ನ, ವಜ್ರ, ಪ್ಲಾಟಿನಂ ಸೇರಿ ಸಾಂಪ್ರದಾಯಿಕ ಮತ್ತು ಮದುವೆಯ ಆಭರಣಗಳು, ಅಮೂಲ್ಯವಾದ ಕಲ್ಲಿನ ಆಭರಣಗಳು, ಕುಂದನ್, ಜಡೌ ಮತ್ತು ಪೋಲ್ಕಿ ಆಭರಣಗಳನ್ನು ಪ್ರದರ್ಶಿಸಲಾಗುತ್ತಿದೆ. ಅಂದವಾದ ಮತ್ತು ವಿಶ್ವ ದರ್ಜೆಯ ಆಭರಣಗಳನ್ನು ಖರೀದಿಸಲು ಇದು ಪರಿಪೂರ್ಣ ತಾಣವಾಗಿದೆ’ ಎಂದರು.



ಏಷ್ಯಾ ಜ್ಯುವೆಲ್ಸ್ ಷೋ–2022 ಪ್ರಚಾರ ಮೇಳದಲ್ಲಿ ನಟಿ ಹರ್ಷಿಕಾ ಪೂಣಚ್ಚ ಹಾಗೂ ರೂಪದರ್ಶಿಯರು ಆಭರಣಗಳನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಮೈಸೂರು ರೇಸ್

ಸೀ ಲಯನ್ ಗೆಲ್ಲುವ ನಿರೀಕ್ಷೆ

ರೇಸಿಂಗ್ ಜರ್ನಲಿಸ್ಟ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೀ ಲಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಟಿಯಾ ಮಾರಿಯ 4, ಅಥುಲ್ಯ 3
2ನೇ ರೇಸ್: ಬ್ರಾಕ್ಸ್‌ಟನ್ 2, ಮೀಡೋಸ್ ಫ್ಲವರ್ 5, ಮಿಸ್ಟಿಕ್ ಡಿವೈನ್ 6
3ನೇ ರೇಸ್: ಹೈಲ್ಯಾಂಡ್ ಪಾರ್ಕ್ 4, ವಂದನ್ 9, ಫೆಸ್ಟಿವ್ ಸ್ಟಾರ್ 1
4ನೇ ರೇಸ್: ಅಮೇಜಿಂಗ್ ಸಫಾರಿ 1, ಥಿಯಾಸ್ ಗ್ಲೋರಿ 2, ಮರ್ರಕೇಶ್ 10
5ನೇ ರೇಸ್: ಸರ್ ಕ್ಯಾಲ್ಕ್ಯುಲಸ್ 8, ಬ್ರೇಕ್ ಅವೇ 15, ಫ್ಲೆಮಿಂಗೊ ಡ್ಯಾನ್ಸರ್ 6
6ನೇ ರೇಸ್: ಸೀ ಲಯನ್ 9, ಹ್ಯಾವೆಲಾಕ್ ಕ್ರ್ಯೂಝ್ 3, ಎಮೆಲ್ಡಾ 4
7ನೇ ರೇಸ್: ಬಯೋಮೆಟ್ರಿಕ್ 1, ಕ್ರಿಮ್ಸನ್ ಫೈರ್ 2, ಗೋಲ್ಡ್ ಕ್ರೆಸ್ಟ್ 3
8ನೇ ರೇಸ್: ಕಂಟ್ರೆಸ್ ಪೇಸ್ 7, ಲೈಕ್ ಮೈ ಡ್ಯಾಡಿ 9, ಪವರ್ ಪೋರ್ಟ್ 5

ಉತ್ತಮ ಬೆಟ್: ಬ್ರಾಕ್ಸ್‌ಟನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಚಿತ್ರಾವಳಿ



ಪೀಣ್ಯ ದಾಸರಹಳ್ಳಿ ಸಮೀಪದ ನೆಲೆಮಹೇಶ್ವರಮ್ಮ ದೇವಸ್ಥಾನದ ಆವರಣದಲ್ಲಿ ಬಿಜೆಪಿ ಯುವ ಮೋರ್ಚಾದಿಂದ ನಡೆದ ಕಾರ್ಗಿಲ್ ವಿಜಯೋತ್ಸವದಲ್ಲಿ ಸೇನೆಯಲ್ಲಿ ಸೇವೆ ಸಲ್ಲಿಸಿರುವ ಯೋಧರಿಗೆ ಅಭಿನಂದಿಸಲಾಯಿತು. ಮಾಜಿ ಶಾಸಕ ಎಸ್. ಮುನಿರಾಜು, ಮಾಜಿ ಉಪ ಮೇಯರ್ ಎಸ್. ಹರೀಶ್, ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಎನ್. ಲೋಕೇಶ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್ ಸೌಂದರ್ಯ, ನಿವೃತ್ತ ಯೋಧ ಕೃಷ್ಣಮೂರ್ತಿ ಇದ್ದರು.



ಫೀಸಾ ಬಿ ಸಂಸ್ಥೆ, ಅಲಯನ್ಸ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ಕ್ರೀಡಾಪಟುಗಳು

ಬಿಜೆಪಿಯ ಜನೋತ್ಸವ ಸಮಾವೇಶಕ್ಕೆ ಹೆಲಿಪ್ಯಾಡ್ ನಿರ್ಮಾಣ ಆರೋಪ

ಕ್ರೀಡಾಂಗಣದಲ್ಲಿ ಹೆಲಿಪ್ಯಾಡ್: ಸ್ಥಳೀಯರ ಆಕ್ರೋಶ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಬಿಜೆಪಿ ವತಿಯಿಂದ ಜುಲೈ 28ರಂದು ಇಲ್ಲಿ ನಡೆಸಲು ಉದ್ದೇಶಿಸಿರುವ ಜನೋತ್ಸವ ಸಮಾವೇಶಕ್ಕೆ ಗಣ್ಯರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಭಗತ್ ಸಿಂಗ್ ಕ್ರೀಡಾಂಗಣದಲ್ಲಿ ಹೆಲಿಪ್ಯಾಡ್ ನಿರ್ಮಾಣಕ್ಕಾಗಿ ಜೆಸಿಬಿ ಯಂತ್ರದ ಮೂಲಕ ಹಳ್ಳ ತೆಗೆಯಲಾಗುತ್ತಿದೆ.

ಇದಕ್ಕೆ ರಕ್ಷಣಾ ವೇದಿಕೆಯ ಕನ್ನಡಿಗರ ಬಣದ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಚಂದ್ರಶೇಖರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಪಕ್ಷದ ಕಾರ್ಯಕ್ರಮಕ್ಕಾಗಿ ಕ್ರೀಡಾಂಗಣವನ್ನು ವಿರೂಪಗೊಳಿಸಲಾಗುತ್ತಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಖೇಲೋ ಇಂಡಿಯಾ ಕಾರ್ಯಕ್ರಮದ ಮೂಲಕ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುತ್ತಿರುವ ಇದೇ ಸರ್ಕಾರ ಕ್ರೀಡಾಂಗಣಗಳ ವಿರೂಪ ಮಾಡುವ ಕೆಲಸ ಮಾಡುತ್ತಿದೆ. ಜೆಸಿಬಿ ಮೂಲಕ ಕ್ರೀಡಾಂಗಣದ ಅಂಗಳವನ್ನು ಅಗೆದು ಕ್ರೀಡೆಗಳನ್ನು ಆಡದಂತೆ ಮಾಡಲಾಗುತ್ತಿದೆ. ಹಲವು ಹೋರಾಟಗಳನ್ನು ನಡೆಸುವ ಮೂಲಕ 10 ವರ್ಷಗಳ ಹಿಂದೆ ದುಃಸ್ಥಿತಿಯಲ್ಲಿದ್ದ ಭಗತ್‌ಸಿಂಗ್ ಕ್ರೀಡಾಂಗಣವನ್ನು ಉತ್ತಮ ಸ್ಥಿತಿಗೆ ತರಲಾಗಿತ್ತು.

ನಿತ್ಯ ನೂರಾರು ಕ್ರೀಡಾಪಟುಗಳು ಇಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಭವಿಷ್ಯದ ಕ್ರೀಡಾಪಟುಗಳ ತಯಾರಿಗೆ ಕಾರಣವಾಗಿರುವ ಕ್ರೀಡಾಂಗಣವನ್ನು ವಿರೂಪ ಮಾಡುವುದು ಸರಿಯಲ್ಲ ಎಂದು ಸಾರ್ವಜನಿಕರು ಸಹ ಬೇಸರ ವ್ಯಕ್ತಪಡಿಸಿದ್ದಾರೆ.

ಹೆಲಿಪ್ಯಾಡ್ ಇಲ್ಲ: ಜನೋತ್ಸವ ಸಮಾವೇಶಕ್ಕೆ ಹೆಲಿಕಾಪ್ಟರ್ ಮೂಲಕ ಯಾರು ಸಹ ಬರುವುದಿಲ್ಲ. ಹೀಗಾಗಿ ಎಲ್ಲೂ ಹೊಸದಾಗಿ ಹೆಲಿಪ್ಯಾಡ್ ನಿರ್ಮಿಸುತ್ತಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.



ದೊಡ್ಡಬಳ್ಳಾಪುರದ ಭಗತ್‌ಸಿಂಗ್ ಕ್ರೀಡಾಂಗಣದಲ್ಲಿ ಹೆಲಿಪ್ಯಾಡ್ ನಿರ್ಮಾಣಕ್ಕಾಗಿ ಜೆಸಿಬಿ ಯಂತ್ರದ ಮೂಲಕ ಕೆಲಸ ಮಾಡುತ್ತಿರುವುದು

ಸಂಘಟನಾ ಕಾರ್ಯದರ್ಶಿಯಿಂದ ಸರಣಿ ಸಭೆ


ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ನೂತನ ಸಂಘಟನಾ ಪ್ರಧಾನ ಕಾರ್ಯದರ್ಶಿ ಜಿ.ವಿ.ರಾಜೇಶ್ ಅವರು ಮಂಗಳವಾರ ಸರಣಿ ಸಭೆ ನಡೆಸಿ, ಪಕ್ಷದ ಸಂಘಟನೆ ಮತ್ತಷ್ಟು ಬಲಪಡಿಸಲು ಒಗ್ಗಟ್ಟಿನಿಂದ ಶ್ರಮಿಸಲು ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಗಳು, ವಿವಿಧ ಮೋರ್ಚಾ ಮತ್ತು ಪ್ರಕೋಷ್ಠಗಳ ಪದಾಧಿಕಾರಿಗಳ ಜತೆ ಸಭೆ ನಡೆಸಿ, ಎಲ್ಲರ ಪರಿಚಯ ಮಾಡಿಕೊಂಡು, ಸಂಘಟನೆಗೆ ಸಂಬಂಧಿಸಿದ ಮಾಹಿತಿ ಪಡೆದರು. ರಾಜೇಶ್ ಅವರನ್ನು ಇತ್ತೀಚೆಗಷ್ಟೇ ರಾಜಕೀಯ ಕ್ಷೇತ್ರಕ್ಕೆ ಆರ್‌ಎಸ್‌ಎಸ್ ನಿಯುಕ್ತಿ ಮಾಡಿತ್ತು. ‘ಒಂದೇ ಕುಟುಂಬದ ಸದಸ್ಯರಂತೆ ಕಾರ್ಯ ನಿರ್ವಹಿಸಬೇಕಾಗಿದೆ. ಯಾವುದೇ ವಿಷಯವಿದ್ದರೂ ನನ್ನ ಜತೆ ನೇರವಾಗಿ ಮಾತನಾಡಬಹುದು’ ಎಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅರುಣ್‌ಗೆ ಬೀಳ್ಕೊಡುಗೆ

ನಿರ್ಗಮಿತ ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್ ಅವರಿಗೆ ಮಂಗಳವಾರ ಸಂಜೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು. ಇದರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರು, ಶಾಸಕರು ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು.

ತಂತ್ರಜ್ಞಾನ



ಭೂಕಕ್ಷೆಯಲ್ಲಿನ ಉಪಗ್ರಹಗಳು ಅಲ್ಲಿನ ಇತರ ಉಪಗ್ರಹಗಳೊಂದಿಗೆ, ಇಲ್ಲವೇ ಅಂತರಿಕ್ಷದಲ್ಲಿನ 'ಕಸ'ದೊಡನೆ ಡಿಕ್ಕಿ ಹೊಡೆಯುವ ಸಾಧ್ಯತೆ ಇಂದು ಹೆಚ್ಚಿದೆ.



ಅಂತರಿಕ್ಷದಲ್ಲಿ ಕಸದ ನಿರ್ವಹಣೆ!

ಬಿ. ಆರ್. ಗುರುಪ್ರಸಾದ್


ಭೂಮಿಯ ವಾತಾವರಣದಾಚೆ ಇರುವ ಅಂತರಿಕ್ಷದಲ್ಲಿ ನೂರಾರು, ಇಲ್ಲವೇ ಸಾವಿರಾರು ಕಿಲೋಮೀಟರ್ ಎತ್ತರದ ಕಕ್ಷೆಗಳಲ್ಲಿ ಕೃತಕ ಭೂ ಉಪಗ್ರಹಗಳಿಂದು ವಿಹರಿಸುತ್ತಿವೆ. ಸಾವಿರಾರು ಸಂಖ್ಯೆಯಲ್ಲಿ ಭೂಮಿಯನ್ನು ಸುತ್ತುತ್ತಿರುವ ಈ ಸಾಧನಗಳು ಸಂಪರ್ಕ, ಮನೋರಂಜನೆ, ಹವಾಮಾನ ಮುನ್ಸೂಚನೆ, ಸಂಚಾರ, ಕೃಷಿ, ಮೀನುಗಾರಿಕೆ – ಹೀಗೆ ಭೂಮಿಯ ಮೇಲಿನ ನಮ್ಮ ದಿನನಿತ್ಯ ಜೀವನದ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿವೆ.

1957ರಲ್ಲಿ 'ಸ್ಪುತ್ನಿಕ್-1' ಎಂಬ ಭೂಮಿಯ ಮೊದಲ ಕೃತಕ ಉಪಗ್ರಹದ ಉಡಾವಣೆಯೊಂದಿಗೆ ಅಂತರಿಕ್ಷಯುಗ ಆರಂಭವಾಯಿತು. ಅದಾದ ಮೊದಲ ವರ್ಷಗಳಲ್ಲೇ ಭಾರತೀಯ ಅಂತರಿಕ್ಷ ಕಾರ್ಯಕ್ರಮವೂ 1962ರಲ್ಲಿ ಜನಿಸಿತು. ಆ ಕಾರ್ಯಕ್ರಮವಿಂದು ದೇಶದ ತ್ವರಿತ ಹಾಗೂ ಸರ್ವತೋಮುಖವಾದ ಅಭಿವೃದ್ಧಿಗಾಗಿ ಅಂತರಿಕ್ಷ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಬಳಸಿಕೊಳ್ಳುವುದನ್ನು ಮುಖ್ಯ ಉದ್ದೇಶವನ್ನಾಗಿ ಹೊಂದಿದೆ. ಹೀಗಾಗಿ ಅಂತರಿಕ್ಷ ತಂತ್ರಜ್ಞಾನ ನಮ್ಮಲ್ಲಿ ದಿನನಿತ್ಯ ಜೀವನದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನೆರವಾಗುತ್ತಿದೆ. ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ 'ಇಸ್ರೋ' ನಿರ್ಮಿಸಿದ ಉಪಗ್ರಹಗಳಿಂದು ದೂರಸಂಪರ್ಕ, ಟಿ. ವಿ. ಪ್ರಸರಣ, ಹವಾಮಾನ ವೀಕ್ಷಣೆ, ಭೂಮಿಯ ಸಂಪನ್ಮೂಲಗಳ ಮಾಪನ ಹಾಗೂ ದಕ್ಷವಾದ ನಿರ್ವಹಣೆ, ಯಾನ ನಿರ್ವಹಣೆ ಮುಂತಾದ ಕ್ಷೇತ್ರಗಳ ಮುನ್ನಡೆಗೆ ಕಾರಣವಾಗಿ ನಮ್ಮ ಆರ್ಥಿಕ ಕ್ಷೇತ್ರ ಸುಗಮವಾಗಿ ಕಾರ್ಯನಿರ್ವಹಿಸುವಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತಿವೆ.

ಆದರೆ ಅಂತರಿಕ್ಷದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪಗ್ರಹಗಳ ಹಾಗೂ ಉಪಯುಕ್ತವಾದ ಕಾರ್ಯಾವಧಿ ಮುಗಿದು ಅಂತರಿಕ್ಷದಲ್ಲಿನ 'ಕಸ'ವಾಗಿರುವ ಉಪಗ್ರಹಗಳ ಮತ್ತು ಉಡಾವಣೆಯ ಸಂಬಂದದಲ್ಲಿನ ತ್ಯಾಜ್ಯವಸ್ತುಗಳ ಸಂಖ್ಯೆ ಕಳೆದ ಆರು ದಶಕಗಳಲ್ಲಿ ನಿರಂತರವಾಗಿ ಹೆಚ್ಚಿದೆ. ಅದರಲ್ಲೂ ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಅದು ಗಣನೀಯವಾಗಿ ಹೆಚ್ಚಿದೆ. ಹೀಗಾಗಿ ಭೂಕಕ್ಷೆಯಲ್ಲಿನ ಉಪಗ್ರಹಗಳು ಅಲ್ಲಿನ ಇತರ ಉಪಗ್ರಹಗಳೊಂದಿಗೆ ಇಲ್ಲವೇ ಅಂತರಿಕ್ಷದಲ್ಲಿನ 'ಕಸ'ದೊಡನೆ ಡಿಕ್ಕಿ ಹೊಡೆಯುವ ಸಾಧ್ಯತೆ ಇಂದು ಹೆಚ್ಚಿದೆ. ಇದು ಅಂತರಿಕ್ಷವನ್ನು ಸುರಕ್ಷಿತವಾಗಿ ಹಾಗೂ ಸುಸ್ಥಿರವಾಗಿ ಬಳಸಿಕೊಳ್ಳುವ ಕಾರ್ಯಕ್ಕೆ ಭೀತಿಯನ್ನು ತಂದೊಡ್ಡಿದೆ. ಏಕೆಂದರೆ ಭೂಮಿಯ ಮೇಲೆ ಒಂದಕ್ಕೊಂದು ವಾಹನಗಳು ಅಪ್ಪಳಿಸಿದರೆ ಆ ವಾಹನಗಳಿಗೆ ಹಾಗೂ ಅದರಲ್ಲಿರುವ ವ್ಯಕ್ತಿಗಳಿಗೆ ಹಾನಿಯಾಗಬಹುದು, ಅಷ್ಟೆ. ರಸ್ತೆ ಅಪಘಾತವೊಂದು ಆದ ಬಳಿಕ ಆ ವಾಹನಗಳನ್ನು ಅ ಸ್ಥಳದಿಂದ ತೆಗೆದು ಆ ರಸ್ತೆಯನ್ನು ವಾಹನಸಂಚಾರಕ್ಕೆ ತೆರವುಗೊಳಿಸುವುದು ಭೂಮಿಯ ಮೇಲೆ ದಿನವೂ ನಡೆಯುವ ವಿದ್ಯಮಾನವಾಗಿದೆ. ಆದರೆ ಭೂಕಕ್ಷೆಯಲ್ಲಿ ಆ ರೀತಿ ಆಗುವುದಿಲ್ಲ. ಅಲ್ಲಿ ಉಪಗ್ರಹಗಳು ಹಾಗೂ ಇನ್ನಿತರ ವಸ್ತುಗಳು ಗಂಟೆಗೆ ಸಾವಿರಾರು ಕಿಲೋಮೀಟರ್ ವೇಗದಲ್ಲಿ ಭೂಮಿಯನ್ನು ಸುತ್ತುತ್ತಿರುತ್ತವೆ. ಇದರಿಂದಾಗಿ ಎರಡು ಉಪಗ್ರಹಗಳು ಒಂದನ್ನೊಂದು ಅಪ್ಪಳಿಸಿದರೆ ಆಗ ಅದರಿಂದ ಲಕ್ಷಾಂತರ ಚೂರುಗಳು ಉತ್ಪತ್ತಿಯಾಗುತ್ತವೆ. ಮುಂದೆ ಆ ಚೂರುಗಳೂ ಗಂಟೆಗೆ ಸಾವಿರಾರು ಕಿಲೋಮೀಟರ್ ವೇಗವನ್ನು ಹೊಂದಿರುವುದರಿಂದ ಆ ಪೈಕಿ ಒಂದು ಸಣ್ಣ ಚೂರು ಸಹ ಕಾರ್ಯನಿರ್ವಹಿಸುತ್ತಿರುವ ದುಬಾರಿ ಉಪಗ್ರಹವೊಂದಕ್ಕೆ ಘಾಸಿಮಾಡುವ ಸಾಮರ್ಥ್ಯವನ್ನು ಹೊಂದಿರುತ್ತದೆ.

ಅಂತರಿಕ್ಷ ವಿಶಾಲವಾದುದಾಗಿರುವುದರಿಂದ ಹಾಗೂ ಇತ್ತೀಚಿನ ವರ್ಷಗಳವರೆಗೂ ದೊಡ್ಡ ಸಂಖ್ಯೆಯಲ್ಲಿ ಉಪಗ್ರಹಗಳು ಅಲ್ಪಾವಧಿಯಲ್ಲಿ ಉಡಾಯಿಸಲ್ಪಟ್ಟಿರದಿದ್ದರಿಂದ ಪರಿಸ್ಥಿತಿ ಹೇಗೋ ನಿಯಂತ್ರಿತವಾದ ಮಟ್ಟದಲ್ಲಿ ಇರುತ್ತಿತ್ತು. ಆದರೆ ಇಂದು ಇಲಾನ್ ಮಸ್ಕ್ ಎಂಬ ಅಂತರಿಕ್ಷ ಉದ್ಯಮಿ ಆ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿದ್ದಾರೆ. ಅವರ 'ಸ್ಪೇಸ್ ಎಕ್ಸ್' ಸಂಸ್ಥೆ ಸುಮಾರು 42 ಸಾವಿರ ಉಪಗ್ರಹಗಳನ್ನು (!) ತನ್ನ 'ಸ್ಟಾರ್ ಲಿಂಕ್' ಕಾರ್ಯಕ್ರಮದಡಿ ಮುಂದಿನ ಕೆಲವು ವರ್ಷಗಳಲ್ಲಿ ಭೂಮಿಯಿಂದ ಕೆಲವೇ ನೂರು ಕಿಲೋಮೀಟರ್ ಎತ್ತರದ ಕಕ್ಷೆಗೆ ಉಡಾಯಿಸುವ ಯೋಜನೆಯನ್ನು ಹಾಕಿಕೊಂಡಿದೆ. ಆ ಪೈಕಿ ಸುಮಾರು ಎರಡು ಸಾವಿರ ಉಪಗ್ರಹಗಳು ಕಳೆದ ನಾಲ್ಕು ವರ್ಷದ ಸುಮಾರಿನಲ್ಲಿ ಕಕ್ಷೆಯನ್ನು ತಲುಪಿ ದೊಡ್ಡ ಮಟ್ಟದ ವೇಗದಲ್ಲಿ ಇಂಟರ್ನೆಟ್ ಸೇವೆಯನ್ನು ಬಹುಮಟ್ಟಿಗೆ ಜಗತ್ತಿನಾದ್ಯಂತ ಒದಗಿಸುತ್ತಿವೆ.

ಸ್ಟಾರ್ ಲಿಂಕ್ ವ್ಯವಸ್ಥೆಯಂತಹದೇ ಉಪಗ್ರಹಗಳನ್ನು ಇನ್ನೂ ಕೆಲವು ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಹಾರಿಬಿಡುವ ಯೋಜನೆಯನ್ನು ಹಾಕಿಕೊಂಡಿವೆ. ಈ ಅಂಶವೇ ಅಂತರಿಕ್ಷದಲ್ಲಿ ಮುಂದೆ ಟ್ರಾಫಿಕ್ ನಿಯಂತ್ರಣಾ ಸಮಸ್ಯೆಯ ಬಗ್ಗೆ ಹೊಸದಾಗಿ ಭೀತಿಯನ್ನು ಹುಟ್ಟಿಹಾಕಿದೆ. ಅಂತರಿಕ್ಷದಲ್ಲಿನ ಉಪಗ್ರಹಗಳ ಹಾಗೂ ನಿಷ್ಪ್ರಯೋಜಕವಾದ 'ಕಸ'ದ ಸಂಖ್ಯೆ, ಸ್ಥಾನ, ಕಕ್ಷೆ, ಅವುಗಳ ಸ್ವರೂಪ, ಗಾತ್ರ, ಚಲನೆ, ಈ ಕುರಿತಾದ ಅರಿವನ್ನು ಇಂದು 'ಅಂತರಿಕ್ಷ ಪರಿಸ್ಥಿತಿಯ ಅರಿವು (ಸ್ಪೇಸ್ ಸಿಚ್ಯುಏಷನಲ್ ಅವೇರ್ ನೆಸ್, ಸಂಕ್ಷಿಪ್ತವಾಗಿ ಎಸ್ ಎಸ್ ಎ - SSA)' ಎಂದು ಕರೆಯಲಾಗುತ್ತದೆ. ಇಂದು ಅಂತರಿಕ್ಷ ಕ್ಷೇತ್ರದಲ್ಲಿನ ಒಂದು ಪ್ರಮುಖ ರಾಷ್ಟ್ರವಾದ ಭಾರತ ತನ್ನ ಅಂತರಿಕ್ಷ ಕಾರ್ಯಕ್ರಮವನ್ನು ಎಚ್ಚರಿಕೆಯಿಂದ ಸುರಕ್ಷಿತವಾಗಿ ಹಾಗೂ ಜವಾಬ್ದಾರಿಯುತವಾಗಿ ನಡೆಸಲು 'ಅಂತರಿಕ್ಷದಲ್ಲಿನ ಪರಿಸ್ಥಿತಿ'ಯನ್ನು ಕುರಿತ ಅರಿವಿಗೆ ಪ್ರಾಮುಖ್ಯವನ್ನು ನೀಡುವುದು ತನಗೆ ಹಾಗೂ ಇತರ ದೇಶಗಳಿಗೆ ಸೇರಿದ ಉಪಗ್ರಹಗಳ ಹಿತದೃಷ್ಟಿಯಿಂದ ಈ ಪರಿಸ್ಥಿತಿಯಲ್ಲಿ ಅದಕ್ಕೆ ಅನಿವಾರ್ಯವಾಗುತ್ತದೆ. ಅಂತರಿಕ್ಷದಲ್ಲಿನ ಉಪಗ್ರಹ ಹಾಗೂ ಇತರ ಸಾಧನಗಳ ಇಲ್ಲವೇ ವಸ್ತುಗಳ ಸಮರ್ಥವಾದ ವೀಕ್ಷಣೆ, ಲಕ್ಷ್ಯವಿಡುವ ಕಾರ್ಯ, ಆ ಸಾಧನಗಳ ಕಕ್ಷೆಯನ್ನು ಲೆಕ್ಕ ಹಾಕುವ ಕಾರ್ಯ, ಅವುಗಳ ವೈಶಿಷ್ಟ್ಯದ ನಿರೂಪಣೆ – ಈ ಎಲ್ಲ ಮಾಹಿತಿಯ ಕ್ರಮಬದ್ಧವಾದ ಸಂಗ್ರಹಣೆ, ಈ ಎಲ್ಲ ಕಾರ್ಯಗಳನ್ನೂ ಇಡೀಯಾಗಿ ಪರಿಗಣಿಸಿ ಮುಂದುವರೆಯುವುದು 'ಅಂತರಿಕ್ಷ ಪರಿಸ್ಥಿತಿ'ಯನ್ನು ನಿಖರವಾಗಿ ಅರಿಯಲು ಅತ್ಯಗತ್ಯ.



ಕಲಾವಿದನ ಕಲ್ಪನೆಯಲ್ಲಿ ಅಂತರಿಕ್ಷದಲ್ಲಿ ಕಸ ಚಿತ್ರಕೃಪೆ: ನಾಸಾ

ಈ ಎಲ್ಲ ಚಟುವಟಿಕೆಗಳನ್ನು ಸಮರ್ಥವಾಗಿ ಜೋಡಿಸಿ ಮುನ್ನಡೆಸಲು 'SSA ನಿಯಂತ್ರಣಾ ಕೇಂದ್ರ'ವನ್ನು 'ಇಸ್ರೋ' ಬೆಂಗಳೂರಿನಲ್ಲಿ ಸ್ಥಾಪಿಸಿದೆ. ಈ ಕೇಂದ್ರದಲ್ಲಿ 'ಅಂತರಿಕ್ಷ ಚಟುವಟಿಕೆಗಳನ್ನು ಸುರಕ್ಷಿತವಾಗಿ ಹಾಗೂ ಸುಸ್ಥಿರವಾಗಿ ನಿರ್ವಹಿಸುವ ವ್ಯವಸ್ಥೆ (ಸಂಕ್ಷಿಪ್ತವಾಗಿ 'ಐ ಎಸ್ ಫ಼ೋರ್ ಒ ಎಮ್ – IS4OM')' ಎಂಬ ಒಂದು ವ್ಯವಸ್ಥೆ ಇದೆ. ಸುರಕ್ಷಿತ ಹಾಗೂ ಮುಂದಿನ ಪೀಳಿಗೆಯವರಿಗೂ ಲಭ್ಯವಿರುವ ರೀತಿಯಲ್ಲಿ ಅಂತರಿಕ್ಷ ಚಟುವಟಿಕೆಗಳನ್ನು ನಡೆಸುವ ಮೂಲಕ ನಿರಂತರವಾದ ರಾಷ್ಟ್ರೀಯ ಅಭಿವೃದ್ಧಿಗೆ ಅಂತರಿಕ್ಷವನ್ನು ಬಳಸಿಕೊಳ್ಳುವ ಉದ್ದೇಶದಿಂದ ಈ ವ್ಯವಸ್ಥೆಯನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಗಿದೆ.

ಭೂಮಿಯ ಮೇಲಿನ ಚಟುವಟಿಕೆಗಳೆಲ್ಲವಕ್ಕೂ ಬಹುಮಟ್ಟಿಗೆ ಕಾರಣವಾದ ಸೂರ್ಯ ಕೆಲವೊಮ್ಮೆ 'ಸಿಟ್ಟಾಗಿ' ಭೂಕಕ್ಷೆಯಲ್ಲಿನ ಉಪಗ್ರಹಗಳು ಹಾಗೂ ಭೂಮಿಯ ಮೇಲಿನ ವಿದ್ಯುತ್ ವ್ಯವಸ್ಥೆಗಳಿಗೆ ಹಾನಿಯುಂಟುಮಾಡುತ್ತಾನೆ. 'ಅಂತರಿಕ್ಷ ಹವಾಮಾನ ಗಮನಿಸುವಿಕೆ ಹಾಗೂ ಅದರ ಮುನ್ಸೂಚನೆ'ಗೆ ಸಂಬಂಧಿಸಿದ ಸೌಲಭ್ಯಗಳು 'ಸಿಟ್ಟಾಗುವ' ನಮ್ಮ ಸೂರ್ಯನ ಚಟುವಟಿಕೆಗಳ ಬಗ್ಗೆ ಮುನ್ನೆಚ್ಚರಿಕೆ ನೀಡುವ ಮೂಲಕ ಅಂತರಿಕ್ಷದಲ್ಲಿನ ಹಾಗೂ ಭೂಮಿಯ ಮೇಲಿನ ಸಾಧನಗಳನ್ನು ರಕ್ಷಿಸುವಲ್ಲೂ ನಿರ್ಣಾಯಕವಾದ ಪಾತ್ರಹಿಸುತ್ತವೆ.

ಅದೇ ರೀತಿ ಅಪಾಯಕಾರಿ ಕ್ಷುದ್ರಗ್ರಹಗಳ ('ಆಸ್ಟರಾಯ್ಡ್ಸ್') ಗುರುತಿಸುವಿಕೆ ಹಾಗೂ ಅವುಗಳು ಭೂಮಿಗೆ ಅಪ್ಪಳಿಸುವ ಭೀತಿಯ ನಿವಾರಣೆ ಮಾನವನ ಉಳಿಯುವಿಕೆಗೆ ಅತ್ಯಗತ್ಯ. ಇಂತಹ ಮಹತ್ತರವಾದ ಕಾರ್ಯಕ್ಕೂ 'ಅಂತರಿಕ್ಷ ಹವಾಮಾನ ಗಮನಿಸುವಿಕೆ ಹಾಗೂ ಅದರ ಮುನ್ಸೂಚನೆ'ಗೆ ಸಂಬಂಧಿಸಿದ ಸೌಲಭ್ಯಗಳು ನೆರವು ನೀಡುತ್ತವೆ. ಈ ಸೌಲಭ್ಯಗಳ ಅವಿಭಾಜ್ಯ ಅಂಗವಾದ ರೇಡಾರ್ ಹಾಗೂ ಅಪಾರವಾದ ಸಾಮರ್ಥ್ಯವುಳ್ಳ ಕಂಪ್ಯೂಟರ್ ವ್ಯವಸ್ಥೆಗಳನ್ನು ಸ್ಥಾಪಿಸುವ ಕಾರ್ಯ ಇಂದು 'ಇಸ್ರೋ'ದಿಂದ ಮುಂದುವರೆಯುತ್ತಿದೆ.

ಒಟ್ಟಿನಲ್ಲಿ 'ಐಎಸ್4ಒಎಮ್' ವ್ಯವಸ್ಥೆ ಅಂತರಿಕ್ಷದಲ್ಲಿನ ಪರಿಸ್ಥಿತಿಯನ್ನು ಅರಿಯುವುದಕ್ಕೆ ಸಂಬಂಧಿಸಿದ ಉದ್ದೇಶಗಳನ್ನು ಸಾಧಿಸಲು ಇಂದಿನ ಸನ್ನಿವೇಶದಲ್ಲಿ ಭಾರತಕ್ಕೆ ನೆರವನ್ನು ನೀಡುತ್ತದೆ. ❖

ಟಿಕ್‌ಟಾಕ್ ಮೋಹದಲ್ಲಿ ಸರ್ಚ್ ಎಂಜಿನ್‌ಗಳು ದೂರ


ಕೃಷ್ಣ ಭಟ್



ಇಂಟರ್‌ನೆಟ್ ಜನಪ್ರಿಯವಾಗುತ್ತಿದ್ದ ಕಾಲದಲ್ಲಿ ಸರ್ಚ್ ಎಂಜಿನ್‌ಗಳೇ ಒಂದು ಅದ್ಭುತವಾಗಿದ್ದವು. ಜಗತ್ತಿನ ಯಾವುದೇ ಸಂಗತಿಗಳ ಬಗ್ಗೆಯೂ ಅದರಲ್ಲಿ ಹುಡುಕಿ ತಿಳಿದುಕೊಳ್ಳಬಹುದು ಎಂಬುದೇ ಒಂದು ಅಚ್ಚರಿಯ ಸಂಗತಿಯಾಗಿತ್ತು. ಇಂಟರ್‌ನೆಟ್ ಬಳಕೆ ಮಾಡುತ್ತಿದ್ದ ಮೂಲ ಧ್ಯೇಯವೇ ಸರ್ಚ್ ಇಂಜಿನ್‌ಗಳಲ್ಲಿ ಮಾಹಿತಿ ಹುಡುಕುವುದಾಗಿರುತ್ತಿತ್ತು. ಕಾಲ ಕ್ರಮೇಣ ಇಂಟರ್‌ನೆಟ್‌ನ ವೇಗ ಹೆಚ್ಚಿದಂತೆ ಪಥ್ಯಮಾಹಿತಿಯನ್ನು ಹುಡುಕುವುದರಾಚೆಗೂ ನಮ್ಮ ಇಂಟರ್ನೆಟ್ ಅವಲಂಬನೆ ಬೆಳೆಯಿತು.

ಆದರೆ, 4ಜಿ ಬಂದ ನಂತರ ಇಂಟರ್ನೆಟ್ ಅನ್ನು ನಾವು ಬಳಸುವ ಪ್ರಮಾಣ ಹೆಚ್ಚಿದೆಯಾದರೂ, ಅದು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆಯೇ ಎಂಬ ಬಗ್ಗೆ ಕೆಲವು ಆತಂಕಕಾರಿ ಸಂಗತಿಗಳು ಹೊರಬರುತ್ತಿವೆ. ಇತ್ತೀಚೆಗೆ ಗೂಗಲ್ ನಡೆಸಿದ ಸಮೀಕ್ಷೆಯೊಂದರಲ್ಲಿ ಹೊಸ ತಲೆಮಾರಿನ ಶೇ. 40ರಷ್ಟು ಬಳಕೆದಾರರು ಗೂಗಲ್ ಮತ್ತು ಮ್ಯಾಪ್ಸ್ ರೀತಿಯ ಸರ್ಚ್ ಎಂಜಿನ್‌ಗಳನ್ನು ಬಳಸುವುದರ ಬದಲಿಗೆ ಟಿಕ್‌ಟಾಕ್ ಮತ್ತು ಇನ್‌ಸ್ಟಾಗ್ರಾಮ್‌ನಂತಹ ಸಣ್ಣ ವಿಡಿಯೊ ಹಾಗೂ ಫೋಟೋ ಸೈಟ್‌ಗಳಲ್ಲಿ ಹುಡುಕಾಟ ನಡೆಸುತ್ತಿದ್ದಾರೆ.

ಕಳೆದ ಕೆಲವು ವರ್ಷಗಳಿಂದ ಅತ್ಯಂತ ಜನಪ್ರಿಯವಾಗುತ್ತಿರುವ ಸಣ್ಣ ವಿಡಿಯೊ ಕ್ಲಿಪ್‌ಗಳನ್ನು ಒಳಗೊಂಡಿರುವ ಆ್ಯಪ್ 'ಟಿಕ್‌ಟಾಕ್' ಮತ್ತು 'ಇನ್‌ಸ್ಟಾಗ್ರಾಮ್' ರೀತಿಯವು ಈಗ ಗೂಗಲ್‌ನಂತಹ ಸರ್ಚ್ ಎಂಜಿನ್‌ಗೆ ಪ್ರತಿಸ್ಪರ್ಧೆ ಒಡ್ಡುತ್ತಿವೆ. ಬರಿ ಸ್ಪರ್ಧೆ ಒಡ್ಡುವುದಷ್ಟೇ ಅಲ್ಲ, ಇವು ಹೊಸ ಕಾಲದ ಜನರು ಇಂಟರ್‌ನೆಟ್‌ನ ಬಳಕೆ ಮಾಡುವ ವಿಧಾನವನ್ನೇ ಬದಲಿಸಿವೆ. ಈ ನವ ಯುವಕ–ಯುವತಿಯರು ಗೂಗಲ್‌ನಲ್ಲಿ ಸರ್ಚ್ ಮಾಡುವುದಕ್ಕಿಂತ ಹೆಚ್ಚಾಗಿ, ಟಿಕ್‌ಟಾಕ್ ಅಥವಾ ಇನ್‌ಸ್ಟಾಗ್ರಾಮ್ ತೆರೆದುಕೊಂಡು ಅದರಲ್ಲಿ ಬರುವ ವಿಡಿಯೊಗಳನ್ನು ಸ್ಕ್ರೋಲ್ ಮಾಡುತ್ತಾ ಹೋಗುತ್ತಾರೆ. ತಮ್ಮ ಮನಸ್ಸಿಗೆ ಸಮಾಧಾನವಾಗುವವರೆಗೂ ಅದರಲ್ಲಿ ಸ್ಕ್ರೋಲ್ ಮಾಡುತ್ತಾರೆ. ಆದರೆ, ಅವರು ಮಾಹಿತಿಗಾಗಿ ಇಂಟರ್ನೆಟ್‌ಗೆ ಬರುವುದಿಲ್ಲ. ಮಾಹಿತಿಯ ಆದ್ಯತೆ ಎರಡನೆಯದಾಗಿರುತ್ತದೆ. ಈ ಬಗ್ಗೆ ಫಾರ್ಚೂನ್ ಬ್ರೇನ್‌ಸ್ಟಾರ್ಮ್ ಟೆಕ್‌ನಲ್ಲಿ ಗೂಗಲ್‌ನ ಹಿರಿಯ ಉಪಾಧ್ಯಕ್ಷ ಪ್ರಭಾಕರ್ ರಾಘವನ್ ಮಾತನಾಡುತ್ತಾ 'ಊಟ ಎಲ್ಲಿ ಮಾಡಲಿ ಎಂದು ಹುಡುಕುವಾಗ ಶೇ. 40ರಷ್ಟು ಯುವಕರು ಗೂಗಲ್ ಮ್ಯಾಪ್ಸ್ ಅಥವಾ ಸರ್ಚ್‌ಗೆ ಹೋಗುವುದಿಲ್ಲ. ಬದಲಿಗೆ ಅವರು ಟಿಕ್‌ಟಾಕ್ ಅಥವಾ ಇನ್‌ಸ್ಟಾಗ್ರಾಮ್‌ಗೆ ಹೋಗಿ ಹುಡುಕಾಟ ನಡೆಸುತ್ತಾರೆ' ಎಂದಿದ್ದಾರೆ. ಯುವಜನತೆಯಲ್ಲಿ ಆಗುತ್ತಿರುವ ಈ ಬದಲಾವಣೆ ಬಹಳ ಮುಖ್ಯ ಟ್ರೆಂಡ್ ಅನ್ನು ಸೂಚಿಸುತ್ತದೆ. ಯುವಜನರಿಗೆ ಈಗ ಮಾಹಿತಿಗಿಂತ ಹೆಚ್ಚು ಮನೋರಂಜನೆಯೇ ಆದ್ಯತೆಯಾಗಿದೆ. ಮಾಹಿತಿಗಾಗಿ ಅವರು ಇಂಟರ್‌ನೆಟ್‌ಗೆ ಬರುವುದಕ್ಕಿಂತ ಹೆಚ್ಚಾಗಿ ಮನೋರಂಜನೆಗಾಗಿ ಅವರು ಇಂಟರ್‌ನೆಟ್‌ಗೆ ಬರುತ್ತಿದ್ದಾರೆ.




ಊಟ ಅಥವಾ ತಿಂಡಿ ಮಾಡಲು ಒಳ್ಳೆಯ ಹೊಟೇಲನ್ನು ಹುಡುಕಲು ಜನರು ಗೂಗಲ್‌ಗೆ ಹೋಗುವುದರ ಬದಲಿಗೆ, ಟಿಕ್‌ಟಾಕ್‌ನಲ್ಲೋ ಅಥವಾ ಇತರ ಆ್ಯಪ್‌ಗಳಲ್ಲಿ ತಮ್ಮ ಮೆಚ್ಚಿನ ತಿಂಡಿ ತಿನಿಸುಗಳ ಪರಿಚಯ ಮಾಡಿಸುವ ವಿಡಿಯೊ ಬ್ಲಾಗರ್ ಅಕೌಂಟಿಗೆ ಹೋಗಿ ಆತ ಮಾಡಿದ ವೀಡಿಯೋಗಳನ್ನು ಹುಡುಕಬಹುದು. ಆತ ಶಿಫಾರಸು ಮಾಡಿದ ಹೊಟೇಲ್‌ಗೆ ಹೋಗುವುದಕ್ಕೆ ಇಷ್ಟಪಡಬಹುದು. ಏಕೆಂದರೆ, ಗೂಗಲ್‌ನಲ್ಲಿ ಹೊಟೇಲ್‌ಗಳ ಪಟ್ಟಿ ನೋಡಿಕೊಂಡು, ಅದರ ರೇಟಿಂಗ್‌ಗಳನ್ನೆಲ್ಲ ಗಮನಿಸಿ, ನಿರ್ಧಾರ ಮಾಡುವಷ್ಟು ಸಹನೆ ಆತನಿಗೆ ಇಲ್ಲದಿರಬಹುದು. ಅಷ್ಟೇ ಅಲ್ಲ, ಟಿಕ್‌ಟಾಕ್ ಸೇರಿದಂತೆ ಹಲವು ಶಾರ್ಟ್ ವಿಡಿಯೊ ಆ್ಯಪ್‌ಗಳಲ್ಲಿ ವಿವಿಧ ರೀತಿ ಮಾಹಿತಿಯುಕ್ತ ವಿಡಿಯೊಗಳೂ ಇವೆ. ಪ್ರಯಾಣ ಮಾಡುವಾಗ ಸೂಟ್‌ಕೇಸ್‌ನಲ್ಲಿ ಹೆಚ್ಚು ಸಾಮಗ್ರಿಗಳನ್ನು ತುಂಬಿಸುವುದು ಹೇಗೆ ಎಂಬ ಟ್ರಿಕ್‌ಗಳಿಂದ 'ಜನಪ್ರಿಯ ಪ್ರವಾಸಿ ತಾಣ ಯಾವುದು' ಎಂಬ ಬಗ್ಗೆಯೂ ವೀಡಿಯೋಗಳಿವೆ.

ಇದಕ್ಕೆ ಹಲವು ಕಾರಣಗಳೂ ಇರಬಹುದು. ಗೂಗಲ್ ಅಥವಾ ಸರ್ಚ್ ಎಂಜಿನ್‌ಗಳು ಯುವಜನರಿಗೆ ಬೇಕಾದ ರೀತಿಯಲ್ಲಿ ಮಾಹಿತಿಯನ್ನು ನೀಡುತ್ತಿಲ್ಲದಿರಬಹುದು ಅಥವಾ ಟಿಕ್‌ಟಾಕ್‌ನಂತಹ ಸೋಷಿಯಲ್ ಮೀಡಿಯಾ ಆ್ಯಪ್‌ಗಳು ಹೊಸ ತಲೆಮಾರಿನ ಬಳಕೆದಾರರನ್ನು ಇಂಟರ್ನೆಟ್‌ಗೆ ಕರೆತರುತ್ತಿದ್ದು, ಮುಂದಿನ ದಿನಗಳಲ್ಲಿ ಇವರೇ ಮಾಹಿತಿಗಾಗಿ ಸರ್ಚ್ ಎಂಜಿನ್‌ಗಳಿಗೆ ಮೊರೆ ಹೋಗಲೂಬಹುದು.

ಈ ಮಹತ್ವದ ಬದಲಾವಣೆ ಈಗ ಸರ್ಚ್ ಎಂಜಿನ್‌ಗಳಿಗೆ ತಲೆನೋವಾಗಿದೆ. 2024ರ ವೇಳೆಗೆ ಟಿಕ್‌ಟಾಕ್‌ನ ಜಾಹೀರಾತುಗಳ ಆದಾಯವು ಯೂಟ್ಯೂಬ್ ಅನ್ನೂ ಮೀರಿಸಲಿದೆ ಎಂದು ಸದ್ಯಕ್ಕೆ ಊಹಿಸಲಾಗಿದೆ. ಇನ್ನು ಗೂಗಲ್ ಕೂಡ ತನ್ನ ಸರ್ಚ್ ಇಂಜಿನ್ನಿನ ರೂಪವನ್ನೇ ಈ ದೃಷ್ಟಿಯಲ್ಲಿ ಮುಂದಿನ ವರ್ಷಗಳಲ್ಲಿ ಬದಲಿಸಿದರೆ ಅಚ್ಚರಿಯಿಲ್ಲ. ಏಕೆಂದರೆ, ಹಳೆಯ ವಿಧಾನಗಳಲ್ಲೇ 'ಸರ್ಚ್ ಎಂಜಿನನ್ನು ಆಪ್ಟಿಮೈಸ್' ಮಾಡುವ ಗೂಗಲ್‌ನ ಶ್ರಮ ಇನ್ನು ಮುಂದಿನ ದಿನಗಳಲ್ಲಿ ಪ್ರಯೋಜನ ನೀಡದಿರಬಹುದು.

ಈಗಾಗಲೇ ಈ ನಿಟ್ಟಿನಲ್ಲಿ ಹಲವು ಪ್ರಯತ್ನಗಳನ್ನು ಗೂಗಲ್ ನಡೆಸಿದೆ. ಉದಾಹರಣೆಗೆ, ಆಗ್ಮೆಂಟೆಡ್ ರಿಯಾಲಿಟಿ ಗ್ಲಾಸ್‌ಗಳ ಮೂಲಕ ಪಠ್ಯಗಳು ಮತ್ತು ಚಿತ್ರಗಳೆರಡನ್ನೂ ಸರ್ಚ್ ರಿಸಲ್ಟ್‌ಗಳಲ್ಲಿ ತೋರಿಸಲು ಗೂಗಲ್ ಯೋಜನೆ ರೂಪಿಸುತ್ತಿದೆ. ಇನ್ನೊಂದು ಮಹತ್ವದ ಬದಲಾವಣೆಗಳಲ್ಲಿ, ಯಾವುದೋ ಒಂದು ವಿಷಯವನ್ನು ಹುಡುಕುವಾಗ ಅದರಲ್ಲಿ ಟಿಕ್‌ಟಾಕ್ ಅಥವಾ ಶಾರ್ಟ್ ವಿಡಿಯೊ ಆ್ಯಪ್‌ನ ಹೆಸರನ್ನು ಟೈಪಿಸಿದರೆ, ಆಗ ಆ ಶಾರ್ಟ್ ವೀಡಿಯೋ ಆ್ಯಪ್‌ನಲ್ಲಿ ಆ ವಿಷಯದ ಕುರಿತ ವಿಡಿಯೊಗಳು ಕಾಣಿಸಿಕೊಳ್ಳುತ್ತವೆ. ❖




ಗೂಗಲ್ ಸ್ಪೈಡರ್: ಹುಡುಕಾಟದ ಹುರುಪು

ಶರತ್ ಭಟ್ ಸೇರಾಜೆ

ಅಂತರ್ಜಾಲವೆಂಬ ಗೊಂಡಾರಣ್ಯದ ಗಾತ್ರವೆಷ್ಟು, ವಿಸ್ತಾರವೆಷ್ಟು ಎಂಬುದರ ಬಗ್ಗೆ ಯಾರೂ ಅಷ್ಟಾಗಿ ತಲೆಕೆಡಿಸಿಕೊಂಡಿರುವುದಿಲ್ಲ; ಕೇಳಿದ್ದನ್ನು ಕೊಡುವ ಕಾಮಧೇನುವಿನಂಥ ಗೂಗಲ್ ಒಂದನ್ನು ಬಿಟ್ಟು! ನೆನೆದವರ ಮನದಲ್ಲಿ ಏನಿದೆಯೋ ಅದು ಅಂತರ್ಜಾಲದ ಯಾವ ತಿರುವಿನ ಯಾವ ಮೂಲೆಯಲ್ಲಿ ಬಿದ್ದುಕೊಂಡಿದೆ ಎಂದು ಹುಡುಕಬೇಕಾದ್ದು ಅದರ ಕೆಲಸವಾದ್ದರಿಂದ, ತನ್ನ ಕಾರ್ಯಕ್ಷೇತ್ರದ ಹರಹು–ವಿಸ್ತೀರ್ಣಗಳೂ ಅದಕ್ಕೆ ಗೊತ್ತಿರಬೇಕು. ಹಾಗೆ ಅಂತರ್ಜಾಲದ ಉದ್ದ ಅಗಲಗಳನ್ನು ಲೆಕ್ಕ ಹಾಕಲು ಹೊರಟವರಿಗೆ ಅದು ಲೆಕ್ಕ ಗೊತ್ತಿದ್ದವರಿಗೂ ಲೆಕ್ಕ ತಪ್ಪಬಹುದಾದಷ್ಟು ಬೃಹತ್ತಾಗಿದೆ ಎಂಬ ಸಂಗತಿ ಅರಿವಿಗೆ ಬರುತ್ತದೆ.

ಇನ್ನೂರು ಪುಟದ ಪುಸ್ತಕವೊಂದನ್ನು ಕಲ್ಪಿಸಿಕೊಳ್ಳಿ. ಅಂಥ ಒಂದೂವರೆ ಸಾವಿರ ಪುಸ್ತಕಗಳಿರುವ ಕೋಣೆಯೊಂದನ್ನು ಊಹಿಸಿಕೊಳ್ಳಿ. ಲೆಕ್ಕ ಮುಗಿಯಲಿಲ್ಲ. ಇಂಥ ಒಂದು ಕೋಟಿ ಕೋಣೆಗಳಿರುವ ಗ್ರಂಥಾಲಯವೊಂದನ್ನು ಮನಸ್ಸಿಗೆ ತಂದುಕೊಳ್ಳಿ (ಇಂಥ ಗ್ರಂಥಾಲಯ ಎಲ್ಲಿದೆ ಸ್ವಾಮೀ ಅನ್ನಬೇಡಿ, ಕಲ್ಪನೆಗೆ ಯಾವ ಖರ್ಚೂ ಇಲ್ಲ!). ಈಗ ಇಂಥ ಒಂದು ಕೋಟಿ ಗ್ರಂಥಾಲಯಗಳು ಇದ್ದರೆ ಒಟ್ಟು ಪುಟಗಳೆಷ್ಟಾಗಬಹುದು ಎಂದು ಎಣಿಸಿ ನೋಡಿ! ಎಷ್ಟಾಯಿತು? ಇಂಟರ್‌ನೆಟ್ಟಿನ ಗಾತ್ರ ಅಷ್ಟು ಅನ್ನಬಹುದೇನೋ! ಅಥವಾ ಇಂಟರ್‌ನೆಟ್ಟಿನಲ್ಲಿರುವ ಮಾತನ್ನೆಲ್ಲ ಹಾಡಿನ ರೂಪಕ್ಕೆ ಪರಿವರ್ತಿಸಿದರೆ, ಸುಮಾರು ಇನ್ನೂರ ಇಪ್ಪತ್ತು ಕೋಟಿ ವರುಷ ದಿನವಿಡೀ ಕೂತು ಕೇಳಿದರೂ ಮುಗಿಯದಷ್ಟು ಹಾಡುಗಳಾಗುತ್ತವೆ ಎನ್ನಬಹುದು. ಇವು ನಿಖರವಾದ ಲೆಕ್ಕಾಚಾರಗಳೇನೂ ಅಲ್ಲ, ಒಂದು ಕಣ್ಣಂದಾಜಿನ ಗಣನೆಗಳು ಮಾತ್ರ. ಅಂತರ್ಜಾಲವು ನಿಮಿಷ ನಿಮಿಷಕ್ಕೂ ಅರಳುವ ನವನವೋನ್ಮೇಷಶಾಲಿನಿಯಾದ್ದರಿಂದ ಅದು ಲೆಕ್ಕಕ್ಕೆ ಸಿಗಲೂ ಆರದು. ಇಂಥ ಅನಂತ ಅಗಾಧತೆಯಲ್ಲಿ ಏನನ್ನಾದರೂ ಹುಡುಕುವುದು ಅದೆಂಥ ತೊಡಕಿನ ಸಂಗತಿ ಎಂಬುದರ ಅಂದಾಜು ಮಾಡಲಿಕ್ಕೆ ಇಷ್ಟು ಪೀಠಿಕೆ ಹಾಕಿದ್ದಾಯಿತು. ಇಂಥ ತ್ರಾಸದಾಯಕ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ಗೂಗಲ್ಲು ಬಗೆಬಗೆಯ ಯುಕ್ತಿಗಳನ್ನು ಹೂಡುತ್ತದೆ. ಅಂಥ ನೂರೆಂಟು ತಂತ್ರಗಳಲ್ಲಿ ಒಂದನ್ನು ಈಗ ನೋಡೋಣ.



ಬೆಂಗಳೂರಿನ ಹೊಟೇಲ್‌ಗಳಲ್ಲಿ 'ಎಲ್ಲಿ ರವೆದೋಸೆ ರುಚಿಕರವಾಗಿರುತ್ತದೆ' ಎಂದು ಕೇಳಿದಾಗ ಆಗ ನೀವೇನು ಮಾಡಬಹುದು? ಕೂಡಲೇ ಒಂದು ಬೈಕನ್ನೇರಿ, ಇಡೀ ಬೆಂಗಳೂರು ಸುತ್ತಿ, ಸಾವಿರ ಹೊಟೇಲ್‌ಗಳಿಗೂ ಹೋಗುತ್ತೀರಾ?

ಪುಸ್ತಕಗಳಲ್ಲಿ ಕೊನೆಗೆ, 'ಸೂಚಿಕೆ' ಅಥವಾ 'ವಿಷಯಸೂಚಿ' ಇರುತ್ತದಲ್ಲ, ಅದುವೇ ಈ ಉಪಾಯಕ್ಕೆ ಪ್ರೇರಣೆ. ಹಾಗಾಗಿ ಈ ತಂತ್ರದ ಹೆಸರೇ ಇಂಡೆಕ್ಸಿಂಗ್. ಇಡೀ ಅಂತರ್ಜಾಲವೇ ಒಂದು ಬೃಹದ್ಗಾತ್ರದ ಪುಸ್ತಕ ಅಂದುಕೊಂಡರೆ, ಅದರ ಇಂಡೆಕ್ಸ್ ಅಥವಾ ವಿಷಯಸೂಚಿ ಗೂಗಲ್ಲಿನ ಹತ್ತಿರ ಇರುತ್ತದೆ. ಇದರ ಜಾಣ್ಮೆಯನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ಬೆಂಗಳೂರಿನಲ್ಲಿ ಒಂದು ಸಾವಿರ ಹೊಟೇಲ್‌ಗಳಿವೆ ಅಂದುಕೊಳ್ಳೋಣ. 'ಯಾವ ಹೊಟೇಲ್‌ನಲ್ಲಿ ಯಾವ ದೋಸೆ ಸ್ವಾದಿಷ್ಟವಾಗಿರುತ್ತದೆ' – ಎಂದು ಸಲಹೆ ನೀಡುವ ಕೆಲಸ ನಿಮ್ಮದು ಅಂದುಕೊಳ್ಳಿ. ಈಗೊಬ್ಬರು, 'ರವೆದೋಸೆ ಎಲ್ಲಿ ರುಚಿಕರವಾಗಿರುತ್ತದೆ' ಎಂದು ಕೇಳುತ್ತಾರೆ. ಆಗ ನೀವೇನು ಮಾಡಬಹುದು? ಕೂಡಲೇ ಒಂದು ಬೈಕನ್ನೇರಿ, ಇಡೀ ಬೆಂಗಳೂರು ಸುತ್ತಿ, ಸಾವಿರ ಹೊಟೇಲ್‌ಗಳಿಗೂ ಹೋಗಿ, ಎಲ್ಲಿ ರವೆದೋಸೆ ಸಿಗುತ್ತದೆ, ಎಲ್ಲಿ ಅದು ಚೆನ್ನಾಗಿರುತ್ತದೆ ಎಂದು ಮಾಹಿತಿ ಸಂಗ್ರಹ ಮಾಡಿ, ತಿರುಗಿ ಬಂದು, ಕೇಳಿದವರ ಹತ್ತಿರ, 'ಇಂಥಲ್ಲಿಗೆ ಹೋಗಿ' ಎನ್ನಬಹುದು! ಈ ವಿಧಾನದಿಂದ ಕೆಲಸವೇನೋ ಆಗುತ್ತದಾದರೂ ತಲೆ ಸರಿ ಇರುವವರು ಯಾರೂ ಹೀಗೆ ಮಾಡಲಾರರು!



ಸಮರ್ಥರಾದವರು, ಚುರುಕು ಬುದ್ಧಿಯುಳ್ಳವರು ಇನ್ನೊಂದು ಕ್ರಮವನ್ನು ರೂಪಿಸಿಯಾರು. ಯಾರಾದರೂ ಕೇಳಿಯಾದಮೇಲೆ ಇಡೀ ಬೆಂಗಳೂರಿನಲ್ಲಿ ದೋಸೆ ಹುಡುಕುವ ಬದಲು, ಬಿಡುವಾದಾಗ ಬೆಂಗಳೂರಿನ ಒಂದೊಂದೇ ರಸ್ತೆ, ಮೂಲೆಗಳಿಗೆ ಹೋಗಿ, ಎಲ್ಲಿ ಮಸಾಲೆದೋಸೆ ಗರಿಗರಿಯಾಗಿರುತ್ತದೆ, ಎಲ್ಲಿ ಖಾಲಿದೋಸೆ ಒಂದೇ ಏಟಿಗೆ ಗುಳುಂ ಮಾಡುವಂತಿರುತ್ತದೆ, ಎಲ್ಲಿ ಚಟ್ನಿ ಮತ್ತೆ ಮತ್ತೆ ನೆಕ್ಕುವಂತಿರುತ್ತದೆ, ಎಲ್ಲಿ ಸಾಂಬಾರು ಮರುಳು ಮಾಡುತ್ತದೆ – ಅಂತೆಲ್ಲ ಒಂದೊಂದಾಗಿ ನೋಡಿ, ನೋಟು ಪುಸ್ತಕವೊಂದರಲ್ಲಿ ಪಟ್ಟಿ ಮಾಡಿಕೊಳ್ಳಬಹುದು. ಉತ್ತಮ ದರ್ಜೆಯದಕ್ಕೆ ಇಷ್ಟು ಅಂಕ, ಕಳಪೆಯಾದಕ್ಕೆ ಇಷ್ಟು ಎಂದು ವರ್ಗೀಕರಣವನ್ನೂ ಮಾಡಬಹುದು. ವಿಜಯನಗರದ್ದು ಒಂದು ಕಡೆ, ಪೀಣ್ಯದ್ದು ಮತ್ತೊಂದು ಕಡೆ ಎಂದು ವಿಂಗಡಿಸಲೂಬಹುದು. ಎಲ್ಲಿ ಹೆಚ್ಚು ಜನ ಸೇರುತ್ತಾರೆ ಎಂಬುದೂ ರುಚಿಯ ಪರೋಕ್ಷ ಸೂಚನೆಯೇ ಆಗಿರುವುದರಿಂದ, ಅದನ್ನೂ ಗುರುತು ಮಾಡಿಕೊಳ್ಳಬಹುದು.

ಹೀಗೆ ಒಂದು ತಿಂಗಳು ತಿರುಗಿ ನೋಟು ಪುಸ್ತಕ ಭರ್ತಿಯಾದ ಮೇಲೆ, ಯಾರಾದರೂ 'ಬಸವನಗುಡಿಯಲ್ಲಿ ಬೆಣ್ಣೆದೋಸೆ ಎಲ್ಲಿ ಚೆನ್ನಾಗಿರುತ್ತದೆ' ಎಂದು ಕೇಳಿದರೆ, ನೀವು ಇಡೀ ಬೆಂಗ್ಳೂರನ್ನೋ ಬಸವನಗುಡಿಯನ್ನೋ ಅಲೆಯಬೇಕಾಗಿಲ್ಲ. ನಿಮ್ಮ ನೋಟುಪುಸ್ತಕವನ್ನು ಒಮ್ಮೆ ತಿರುವಿ ಹಾಕಿ, ಸರಿಯಾದ ಪುಟ ತೆಗೆದು, ಅಲ್ಲಿರುವುದನ್ನು ಓದಿ, 'ಓ ಇಂಥಲ್ಲಿಗೆ ಹೋಗಿ' ಅಂದರಾಯಿತು. ಗೂಗಲ್ಲು ಅನುಸರಿಸುವುದೂ ಹೆಚ್ಚು ಕಡಮೆ ಇದೇ ಕಾರ್ಯವೈಖರಿಯನ್ನು! ನೀವು ಏನನ್ನಾದರೂ ಅರಸಿದಾಗ ಅದು ಜಾಲದ ಬೈಕನ್ನೇರಿ ಇಡೀ ಇಂಟರ್ನೆಟ್ಟಿನ ಎಂದೂ ಮುಗಿಯದ ದಿಗ್ದಿಗಂತಗಳಲ್ಲಿ ಅಡ್ಡಾಡಿ ನೀವು ಕೇಳಿದ್ದನ್ನು ಶೋಧಿಸುವುದಿಲ್ಲ. ಅದು ನೋಡುವುದು ತನ್ನ ನೋಟು ಪುಸ್ತಕವನ್ನು ಅಂದರೆ ವಿಷಯಸೂಚಿಯನ್ನು ಮಾತ್ರ, ಅದು ಅಷ್ಟು ಬೇಗ ಉತ್ತರ ಕೊಡಲು ಸಾಧ್ಯವಾಗುವುದು ಇದರಿಂದಾಗಿಯೇ. ತಮಾಷೆಯೆಂದರೆ ಗೂಗಲ್ಲಿನದ್ದು ನಮ್ಮ ಪುಸ್ತಕಗಳ ಸೂಚಿಯಂತೆ ನಾಲ್ಕೋ ಐದೋ ಪುಟಗಳ ಸೂಚಿಯಲ್ಲ, ಅದರ ಸೂಚಿಯೇ ಕೆಲವು ಕೋಟಿ ಪುಟಗಳಷ್ಟು ರಾಕ್ಷಸ ಗಾತ್ರದ್ದಾಗಬಹುದು!

ಈ ವಿಷಯಸೂಚಿಯನ್ನು ತಯಾರಿಸಲಿಕ್ಕೆಂದೇ ಸಾವಿರ ಸಂಖ್ಯೆಗಳಲ್ಲಿ ಗಣಕಯಂತ್ರಗಳು ಹಗಲಿರುಳು ದುಡಿಯುತ್ತಿರುತ್ತವೆ. ಅವುಗಳಿಗೆ 'ಗೂಗಲ್ ಸ್ಪೈಡರ್' ಎಂಬ ಹೆಸರಿದೆ. ಅವುಗಳು ಬಿಡುವಾದಾಗ ಅಂತರ್ಜಾಲದಲ್ಲಿ ಅಲೆದು ವಿಷಯಸಂಗ್ರಹ ಮಾಡುವುದಕ್ಕೆ 'ಕ್ರಾಲಿಂಗ್' ಅನ್ನುತ್ತಾರೆ. ಈ ಸೂಚಿಯೂ ಪುಸ್ತಕಗಳ ಸೂಚಿಯಂತೆ ತೀರಾ ಸಂಕ್ಷಿಪ್ತವಲ್ಲ, ಅದು ಕೈಪಿಡಿಯಂತೆ, ನಿಮ್ಮ ನೋಟುಪುಸ್ತಕದಂತೆ ಕ್ರಮಬದ್ಧವಾಗಿ ಕಲೆ ಹಾಕಿದ ಮಾಹಿತಿಯನ್ನು, ವಿವರಗಳನ್ನು ಇಟ್ಟುಕೊಂಡಿರುತ್ತದೆ. ಅಂತರ್ಜಾಲವು ಕ್ಷಣಕ್ಷಣಕ್ಕೂ ಮಾರ್ಪಾಡಾಗುವ, ಕಣ್ಣು ಮಿಟುಕಿಸುವಷ್ಟರಲ್ಲಿ ಪುಟ ಹೆಚ್ಚಿಸಿಕೊಳ್ಳುವ ಪುಸ್ತಕವಾದ್ದರಿಂದ, ಅದರ ವಿಷಯಸೂಚಿಯೂ ಇನ್ನೊಮ್ಮೆ, ಮತ್ತೊಮ್ಮೆ, ಪುನರೊಮ್ಮೆ, ಮಗುಳೊಮ್ಮೆ ಪರಿವರ್ತನೆ ಹೊಂದುತ್ತಲೇ ಇರುತ್ತದೆ. ಇದು ಗೂಗಲ್ಲಿನ ಬಗಲಿನಲ್ಲಿರುವ ನೂರಾರು ಯುಕ್ತಿಗಳಲ್ಲಿ ಒಂದು ಮಾತ್ರ. ಗೂಗಲ್ಲೆಂದರೆ ಸುಮ್ಮನೆ ಅಲ್ಲ! ❖

ಏಮ್ಸ್: ಹೋರಾಟ 75ನೇ ದಿನಕ್ಕೆ

ರಾಯಚೂರು: ಜಿಲ್ಲೆಯಲ್ಲಿ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ಶಾಖೆ ಸ್ಥಾಪಿಸಬೇಕು ಎಂದು ಒತ್ತಾಯಿಸಿ ರಾಯಚೂರು ಜಿಲ್ಲಾ ಏಮ್ಸ್ ಹೋರಾಟ ಸಮಿತಿಯಿಂದ ಆರಂಭಿಸಿರುವ ಅನಿರ್ದಿಷ್ಟಾವಧಿ ಧರಣಿ ಮಂಗಳವಾರ 75ನೇ ದಿನಕ್ಕೆ ಕಾಲಿರಿಸಿತು.

ಸರ್ಕಾರದ ಗಮನ ಸೆಳೆಯಲು 10,521 ಜನರು ರಕ್ತದಿಂದ ಸಹಿ ಮಾಡಿದ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಕೆ.ಆರ್.ದುರುಗೇಶ್ ಅವರಿಗೆ ಪ್ರತಿಭಟನಾಕಾರರು ಸಲ್ಲಿಸಿದರು. ಹಿಂದುಳಿದ ಜಿಲ್ಲೆಯಲ್ಲಿ ಏಮ್ಸ್ ಸ್ಥಾಪಿಸುವುದು ಅಗತ್ಯವಿದೆ ಎಂಬುದನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನಗಾಣಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

'ಹೈಕಮಾಂಡ್ ಮೌಖಿಕ ಸೂಚನೆ ನೀಡಿದೆ'

ಚಿತ್ರದುರ್ಗ: 'ಪಕ್ಷದ ವರ್ಚಸ್ಸಿಗೆ ಧಕ್ಕೆ ತರುವಂತಹ ಹೇಳಿಕೆ ನೀಡದಂತೆ ಹೈಕಮಾಂಡ್ ಮೌಖಿಕ ಸೂಚನೆ ನೀಡಿದೆಯೇ ಹೊರತು, ನನಗೆ ಲಿಖಿತ ನೋಟಿಸ್ ಜಾರಿ ಮಾಡಿಲ್ಲ. ಅಂತಹ ಯಾವುದೇ ನೋಟಿಸ್ ತಲುಪಿಲ್ಲ' ಎಂದು ಶಾಸಕ ಜಮೀರ್ ಅಹಮದ್ ಖಾನ್ ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ದೂರವಾಣಿ ಕರೆ ಮಾಡಿ ಮಾತನಾಡಿದ್ದಾರೆ. ಬಹಿರಂಗ ಹೇಳಿಕೆಗಳಿಂದ ಪಕ್ಷಕ್ಕೆ ಹಿನ್ನಡೆ ಆಗಲಿದೆ. ಸುಮ್ಮನಿರಬೇಕು ಎಂದು ಸೂಚಿಸಿದ್ದಾರೆ. 'ಇಂತಹ ಹೇಳಿಕೆ ನೀಡದಂತೆ ಕೆಪಿಸಿಸಿ ಅಧ್ಯಕ್ಷರಿಗೂ ಸೂಚನೆ ಕೊಟ್ಟಿರುವುದಾಗಿ ತಿಳಿಸಿದ್ದಾರೆ' ಎಂದರು.

'ಎಲ್ಲದಕ್ಕೂ ಉತ್ತರ ಸಿಗಲಿದೆ' (ಮದ್ದೂರು ವರದಿ): ಜಮೀರ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ 'ಒಕ್ಕಲಿಗರ ನಾಯಕ ಯಾರು ಎಂಬುದನ್ನು ಜನ ನಿರ್ಧರಿಸುತ್ತಾರೆ. ಎಲ್ಲದಕ್ಕೂ ಉತ್ತರ ಸಿಗಲಿದೆ' ಎಂದಿದ್ದಾರೆ.

ಬೊಮ್ಮಾಯಿ ಸರ್ಕಾರದ 1 ವರ್ಷದ 'ಸಾಧನಾ ಸಮಾವೇಶ'ಕ್ಕೆ ಕಾಂಗ್ರೆಸ್ ವ್ಯಂಗ್ಯ

ಜನೋತ್ಸವವಲ್ಲ, ಭ್ರಷ್ಟೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಒಂದು ವರ್ಷ ತುಂಬಿದ ಸಂದರ್ಭದಲ್ಲಿ ಸಾಧನಾ ಸಮಾವೇಶವಾಗಿ ಇದೇ 28ರಂದು ಹಮ್ಮಿಕೊಂಡಿರುವುದು 'ಜನೋತ್ಸವ'ವಲ್ಲ, 'ಭ್ರಷ್ಟೋತ್ಸವ' ಎಂದು ರಾಜ್ಯ ಕಾಂಗ್ರೆಸ್ ಘಟಕ ವ್ಯಂಗ್ಯ ಮಾಡಿದೆ.

ಕೆಪಿಸಿಸಿ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಈ ಸರ್ಕಾರ ಜನರಿಗೆ ದ್ರೋಹ ಎಸಗಿದೆ. ಭ್ರಷ್ಟಾಚಾರ ಮುಗಿಲುಮುಟ್ಟಿದೆ' ಎಂದು ವಾಗ್ದಾಳಿ ನಡೆಸಿದರು.

'ಬೊಮ್ಮಾಯಿ ಸರ್ಕಾರದ ಆಡಳಿತ ನೋಡಿ ಸಂಪೂರ್ಣ ಭ್ರಮನಿರಸನವಾಗಿದೆ. ಗುತ್ತಿಗೆದಾರರಿಗೆ ಶೇ 40ರಷ್ಟು ಲಂಚ ಕೊಡಬೇಕಾದ ಪರಿಸ್ಥಿತಿ ಬಂದಿರುವುದು ಇದೇ ಮೊದಲು. ಗುತ್ತಿಗೆದಾರ ಸಂತೋಷ್ ಪಾಟೀಲ ಈ ಲಂಚದ ಹಣ ನೀಡಲಾಗದೆ ಆತ್ಮಹತ್ಯೆ ಮಾಡಿಕೊಂಡರು. ಇದಕ್ಕೆ ಕಾರಣರಾದ ಮಂತ್ರಿ, ನಮ್ಮ ಹೋರಾಟಗಳಿಗೆ ಮಣಿದು ರಾಜೀನಾಮೆ ನೀಡಿದರೂ ಇದೀಗ ಅವರಿಗೆ ಕ್ಲೀನ್ ಚಿಟ್ ನೀಡಲಾಗಿದೆ' ಎಂದು ಸಿದ್ದರಾಮಯ್ಯ ಟೀಕಿಸಿದರು.

ರಾಜ್ಯ ಸರ್ಕಾರ ಕಾರ್ಯವೈಖರಿಯಿಂದಾಗಿ ಕೇಂದ್ರದಿಂದ ಅನ್ಯಾಯವಾಗಿದೆ ಎಂದು ಅಂಕಿಅಂಶಗಳ ಸಹಿತ ವಿವರಿಸಿದ ಅವರು, 'ರಾಜ್ಯದಿಂದ ಆಯ್ಕೆಯಾದ 25 ಜನ ಸಂಸದರಿದ್ದಾರೆ. ಮುಖ್ಯಮಂತ್ರಿಗಳೇ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿ ಸದಸ್ಯರಿದ್ದಾರೆ. ಆದರೂ ಯಾರೊಬ್ಬರೂ ಈ ಅನ್ಯಾಯಗಳ ಬಗ್ಗೆ ಮಾತನಾಡಿಲ್ಲ. ಇದನ್ನೇ ಒಂದು ವರ್ಷದ ಸಂಭ್ರಮವೆಂದು ಆಚರಿಸುತ್ತೀರಾ' ಎಂದು ಪ್ರಶ್ನಿಸಿದರು.

'ಇದೊಂದು ನಿಷ್ಕ್ರಿಯ ಸರ್ಕಾರ. ವಿಧಾನಸೌಧ ಇಂದು ವ್ಯಾಪಾರದ ಸೌಧ ಆಗಿದೆ. ಇವರು 'ಭ್ರಷ್ಟೋತ್ಸವ' ಎಂದು ತಮ್ಮ ಸರ್ಕಾರದ ಸಾಧನೆಯನ್ನು ಆಚರಣೆ ಮಾಡಬೇಕು. ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದವರು ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆ ಎಂದು ಹೇಳಲು ಯಾವ ನೈತಿಕ ಹಕ್ಕಿದೆ' ಎಂದರು.

ಡಿ.ಕೆ. ಶಿವಕುಮಾರ್ ಮಾತನಾಡಿ, 'ನಿಜಕ್ಕೂ ಸಾಧನೆ ಮಾಡಿದ್ದರೆ, ಪ್ರಧಾನಿ ಸೇರಿದಂತೆ ಎಲ್ಲರೂ ಕಾರ್ಯಕ್ರಮಕ್ಕೆ ಬಂದು ಸರ್ಕಾರದ ಬೆನ್ನು ತಟ್ಟುತ್ತಿದ್ದರು. ಭ್ರಷ್ಟಾಚಾರವೇ ಸಾಧನೆ' ಎಂದರು.

'ಈ ಸರ್ಕಾರದಿಂದ ರೈತರಿಗೆ ಯಾವುದೇ ರೀತಿಯ ಅನುಕೂಲ ಆಗಿಲ್ಲ. ವಿವಿಧ ಇಲಾಖೆಗಳ ನೇಮಕಾತಿಯಲ್ಲಿ ಭ್ರಷ್ಟಾಚಾರ ತಾಂಡವವಾಡಿದೆ. ಭ್ರಷ್ಟಾಚಾರದ ವಿಚಾರವಾಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಪ್ರಧಾನಿಗೆ ದೂರು ನೀಡಿದರೂ ತನಿಖೆ ಮಾಡಲಿಲ್ಲ' ಎಂದರು.

'ಜನೋತ್ಸವ' ನಾಳೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರಕ್ಕೆ ಇದೇ 28 ರಂದು ಒಂದು ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ 'ಜನೋತ್ಸವ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಯಡಿಯೂರಪ್ಪ ಮತ್ತು ಬೊಮ್ಮಾಯಿ ಸರ್ಕಾರಗಳ ಮೂರು ವರ್ಷಗಳ ಸಾಧನೆಗಳನ್ನು ಬಿಂಬಿಸುವ ಉದ್ದೇಶದಿಂದ ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ. ಇದರಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಭಾಗವಹಿಸಲಿದ್ದಾರೆ. ಚುನಾವಣಾ ವರ್ಷವಾಗಿರುವುದರಿಂದ ಮುಖ್ಯಮಂತ್ರಿಯವರು ಕೆಲವು ಹೊಸ ಕಾರ್ಯಕ್ರಮಗಳನ್ನು ಪ್ರಕಟಿಸಲಿದ್ದಾರೆ.

ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳ ಏಳರಿಂದ ಎಂಟು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಿಂದ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಹಿರಿಯ ನಾಯಕರಾದ ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಡಿ.ವಿ.ಸದಾನಂದಗೌಡ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮುಂತಾದವರು ಭಾಗವಹಿಸುವರು. ಅಂದು ಮಧ್ಯಾಹ್ನ 12 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ.

ಈ ಬೃಹತ್ ಸಮಾವೇಶಕ್ಕೆ ಬಿಜೆಪಿ ಸಂಪೂರ್ಣ ಸಿದ್ಧತೆ ಮಾಡಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಎಲ್ಲ ಸಚಿವರು ಭಾಗವಹಿಸಬೇಕು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಸೂಚನೆ ನೀಡಿದ್ದಾರೆ.

'ಭ್ರಷ್ಟೋತ್ಸವ'– ಕರಪತ್ರದಲ್ಲಿ ಆರೋಪ

- ಶೇ 40 ಕಮಿಷನ್ ಸರ್ಕಾರ. ಹಗರಣದ ಆರೋಪದಡಿ ಐಪಿಎಸ್, ಐಎಎಸ್ ಅಧಿಕಾರಿ ಬಂಧನ ಇದೇ ಮೊದಲು.
- ಅತ್ಯಾಚಾರಕ್ಕೆ ಒಳಗಾದ ಮಹಿಳೆಯ ನಿಂದನೆ. ಕೆಲಸದ ಆಸೆ ತೋರಿಸಿ ಲೈಂಗಿಕವಾಗಿ ಬಳಕೆ
- ನೇಮಕಾತಿಯಲ್ಲಿ ಭ್ರಷ್ಟಾಚಾರ, ಯುವಜನತೆಯ ಭವಿಷ್ಯಕ್ಕೆ ಚಪ್ಪಡಿ ಕಲ್ಲು
- ಶಾಂತಿ ಹಾಳು ಮಾಡುವ ಸಂಘಗಳಿಗೆ ಬೆಂಬಲ
- ರೈತರ ಬೇಡಿಕೆಗಳಿಗೆ, ಸಂಕಷ್ಟಕ್ಕೆ ನಿರ್ಲಕ್ಷ್ಯ
- ಪಠ್ಯಪುಸ್ತಕಗಳಲ್ಲಿ ಸುಳ್ಳು ಸಿದ್ಧಾಂತ ಅಳವಡಿಕೆ
- ಕನ್ನಡ ದ್ರೋಹಿ ಸರ್ಕಾರದಿಂದ ಸಂಸ್ಕೃತ ಕಲಿಸಲು ಉತ್ಸುಕತೆ
- ಗುಂಡಿ ಮುಚ್ಚದ ಬಿಬಿಎಂಪಿ, ಆಡಳಿತದಲ್ಲಿ ಭ್ರಷ್ಟಾಚಾರ.

ಸಿದ್ದರಾಮಯ್ಯ– 75: ಅದ್ದೂರಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತ ವಿಧಾನಸಭೆ ಚುನಾವಣೆ ಮುನ್ನವೇ ಮುಂದಿನ 'ಮುಖ್ಯಮಂತ್ರಿ ಗಾದಿ' ವಿಚಾರ ಕಾಂಗ್ರೆಸ್ ಪಾಳಯದಲ್ಲಿ ಚರ್ಚೆಗೆ ಕಾರಣವಾಗಿದ್ದರೆ, ಅತ್ತ ದಾವಣಗೆರೆಯ ಶಾಮನೂರು ಪ್ಯಾಲೇಸ್ ಮೈದಾನದಲ್ಲಿ ಆ. 3ರಂದು ನಡೆಯಲಿರುವ ಸಿದ್ದರಾಮಯ್ಯ–75 ಅಮೃತ ಮಹೋತ್ಸವಕ್ಕೆ ಭರದ ಸಿದ್ಧತೆ ನಡೆದಿದೆ.

ಕಾರ್ಯಕ್ರಮದ ಯಶಸ್ಸಿಗೆ ಅಗತ್ಯವಾದ ಯೋಜನೆಗಳಿಗೆ ಅಮೃತ ಮಹೋತ್ಸವ ಸಮಿತಿ ಅಂತಿಮ ರೂಪು ಕೊಡುತ್ತಿದ್ದು, ಸಿದ್ದರಾಮಯ್ಯ ನಿವಾಸದಲ್ಲಿ ಹಲವು ಸಭೆಗಳನ್ನು ನಡೆಸಿದೆ. ವಿವಿಧ ವ್ಯವಸ್ಥೆಗಳ ಹೊಣೆಯನ್ನು ಬೇರೆ, ಬೇರೆ ನಾಯಕರಿಗೆ ವಹಿಸಲಾಗಿದೆ.

ಮೈದಾನದಲ್ಲಿ ಬೃಹತ್ ವೇದಿಕೆ ನಿರ್ಮಾಣವಾಗುತ್ತಿದ್ದು, ನಾಲ್ಕು ಲಕ್ಷ ಜನರಿಗೆ ಆಸನ ವ್ಯವಸ್ಥೆ ಕಲ್ಪಿಸಲು ಅಮೃತ ಮಹೋತ್ಸವ ಸಮಿತಿ ನಿರ್ಧರಿಸಿದೆ. ರಾಹುಲ್ ಗಾಂಧಿ ಮತ್ತಿತರ ಗಣ್ಯರು ಕಾರ್ಯಕ್ರಮಕ್ಕೆ ಬರಲು ಎರಡು ಹೆಲಿಪ್ಯಾಡ್‌ಗಳು ಸಿದ್ಧವಾಗುತ್ತಿದೆ.

ಅಂದು ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ಮೊದಲು ಸಂಗೀತ ನಿರ್ದೇಶಕ ಹಂಸಲೇಖ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. 12 ಗಂಟೆಗೆ ವೇದಿಕೆ ಕಾರ್ಯಕ್ರಮ ಆರಂಭವಾಗಲಿದ್ದು, ಇದು ಎರಡು ಗಂಟೆ ಕಾಲ ನಡೆಯಲಿದೆ.

ಐದು ಲಕ್ಷ ಮಂದಿಗೆ ಪುಲಾವ್, ಮೊಸರನ್ನ ಮತ್ತು ಸಿಹಿ ತಿಂಡಿಯ ಭೋಜನ ವ್ಯವಸ್ಥೆ, ಮಳೆ ಬಂದರೆ ಯಾವುದೇ ಸಮಸ್ಯೆ ಆಗದಂತೆ ಪೆಂಡಾಲ್ ವ್ಯವಸ್ಥೆ ಮಾಡಲಾಗುತ್ತಿದೆ.

ಕಾರ್ಯಕ್ರಮದ ಸ್ಥಳದಲ್ಲಿ ಸಿದ್ದರಾಮಯ್ಯ ಅವರ ಕುರಿತ ಛಾಯಾಚಿತ್ರ ಪ್ರದರ್ಶನ ನಡೆಯಲಿದೆ. ಹಿಂದಿನ ದಿನ (ಆ. 2ರ ರಾತ್ರಿ) ಲೇಸರ್ ಶೋ, ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿದೆ ಎಂದು ಸಮಿತಿಯ ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿನ ಸಾಧನೆಗಳನ್ನು ವಿವರಿಸುವ ಪುಸ್ತಕವೂ ಸೇರಿದಂತೆ ಮೂರು ಪುಸ್ತಕಗಳು ಕಾರ್ಯಕ್ರಮದಲ್ಲಿ ಬಿಡುಗಡೆ ಆಗಲಿದೆ. ಕಾರ್ಯಕ್ರಮ ವೀಕ್ಷಣೆಗೆ ಅನುಕೂಲ ಆಗುವಂತೆ ಬೃಹತ್ ಎಲ್‌ಇಡಿ ಪರದೆಗಳನ್ನೂ ಅಳವಡಿಸಲಾಗುವುದು ಎಂದೂ ಮೂಲಗಳು ಹೇಳಿವೆ.

'ಜನರ ಆಶೀರ್ವಾದ ಸಿಗಬೇಕಲ್ಲ'

ಬೆಂಗಳೂರು: 'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿ ಆಗಲು ಬಯಸಿರಬಹುದು. ಆದರೆ ಅವರಿಗೆ ಜನರ ಆಶೀರ್ವಾದ ಸಿಗಬೇಕಲ್ಲ' ಎಂದು ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ಹೇಳಿದ್ದಾರೆ.

'ಸಿದ್ದರಾಮಯ್ಯ ಆಸೆ ಪಡುವುದು ತಪ್ಪಲ್ಲ. ಅವರಿಗೆ ಜನಾದೇಶ ಸಿಗುತ್ತದೆಯೋ ಇಲ್ಲವೋ ಎಂಬುದು 2023 ಚುನಾವಣೆ ನಂತರ ಗೊತ್ತಾಗುತ್ತದೆ. ದಾವಣಗೆರೆಯಲ್ಲಿ 'ಸಿದ್ದರಾಮೋತ್ಸವ' ಆಯೋಜಿಸಿದ್ದಾರೆ. ಇದರಿಂದ ಬಿಜೆಪಿಗೆ ಯಾವುದೇ ಆತಂಕವಿಲ್ಲ. ಕಾಂಗ್ರೆಸ್‌ನವರು ಕಾರ್ಯಕ್ರಮ ಆಯೋಜಿಸಿದ್ದಾರೆ. ನಮ್ಮ ಪಕ್ಷದ ಕಾರ್ಯಕ್ರಮ ನಾವು ಆಯೋಜನೆ ಮಾಡುತ್ತಿದ್ದೇವೆ' ಎಂದು ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

ಮುಂದಿನ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಸರ್ಕಾರ ಮತ್ತು ಬಿಜೆಪಿಯ ಮುಂದಿನ ನಡೆಯನ್ನು ದೊಡ್ಡಬಳ್ಳಾಪುರದಲ್ಲಿ ಇದೇ 28 ರಂದು ನಡೆಯುವ ಜನೋತ್ಸವ ಕಾರ್ಯಕ್ರಮದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಹಿರಂಗಪಡಿಸಲಿದ್ದಾರೆ ಎಂದರು.

ಈ ಕಾರ್ಯಕ್ರಮದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಧನೆಗಳನ್ನು ರಾಜ್ಯದ ಜನತೆಗೆ ವಿವರಿಸಲಾಗುವುದು. ಯಡಿಯೂರಪ್ಪ ಮತ್ತು ಬೊಮ್ಮಾಯಿ ಸರ್ಕಾರದ ಸಾಧನೆಗಳನ್ನು ಅಂದು ಫಲಾನುಭವಿಗಳೇ ಹೇಳಲಿದ್ದಾರೆ ಎಂದರು.

ವ್ಯಕ್ತಿ ವೈಭವೀಕರಣಕ್ಕೆ 'ಸಿದ್ದರಾಮೋತ್ಸವ'

ಬೆಂಗಳೂರು: 'ರಾಜ್ಯದ ಜನರು ಸರ್ಕಾರದ ಜನೋತ್ಸವದಂತಹ ಕಾರ್ಯಕ್ರಮಗಳನ್ನು ಮೆಚ್ಚುತ್ತಾರೆಯೇ ಹೊರತು ವ್ಯಕ್ತಿ ವೈಭವೀಕರಣದ ಸಿದ್ದರಾಮೋತ್ಸವ ತಿರಸ್ಕರಿಸಲಿದ್ದಾರೆ' ಎಂದು ಕನ್ನಡ–ಸಂಸ್ಕೃತಿ ಸಚಿವ ಸುನಿಲ್‌ಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಜನರು ಒಂದು ಪಕ್ಷದ ಸಿದ್ಧಾಂತ, ವ್ಯಕ್ತಿಯ ವಿಚಾರಧಾರೆ, ಸರ್ಕಾರದ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಒಪ್ಪಿಕೊಳ್ಳುತ್ತಾರೆ. ವ್ಯಕ್ತಿಯನ್ನು ಆರಾಧಿಸುವ ಉತ್ಸವಗಳನ್ನು ಒಪ್ಪಿಕೊಳ್ಳುವುದಿಲ್ಲ' ಎಂದರು.

'ನಮ್ಮ ಸರ್ಕಾರ ಮೂರು ವರ್ಷಗಳ ಅವಧಿಯಲ್ಲಿ ಏನು ಮಾಡಿದೆ ಎಂಬುದನ್ನು ಜನೋತ್ಸವದಲ್ಲಿ ಮುಂದಿಡುತ್ತೇವೆ. ಆದರೆ ಕಾಂಗ್ರೆಸ್ ವ್ಯಕ್ತಿ ಆಧಾರಿತ ಕಾರ್ಯಕ್ರಮಗಳನ್ನು ಮಾಡುತ್ತದೆ. ಇದೇ ನಮಗೂ ಮತ್ತು ಕಾಂಗ್ರೆಸ್ ಪಕ್ಷಕ್ಕಿರುವ ವ್ಯತ್ಯಾಸ' ಎಂದರು.

'ಎಐಸಿಸಿ ಜಮೀರ್ ಅವರಿಗೆ ನೋಟಿಸ್ ಕೊಟ್ಟಿರುವುದನ್ನು ನೋಡಿದರೆ, ಅದು ಪರೋಕ್ಷವಾಗಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ಕೊಡುವ ಮೂಲಕ ಕಡಿವಾಣ ಹಾಕಿದಂತಿದೆ' ಎಂದು ಲೇವಡಿ ಮಾಡಿದರು.

'ನಮ್ಮ ಸರ್ಕಾರದ ಕಾರ್ಯಕ್ರಮಗಳು ಹಾಗೂ ಯೋಜನೆಗಳು ಪ್ರತಿಯೊಬ್ಬ ಫಲಾನುಭವಿಗಳಿಗೂ ತಲುಪಬೇಕು ಎಂಬುದು ನಮ್ಮ ಗುರಿ. ಈ ಉದ್ದೇಶದಿಂದ ಇದೇ 28 ರಂದು ದೊಡ್ಡಬಳ್ಳಾಪುರದಲ್ಲಿ ಜನೋತ್ಸವ, ಬಳಿಕ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿಯೂ ಜನೋತ್ಸವ ನಡೆಯಲಿದೆ' ಎಂದರು.

ಬಜರಂಗದಳ ಮುಖಂಡನ ಹತ್ಯೆ

ಸುಳ್ಯ (ದಕ್ಷಿಣ ಕನ್ನಡ): ತಾಲ್ಲೂಕಿನ ಬೆಳ್ಳಾರೆಯಲ್ಲಿ ಬಜರಂಗದಳದ ಮುಖಂಡ, ಅಕ್ಷಯ ಕೋಳಿ ಅಂಗಡಿ ಮಾಲೀಕ ಪ್ರವೀಣ್ ನೆಟ್ಟಾರು (32) ಎಂಬುವರನ್ನು ಮಂಗಳವಾರ ರಾತ್ರಿ ಹತ್ಯೆ ಮಾಡಲಾಗಿದೆ.


ಪ್ರವೀಣ್ ನೆಟ್ಟಾರು

ರಾತ್ರಿ 9 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಬಂದ ಅಪರಿಚಿತರು ತಲವಾರಿನಿಂದ ಪ್ರವೀಣ್ ಅವರ ತಲೆಗೆ ಹೊಡೆದು ಪರಾರಿಯಾಗಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಸಂದರ್ಭದಲ್ಲಿ ಮೃತಪಟ್ಟಿದ್ದಾರೆ.

ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಕೇಂದ್ರ ಪರಿಹಾರ ಸಮಿತಿಗೆ ಬಸವರಾಜ್ ನಾಯಕ ಅಧ್ಯಕ್ಷ

ಬೆಂಗಳೂರು: ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷರನ್ನಾಗಿ ದಾವಣಗೆರೆಯ ಬಸವರಾಜ್ ನಾಯಕ ಅವರನ್ನು ನೇಮಿಸಿ ಮಂಗಳವಾರ ಆದೇಶ ಹೊರಡಿಸಲಾಗಿದೆ.

52 ನಿಗಮ, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರ ನೇಮಕಾತಿಯನ್ನು ರದ್ದುಗೊಳಿಸಿ ಜುಲೈ 12ರಂದು ಆದೇಶ ಹೊರಡಿಸಲಾಗಿತ್ತು. ತೆರವಾದ ಹುದ್ದೆಗಳ ಪೈಕಿ 25 ನಿಗಮ, ಮಂಡಳಿ, ಪ್ರಾಧಿಕಾರಗಳಿಗೆ ನೂತನ ಅಧ್ಯಕ್ಷರನ್ನು ನೇಮಿಸಿ ಸೋಮವಾರ ಆದೇಶ ಹೊರಡಿಸಲಾಗಿತ್ತು.

ಆಸ್ತಿ ಗುತ್ತಿಗೆಗೆ ನೀಡಲು ಕೆಎನ್‌ಎನ್‌ಎಲ್ ನಿರ್ಧಾರ • ಖಾತೆ ವರ್ಗಾವಣೆ ಕೋರಿದ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ

ಬಿಜೆಪಿ ಹೆಸರಿಗೆ ಜಮೀನು ನೋಂದಣಿಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯು ಶಿವಮೊಗ್ಗದಲ್ಲಿ ಆರಂಭಿಸಲು ಉದ್ದೇಶಿಸಿರುವ ರಾಜಕೀಯಕ್ಕೆ ಸಂಬಂಧಿಸಿದ ಅಧ್ಯಯನ, ಸಂಶೋಧನೆ ಮತ್ತು ತರಬೇತಿ ಕೇಂದ್ರಕ್ಕೆ ಕರ್ನಾಟಕ ನೀರಾವರಿ ನಿಗಮಕ್ಕೆ (ಕೆಎನ್‌ಎನ್‌ಎಲ್) ಸೇರಿದ 2 ಎಕರೆ ಜಮೀನನ್ನು ದೀರ್ಘಾವಧಿಗೆ ಬಾಡಿಗೆಗೆ ನೀಡಲು ಪ್ರಕ್ರಿಯೆ ಆರಂಭವಾಗಿದೆ.

ಆದರೆ, ಈ ಬೆಳವಣಿಗೆ ಮಧ್ಯೆಯೇ ಜಮೀನಿನ ಖಾತೆಯನ್ನೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಹೆಸರಿಗೆ ನೋಂದಣಿ ಮಾಡುವಂತೆ ಕೋರಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರು ಅರ್ಜಿ ಸಲ್ಲಿಸಿದ್ದಾರೆ.

ಅಕ್ರಮ ನಡೆದಿಲ್ಲ: ಟಿ.ಡಿ. ಮೇಘರಾಜ್

‘ಜಮೀನು ಮಂಜೂರಾತಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ₹ 20 ಲಕ್ಷ ಪಾವತಿಸಲಾಗಿದೆ. ಬಿಜೆಪಿಯ ಬೈಲಾ ಪ್ರಕಾರ, ಪಕ್ಷಕ್ಕೆ ಸೇರಿದ ಎಲ್ಲ ಸ್ಥಿರಾಸ್ತಿಗಳನ್ನೂ ರಾಷ್ಟ್ರೀಯ ಅಧ್ಯಕ್ಷರ ಹೆಸರಿನಲ್ಲಿ ನೋಂದಣಿ ಮಾಡಲಾಗುತ್ತದೆ. ಅದರ ಪ್ರಕಾರವೇ ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಸಲ್ಲಿಸಿದ್ದೇನೆ’ ಎಂದು ಬಿಜೆಪಿ ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಡಿ. ಮೇಘರಾಜ್ ಪ್ರತಿಕ್ರಿಯಿಸಿದರು.

ಶಿವಮೊಗ್ಗ ನಗರದ ಆಲ್ಕೊಳದ ಸರ್ವೆ ನಂಬರ್ 36 ಮತ್ತು 37ರಲ್ಲಿ ಕೆಎನ್‌ಎನ್‌ಎಲ್ ಹೊಂದಿರುವ 2 ಎಕರೆ ಜಮೀನನ್ನು ಬಿಜೆಪಿಯ ಅಧ್ಯಯನ ಕೇಂದ್ರಕ್ಕೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಏಪ್ರಿಲ್ 4ರಂದು ನಡೆದ ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಬಾಡಿಗೆಗೆ ನೀಡುವ ಜಮೀನಿನ ಖಾತೆ ವರ್ಗಾವಣೆ ಕೋರಿ ಬಿಜೆಪಿ ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಡಿ. ಮೇಘರಾಜ್ ಮೇ 20ರಂದು ಮನವಿ ಮಾಡಿದ್ದಾರೆ.

ಜಲ ಸಂಪನ್ಮೂಲ ಇಲಾಖೆಯಿಂದ ಬಂದ ಪತ್ರವನ್ನು ಆಧರಿಸಿ ಕೆಎನ್‌ಎನ್‌ಎಲ್ ನಿರ್ದೇಶಕ ಮಂಡಳಿಯು ಈ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದೆ. ಲೋಕೋಪಯೋಗಿ ಇಲಾಖೆಯು ನಿಗದಿಪಡಿಸುವ ದರದಂತೆ ಬಾಡಿಗೆ ವಿಧಿಸಿ, 30 ವರ್ಷಗಳಿಗೊಮ್ಮೆ ಗುತ್ತಿಗೆ ನವೀಕರಿಸುವ ಷರತ್ತಿನೊಂದಿಗೆ ಈ ಜಮೀನನ್ನು ಬಿಜೆಪಿಗೆ ನೀಡುವ ತೀರ್ಮಾನ ಕೈಗೊಳ್ಳಲಾಗಿದೆ. ಈ ನಿರ್ಧಾರಕ್ಕೆ ಸಚಿವ ಸಂಪುಟದ ಒಪ್ಪಿಗೆ ಪಡೆಯುವ ನಿರ್ಣಯವನ್ನೂ ಏ.20ರ ಸಭೆಯಲ್ಲಿ ಕೈಗೊಳ್ಳಲಾಗಿತ್ತು.

ಬಿಜೆಪಿಗೆ ಅಧ್ಯಯನ ಕೇಂದ್ರ ಆರಂಭಿಸಲು ಬಾಡಿಗೆಗೆ ನೀಡಲು ಉದ್ದೇಶಿಸಿರುವ ಜಮೀನು ರಾಷ್ಟ್ರೀಯ ಹೆದ್ದಾರಿ 206ರ ಪಕ್ಕದಲ್ಲೇ ಇದೆ. ಈ ಜಮೀನನ್ನು ಬಿಜೆಪಿಗೆ ಮಂಜೂರು ಮಾಡಲಾಗಿದೆ ಎಂದು ತಮ್ಮ ಪತ್ರದಲ್ಲಿ ಉಲ್ಲೇಖಿಸಿರುವ ಮೇಘರಾಜ್, ಆಸ್ತಿಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಹೆಸರಿಗೆ ನೋಂದಣಿ ಮಾಡಿಕೊಡುವಂತೆ ಕೆಎನ್‌ಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸಿರುವ ಪತ್ರದಲ್ಲಿ ಕೋರಿದ್ದಾರೆ.

‘ಆಸ್ತಿ ಪರಭಾರೆ ಪ್ರಸ್ತಾವ ಇಲ್ಲ’: ‘ನಿಗಮವು ಶಿವಮೊಗ್ಗದಲ್ಲಿ ಹೊಂದಿರುವ ಜಮೀನಿನಲ್ಲಿ 2 ಎಕರೆಯನ್ನು ಬಿಜೆಪಿಯ ಅಧ್ಯಯನ ಕೇಂದ್ರಕ್ಕೆ ಬಾಡಿಗೆ ಆಧಾರದಲ್ಲಿ ಗುತ್ತಿಗೆ ನೀಡುವ ಪ್ರಸ್ತಾವಕ್ಕೆ ಮಾತ್ರ ನಿರ್ದೇಶಕ ಮಂಡಳಿ ಸಭೆ ಒಪ್ಪಿಗೆ ನೀಡಿತ್ತು. ಜಮೀನನ್ನು ಪರಭಾರೆ ಮಾಡುವ ಯಾವುದೇ ಪ್ರಸ್ತಾವವೂ ನಿಗಮದ ಮುಂದಿಲ್ಲ. ನಿಗಮದ ಬೈಲಾದಲ್ಲಿ ಅದಕ್ಕೆ ಅವಕಾಶವೂ ಇಲ್ಲ’ ಎಂದು ಕೆಎನ್‌ಎನ್‌ಎಲ್ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಬಾಡಿಗೆಗೆ ನೀಡುವ ಪ್ರಸ್ತಾವಕ್ಕೆ ಮಾತ್ರ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು. ಸಕ್ಷಮ ಪ್ರಾಧಿಕಾರಗಳ ಅನುಮತಿ ಪಡೆದು, ಸಚಿವ ಸಂಪುಟದ ಒಪ್ಪಿಗೆ ಪಡೆದ ಬಳಿಕ ಮಾತ್ರವೇ ಬಾಡಿಗೆಗೆ ನೀಡಲು ಅವಕಾಶವಿದೆ. ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರು ಆಸ್ತಿ ನೋಂದಣಿಗೆ ಮನವಿ ಮಾಡಿರುವ ಪತ್ರ ನಿಗಮದ ಕೇಂದ್ರ ಕಚೇರಿಗೆ ಬಂದಿಲ್ಲ’ ಎಂದು ಅವರು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	13,055	11,586
ಹಾರಂಗಿ	2,859	2,856.39	2,760	1,800
ಕಬಿನಿ	2284.00	2,283.78	5,549	6,000
ಹೇಮಾವತಿ	2,922	2,922	2,280	2,225
ಲಿಂಗನಮಕ್ಕಿ	1,819	1,798	10,553	5,885
ಸೂಪಾ (ಮೀ)	564	541.70	5,738	2,669
ಮಾಣಿ	595	584	1,142	-
ತುಂಗಭದ್ರಾ	1,633	1,632.76	35,541	35,541
ಮಲಪ್ರಭಾ	2079.5	2068.70	1,586	394
ಘಟಪ್ರಭಾ	2175	2,154.83	5,680	162
ಭದ್ರಾ	186	185	11,845	8,847
ಆಲಮಟ್ಟಿ (ಮೀ)	519.6	518.31	32,041	6,451
ನಾರಾಯಣಪುರ (ಮೀ)	492.25	491.62	7,500	-

* ನೆಲಮಟ್ಟದಿಂದ

ಸಂಕ್ಷಿಪ್ತ ಸುದ್ದಿ

ಕಿರಣ್ ಜವಳಿ ರಾಜ್ಯ ಪ್ರಾಸಿಕ್ಯೂಟರ್



ಕಿರಣ್ ಜವಳಿ

ಬೆಂಗಳೂರು: ಹೈಕೋರ್ಟ್‌ನ ಹಿರಿಯ ವಕೀಲ ಕಿರಣ್ ಎಸ್. ಜವಳಿ ಅವರನ್ನು ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗೆ ನೇಮಕ ಮಾಡಲಾಗಿದ್ದು, ಈ ಕುರಿತಂತೆ ರಾಜ್ಯ ಕಾನೂನು ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ವಿಜಯಕುಮಾರ್ ಎಂ.ಶೀಲವಂತ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಕಿರಣ್ ಅವರನ್ನು ನೇಮಕ ಮಾಡಲಾಗಿದ್ದು, ಇವರ ಅಧಿಕಾರಾವಧಿ ಎರಡು ವರ್ಷಗಳವರೆಗೆ ಇರುತ್ತದೆ.

‘ಚುನಾವಣೆ: ನಿಖಿಲ್ ಸ್ಪರ್ಧಿಸುವುದಿಲ್ಲ’

ಮದ್ದೂರು: ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸುವುದಿಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಮಗ, ರಾಜ್ಯದಾದ್ಯಂತ ಪ್ರವಾಸ ಕೈಗೊಂಡು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸುತ್ತಿದ್ದಾನೆ’ ಎಂದರು.

‘ಸೆಂಟ್ರಲ್ ವಿಸ್ತಾದಲ್ಲಿ ‘ಅನುಭವ ಮಂಟಪ’ ಮಾದರಿ ಸ್ಥಾಪನೆ’

ಪ್ರಜಾವಾಣಿ ವಾರ್ತೆ

ಧಾರವಾಡ: ದೆಹಲಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ನೂತನ ಸಂಸತ್ ಭವನ ಸೆಂಟ್ರಲ್ ವಿಸ್ತಾ ಕಟ್ಟಡದಲ್ಲಿನ ವಸ್ತು ಸಂಗ್ರಹಾಲಯದಲ್ಲಿ 12ನೇ ಶತಮಾನದ ‘ಅನುಭವ ಮಂಟಪ’ದ ಮಾದರಿ ಸ್ಥಾಪಿಸಲು ಉದ್ದೇಶಿಸಿದ್ದು, ಈ ಕುರಿತ ಮಾಹಿತಿ ಪೂರೈಸುವಂತೆ ಕರ್ನಾಟಕ ವಿಶ್ವವಿದ್ಯಾಲಯವನ್ನು ಕೇಂದ್ರ ಸಂಸ್ಕೃತಿ ಸಚಿವಾಲಯ ಕೋರಿದೆ.

‘ಭಾರತದ ಲೋಕತಂತ್ರ’ ಎಂಬ ವಿಷಯ ಕುರಿತ ವಿಭಾಗದಲ್ಲಿ ‘ಅನುಭವ ಮಂಟಪ’ದ ಮಾದರಿಯು ಇರಲಿದೆ ಎಂದು ಕವಿವಿಗೆ ಬರೆದ ಪತ್ರದಲ್ಲಿ ಕೇಂದ್ರದ ನಿರ್ದೇಶಕಿ ಡಾ. ಪ್ರಿಯಾಂಕಾ ಮಿಶ್ರಾ ತಿಳಿಸಿದ್ದಾರೆ.

ಪೂರಕ ಮಾಹಿತಿ ಸಂಗ್ರಹಿಸುವ ಹೊಣೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಬಸವೇಶ್ವರ ಪೀಠಕ್ಕೆ ಕುಲಪತಿ ಪ್ರೊ. ಕೆ.ಬಿ.ಗುಡಸಿ ನೀಡಿದ್ದಾರೆ.

> **ತಜ್ಞರ ಸಮಿತಿಯನ್ನು ರಚಿಸಲಾಗುವುದು. ಸಮಿತಿಯ ಶಿಫಾರಸಿನಂತೆ ಪೂರಕ ಮಾಹಿತಿ ಕಳುಹಿಸಿಕೊಡಲಾಗುವುದು**
> **ಪ್ರೊ.ಕೆ.ಬಿ.ಗುಡಸಿ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕೇಂದ್ರದ ಸಂಯೋಜಕ ಡಾ. ಸಿ.ಎಂ. ಕುಂದಗೋಳ, ‘ಅನುಭವ ಮಂಟಪದ ಮಾದರಿ, ವಚನ ಸಾಹಿತ್ಯದ ಹಸ್ತಪ್ರತಿ ಹಾಗೂ ಲಭ್ಯವಿರುವ ಇತರ ಮಾಹಿತಿಗಳನ್ನು ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರವು ಕೇಳಿದೆ. ಈ ಬಗ್ಗೆ ಪರಿಣತರ ತಂಡದೊಂದಿಗೆ ಪೂರ್ವಭಾವಿ ಸಭೆ ನಡೆಸಲಾಗುತ್ತಿದೆ’ ಎಂದರು.

ಮಹದಾಯಿ: ಯೋಜನಾ ಮೊತ್ತ ಇಳಿಕೆ

ಒಂದನೇ ಪುಟದಿಂದ...

ಹಾಗಾಗಿ, ಅಗತ್ಯ ಇರುವ ಕಡೆಗಳಲ್ಲಷ್ಟೇ ಕಾಲುವೆ ನಿರ್ಮಿಸಿ ಉಳಿದ ಕಡೆಯಲ್ಲಿ ಪೈಪ್ ಮೂಲಕ (ರಸ್ತೆ ಅಂಚಿನಲ್ಲಿ) ನೀರು ಕೊಂಡೊಯ್ಯಲು ಪರಿಷ್ಕೃತ ಡಿಪಿಆರ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಇದರಿಂದಾಗಿ, ಅರಣ್ಯ ಭೂಮಿ ಸ್ವಾಧೀನ ಪ್ರಮಾಣ 59 ಹೆಕ್ಟೇರ್‌ಗೆ ಇಳಿದಿದೆ.



40 ಹೆಕ್ಟೇರ್‌ಗಿಂತ ಕಡಿಮೆ ಅರಣ್ಯ ಭೂಮಿ ಸ್ವಾಧೀನಕ್ಕೆ ಕೇಂದ್ರ ಪರಿಸರ ಸಚಿವಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯಿಂದ ಅನುಮತಿ ಪಡೆದರೆ ಸಾಕು. ಹೀಗಾಗಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಎರಡು ಹಂತಗಳಾಗಿ ವಿಭಜಿಸಿ ಎರಡು ಪ್ರತ್ಯೇಕ ಪ್ರಸ್ತಾವಗಳನ್ನು ಪ್ರಾದೇಶಿಕ ಕಚೇರಿಗೆ ಸಲ್ಲಿಸಲಾಗಿದೆ. ಪ್ರಾದೇಶಿಕ ಕಚೇರಿಯಿಂದ ಶೀಘ್ರ ಅನುಮೋದನೆ ಸಿಗುವ ವಿಶ್ವಾಸ ಇದೆ ಎಂದು ಕರ್ನಾಟಕ ಸರ್ಕಾರದ ಮೂಲಗಳು ತಿಳಿಸಿವೆ.

ಆರಂಭದಲ್ಲಿ 28 ಮೀಟರ್ ಎತ್ತರದ ಅಣೆಕಟ್ಟೆ ನಿರ್ಮಾಣಕ್ಕೆ ಯೋಜಿಸಲಾಗಿತ್ತು. ಇದೀಗ ಅಣೆಕಟ್ಟೆಯ ಎತ್ತರವನ್ನು 11 ಮೀಟರ್‌ಗೆ ಕುಗ್ಗಿಸಲಾಗಿದೆ ಎಂದು ಡಿಪಿಆರ್‌ನಲ್ಲಿ ತಿಳಿಸಲಾಗಿದೆ.

ಮಹದಾಯಿ ನದಿ ನೀರು ವಿವಾದ ನ್ಯಾಯಾಧೀಕರಣವು 2018ರ ಆಗಸ್ಟ್ 14ರಂದು ಕಳಸಾ–ಬಂಡೂರಿ ಯೋಜನೆಗೆ 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿದೆ. ಬಳಿಕ ಕರ್ನಾಟಕ ಸರ್ಕಾರವು ಯೋಜನೆಯ ಪೂರ್ವ- ಕಾರ್ಯಸಾಧ್ಯತಾ ವರದಿಗಳನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿತ್ತು. ಇದನ್ನು ಪರಿಶೀಲಿಸಿದ ಆಯೋಗವು, ‘ನ್ಯಾಯಮೂರ್ತಿ ಬಚಾವತ್ ಆಯೋಗದ ವರದಿಯ ಪ್ರಕಾರ, ಈ ಯೋಜನೆಗೆ ಕೃಷ್ಣಾ ನದಿ ತೀರದ ಇತರ ರಾಜ್ಯಗಳ ಅನುಮತಿ ಕೂಡ ಅಗತ್ಯ’ ಎಂದು ಸ್ಪಷ್ಟಪಡಿಸಿತ್ತು. ‘ಬಚಾವತ್ ಅಯೋಗದ ಷರತ್ತಿನ ಪ್ರಕಾರ, ಮಹದಾಯಿ ಯೋಜನೆಗೆ ನದಿ-ತೀರದ ಇತರ ರಾಜ್ಯಗಳ ಅನುಮತಿ ಪಡೆಯುವುದು ಕಡ್ಡಾಯವಲ್ಲ’ ಎಂದು ಕರ್ನಾಟಕ ಸರ್ಕಾರವು ಆಯೋಗಕ್ಕೆ ಸ್ಪಷ್ಟನೆ ನೀಡಿದೆ.

‘ಯೋಜನೆಗೆ ಅನುಮೋದನೆ ನೀಡುವಂತೆ ಒತ್ತಾಯಿಸಿ ಕೇಂದ್ರ ಜಲಶಕ್ತಿ ಸಚಿವರಿಗೆ ನಿರಂತರ ಒತ್ತಡ ಹೇರಲಾಗಿದೆ. ಕೇಂದ್ರ ಜಲ ಆಯೋಗವು ಕೆಲವೇ ದಿನಗಳಲ್ಲಿ ಪೂರ್ವ–ಕಾರ್ಯಸಾಧ್ಯತಾ ವರದಿಗೆ ಒಪ್ಪಿಗೆ ನೀಡುವ ವಿಶ್ವಾಸ ಇದೆ. ಬಳಿಕ ಡಿಪಿಆರ್‌ಗೆ ಅನುಮೋದನೆ ಪಡೆಯುವುದು ಕಷ್ಟದ ಕೆಲಸವೇನಲ್ಲ’ ಎಂದು ಕರ್ನಾಟಕ ಸರ್ಕಾರದ ಮೂಲಗಳು ತಿಳಿಸಿವೆ.



ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಸಂಗಾವಿ(ಎಂ) ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಕಾಗಿಣಾ ನದಿಯ ಸೇತುವೆ ಜಲಾವೃತ ಆಗಿರುವುದು

ಕಲಬುರಗಿ, ಯಾದಗಿರಿಯಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ.

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನಾದ್ಯಂತ ಸೋಮವಾರ ರಾತ್ರಿ ಸುರಿದ ಮಳೆಯಿಂದ ಹಳ್ಳಗಳು, ನಾಲಾಗಳು ತುಂಬಿ ಹರಿದಿವೆ. ಕಾಗಿಣಾ ನದಿಯಲ್ಲಿ ಪ್ರವಾಹ ಹೆಚ್ಚಿದ್ದು, ನದಿ ಪಾತ್ರದ ಹೊಲಗಳಲ್ಲಿ ನೀರು ನುಗ್ಗಿದೆ. ತಾಲ್ಲೂಕಿನ ಸಂಗಾವಿ (ಎಂ) ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಕಾಗಿಣಾ ಸೇತುವೆ ಜಲಾವೃತವಾಗಿದ್ದು, ಸಂಪರ್ಕ ಕಡಿತವಾಗಿದೆ.

ಚಿಂಚೋಳಿ ತಾಲ್ಲೂಕಿನ ಜಟ್ಟೂರು ಸಮೀಪದ ಕಾಗಿಣಾ ನದಿಯ ಪ್ರವಾಹದ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿದೆ. ಶವವನ್ನು ದಡಕ್ಕೆ ತರಬೇಕೆನ್ನುವಷ್ಟರಲ್ಲಿ ಶವ ಮುಂದೆ ಹೋಯಿತು ಎಂದು ಚಿಂಚೋಳಿ ತಾಲ್ಲೂಕಿನ ಸುಲೇಪೇಟೆ ಠಾಣೆ ಪೊಲೀಸರು ತಿಳಿಸಿದ್ದಾರೆ. ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಹೊಲಗಳಿಗೆ ನೀರು ನುಗ್ಗಿದೆ.

ಸಾವರ್ಕರ್ ಕ್ಷಮಾಪತ್ರ ನೀಡಿದ್ದು ಜೀವ ಭಯದಿಂದಲ್ಲ: ಸಾತ್ಯಕಿ

ಪ್ರಜಾವಾಣಿ ವಾರ್ತೆ



ಸಾತ್ಯಕಿ ಸಾವರ್ಕರ್

ಹುಬ್ಬಳ್ಳಿ: ‘ವಿ.ಡಿ. ಸಾವರ್ಕರ್ ಅವರು ರಾಜತಾಂತ್ರಿಕ ಭಾಗವಾಗಿ ಬ್ರಿಟಿಷರಿಗೆ ಕ್ಷಮಾಪತ್ರ ಕೊಟ್ಟಿದ್ದೇ ಹೊರತು ಜೀವ ಭಯದಿಂದ ಅಲ್ಲ’ ಎಂದು ಅವರ ಮರಿಮೊಮ್ಮಗ ಸಾತ್ಯಕಿ ಸಾವರ್ಕರ್ ಹೇಳಿದರು.

ನಗರದ ಸವಾಯಿ ಗಂಧರ್ವ ಸಭಾಭವನದಲ್ಲಿ ನಿರಾಮಯ ಫೌಂಡೇಷನ್ ಮಂಗಳವಾರ ಹಮ್ಮಿಕೊಂಡಿದ್ದ ‘ಕಾರ್ಗಿಲ್ ವಿಜಯ ದಿವಸ್ ಮತ್ತು ಅಮೃತ ಸ್ವಾತಂತ್ರ್ಯೋತ್ಸವ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಾವರ್ಕರ್ ಅವರು ರಾಜತಂತ್ರದಿಂದ ಬ್ರಿಟಿಷರ ವಿರುದ್ಧ ಹಿಂದೂಗಳನ್ನು ಒಗ್ಗೂಡಿಸುವಲ್ಲಿ ಮುಂದಾಗಿದ್ದರು. ಇದನ್ನು ಅರಿಯದೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿಲ್ಲ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. 25 ವರ್ಷಗಳ ಎರಡು ಅವಧಿಯ ಅಂಡಮಾನ್ ಜೈಲುಶಿಕ್ಷೆ ವಿಧಿಸಿದಾಗ, ಅಲ್ಲಿಂದ ಬದುಕಿ ಬರುವ ಸಾಧ್ಯತೆ ಇರಲಿಲ್ಲ. ಸ್ವಾತಂತ್ರ್ಯ ಹೋರಾಟದ ಉದ್ದೇಶಕ್ಕೆ ಕ್ಷಮಾಪತ್ರ ನೀಡಿದ್ದರು. ಈಗ ಅದನ್ನೇ ತಿರುಚಿ ಹೇಳಲಾಗುತ್ತಿದೆ’ ಎಂದರು.

‘ಭಾರತದ ಭವಿಷ್ಯದ ದೃಷ್ಟಿಯಲ್ಲಿ ಅಗ್ನಿಪಥ ಯೋಜನೆ ಪ್ರಮುಖವಾಗಿದ್ದು, ಹಿಂದೂ ಯುವಕರು ಹೆಚ್ಚಿನ ಲಾಭ ಪಡೆಯಬೇಕು. ಸೈನ್ಯ, ಪೊಲೀಸ್ ಮತ್ತು ರಾಜಕೀಯದಲ್ಲಿ ಹಿಂದೂಪರ ಮನಸ್ಥಿತಿ ಇದ್ದರೆ ಮಾತ್ರ ದೇಶದಲ್ಲಿ ತ್ರಿವರ್ಣ ಧ್ವಜ ಶಾಶ್ವತವಾಗಿ ಇರಲು ಸಾಧ್ಯ ಎಂದು ಅವರು ಹೇಳಿದರು.

‘ಮುಸ್ಲಿಂ ಮೀಸಲಾತಿ ಹೆಚ್ಚಿಸಿ’

ಬಾಗಲಕೋಟೆ: ಮುಸ್ಲಿಂ ಮೀಸಲಾತಿ ಪ್ರಮಾಣವನ್ನು ಶೇ 4 ರಿಂದ ಶೇ 7ಕ್ಕೆ ಹೆಚ್ಚಿಸಬೇಕು ಎಂದು ಕರ್ನಾಟಕ ಮುಸ್ಲಿಂ ಯೂನಿಟಿ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡರಾದ ಅಬ್ದುಲ್‌ಜಬ್ಬಾರ್ ಕಲಬುರ್ಗಿ, ಎ.ಎ. ದಂಡಿಯಾ, ‘ಶಿಕ್ಷಣ ಹಾಗೂ ಉದ್ಯೋಗಾವಕಾಶಗಳಲ್ಲಿ ಮುಸ್ಲಿಂ ಸಮುದಾಯ ಹಿಂದುಳಿದಿದೆ’ ಎಂದು ಅವರು ತಿಳಿಸಿದರು.

‘ಒಟ್ಟು ಮೀಸಲಾತಿ ಪ್ರಮಾಣವನ್ನು ಶೇ 50 ರಿಂದ 69 ಕ್ಕೆ ಹೆಚ್ಚಿಸಲು ರಾಜ್ಯವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಈ ಸಂದರ್ಭದಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು’ ಎಂದು ಆಗ್ರಹಿಸಿದರು.

‘ವೆಂಕಟಸ್ವಾಮಿ ಆಯೋಗ, ಚಿನ್ನಪ್ಪರೆಡ್ಡಿ ಆಯೋಗಗಳು ಮುಸ್ಲಿಂ ಸಮುದಾಯದಲ್ಲಿನ 17 ವೃತ್ತಿ ಗುಂಪುಗಳನ್ನು ಹಿಂದುಳಿದ ಜಾತಿಗಳು ಎಂದು ಗುರುತಿಸಿವೆ. ಮೀಸಲಾತಿ ಹೆಚ್ಚಾದರೆ, ಅವರಿಗೂ ಶಿಕ್ಷಣದಲ್ಲಿ ಒಳ ಮೀಸಲಾತಿ ನೀಡಬಹುದು’ ಎಂದರು.

‘ರಾಜ್ಯ ಸರ್ಕಾರವು ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ₹500 ಕೋಟಿ ಅನುದಾನ ನೀಡಬೇಕು’ ಎಂದು ಆಗ್ರಹಿಸಿದರು.

ಕೋವಿಡ್‌ನಿಂದ ವೃದ್ಧ ಸಾವು



ಹುಬ್ಬಳ್ಳಿ: ಕೋವಿಡ್‌ಗೆ ತುತ್ತಾಗಿದ್ದ ನಗರದ 77 ವರ್ಷದ ವ್ಯಕ್ತಿ ಭಾನುವಾರ ಮೃತಪಟ್ಟಿದ್ದಾರೆ.

ಮಧುಮೇಹ, ಅಧಿಕ ರಕ್ತದೊತ್ತಡ ಹಾಗೂ ಹೃದಯ ಸಂಬಂಧಿ ಕಾಯಿಲೆಗಳಿಂದಲೂ ಅವರು ಬಳಲುತ್ತಿದ್ದರು. ಜುಲೈ 20 ರಂದು ಅವರಿಗೆ ಕೊರೊನಾ ಸೋಂಕು ತಗುಲಿದ್ದು ದೃಢಪಟ್ಟಿತ್ತು. ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಸುಭಾಷಿತ

ಟೀಕೆಗಳಿಗೆ ನಮ್ಮ ಜೀವನ, ವ್ಯಕ್ತಿತ್ವ, ನಡವಳಿಕೆಗಳೇ ಉತ್ತರ ಹೇಳಬೇಕು.

-ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ನಾವೀನ್ಯ: ಕ್ರಮಿಸಬೇಕಾದ ಹಾದಿ ಇನ್ನೂ ಬಹು ದೂರವಿದೆ

ನೀತಿ ಆಯೋಗವು ಸಿದ್ಧಪಡಿಸಿದ 'ಭಾರತ ನಾವೀನ್ಯ ಸೂಚ್ಯಂಕ-2021'ರಲ್ಲಿ ದೇಶದ ಪ್ರಮುಖ ರಾಜ್ಯಗಳ ವಿಭಾಗದಲ್ಲಿ ಕರ್ನಾಟಕ ಮೊದಲ ಸ್ಥಾನ ಗಳಿಸಿರುವುದು ಅಚ್ಚರಿಯ ಸಂಗತಿಯೇನಲ್ಲ. ಏಕೆಂದರೆ, ಇದುವರೆಗೆ ಬಂದ ಮೂರೂ ಸೂಚ್ಯಂಕಗಳಲ್ಲಿ ರಾಜ್ಯವು ಅಗ್ರಸ್ಥಾನವನ್ನು ಕಾಯ್ದುಕೊಳ್ಳುತ್ತಲೇ ಬಂದಿದೆ. ಸಾಂಸ್ಥಿಕ ಬೆಂಬಲ, ನಾವೀನ್ಯಕ್ಕೆ ಉತ್ತೇಜನ, ಮಾರುಕಟ್ಟೆ ಲಭ್ಯತೆ, ಸರ್ಕಾರದಿಂದ ದೊರೆತ ಪೋಷಣೆ, ಹಣಕಾಸು ನೆರವು, ಸಾಮರ್ಥ್ಯವೃದ್ಧಿ ಅವಕಾಶ ಮತ್ತು ಮಾರ್ಗದರ್ಶನ- ಈ ಅಂಶಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಿ ಸೂಚ್ಯಂಕವನ್ನು ಸಿದ್ಧಪಡಿಸಲಾಗಿದೆ. ನವೋದ್ಯಮಕ್ಕೆ ಉತ್ತೇಜನ ಕೊಡುವುದು ಮತ್ತು ರಾಜ್ಯಗಳಲ್ಲಿ ಅನುಸರಿಸುತ್ತಿರುವ ಅತ್ಯುತ್ತಮ ಪದ್ಧತಿಗಳು ಪರಸ್ಪರರಿಗೆ ತಿಳಿಯುವಂತೆ ಮಾಡುವುದು ಶ್ರೇಣೀಕರಣದ ಉದ್ದೇಶ. ಕರ್ನಾಟಕದ ಸಾಧನೆ ತೃಪ್ತಿಕರವಾಗಿದ್ದರೂ ಅದೇ ಖುಷಿಯಲ್ಲಿ ಮೈಮರೆಯುವಂತಿಲ್ಲ. ಈ ಸಲದ ಸೂಚ್ಯಂಕದಲ್ಲಿ, ಈಶಾನ್ಯ ರಾಜ್ಯಗಳ ವಿಭಾಗದಲ್ಲಿ ಮಣಿಪುರ ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಭಾಗದಲ್ಲಿ ಚಂಡೀಗಡ ಮೊದಲ ಸ್ಥಾನ ಪಡೆದಿವೆ. ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಯಾವ ರಾಜ್ಯ, ಎಷ್ಟೊಂದು ಪ್ರಗತಿ ಸಾಧಿಸಿದೆ ಎನ್ನುವುದಕ್ಕೂ ಈ ಸೂಚ್ಯಂಕವನ್ನು ಒಂದು ಮಾನದಂಡವಾಗಿ ನೋಡಲಾಗುತ್ತದೆ.



ಕರ್ನಾಟಕದ ಸಾಧನೆ ತೃಪ್ತಿಕರವಾಗಿದ್ದರೂ ಅದೇ ಖುಷಿಯಲ್ಲಿ ಮೈಮರೆಯುವಂತಿಲ್ಲ

ಕೈಗಾರಿಕೆ, ಕೃಷಿ ಮತ್ತು ಸೇವಾ ವಲಯದಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸುವಲ್ಲಿ ಮತ್ತು ಆರ್ಥಿಕ ಬೆಳವಣಿಗೆಗೆ ವೇಗವನ್ನು ನೀಡುವಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯವು ಚಾಲನಾ ಶಕ್ತಿಯಾಗಿವೆ. ಹೊಸ ಆಲೋಚನೆಗಳು ಮತ್ತು ತಂತ್ರಜ್ಞಾನಗಳಿಂದ ಕೂಡಿದ ನಾವೀನ್ಯವು ನವ ಉತ್ಪನ್ನ ಹಾಗೂ ಸೇವೆಗಳ ಜನಕ ಎನಿಸಿದೆ. ಅಸ್ತಿತ್ವದಲ್ಲಿರುವ ಸೇವೆಗಳ ಕ್ಷಮತೆ ಹೆಚ್ಚಿಸುವಲ್ಲಿಯೂ ಅದರ ನೆರವು ಸಿಗುತ್ತದೆ. ಯಾವ ದೇಶ ಮತ್ತು ಸಮುದಾಯವು ನಾವೀನ್ಯದಲ್ಲಿ ಮುಂದಿರುವುದಿಲ್ಲವೋ ಅದು ಅಭಿವೃದ್ಧಿಯ ವಿಷಯದಲ್ಲಿ ಉಳಿದವರಿಗೆ ಸಮಾನವಾಗಿ ಹೆಜ್ಜೆ ಹಾಕುವುದು ಕಷ್ಟ.

ದೇಶದಲ್ಲಿ ನಾವೀನ್ಯವು ಇಷ್ಟೊಂದು ಸದ್ದು ಮಾಡಲು ನವೋದ್ಯಮಗಳೇ ಕಾರಣ. ಅದರಲ್ಲೂ ಕರ್ನಾಟಕದಲ್ಲಿ ನವೋದ್ಯಮಗಳ ಬೆಳವಣಿಗೆಗೆ ಪೂರಕವಾದ ವಾತಾವರಣ ಇದೆ. ತಂತ್ರಜ್ಞಾನ ಮತ್ತು ಮಾನವ ಸಂಪನ್ಮೂಲದ ವಿಷಯದಲ್ಲಿಯೂ ಬೇರೆ ರಾಜ್ಯಗಳಿಗಿಂತ ಶ್ರೀಮಂತವಾಗಿದೆ. 2016-17ರಲ್ಲಿ 733ರಷ್ಟಿದ್ದ ನವೋದ್ಯಮಗಳು 2020-21ರ ವೇಳೆಗೆ 67,128ಕ್ಕೆ ತಲುಪಿವೆ. ಕೋವಿಡ್ ಪೀಡಿತ ವರ್ಷಗಳಲ್ಲೂ ಶಿಕ್ಷಣ ಸೇರಿದಂತೆ ಕೆಲವು ಕ್ಷೇತ್ರಗಳು ನಾವೀನ್ಯದಿಂದಾಗಿ ಅತ್ಯಧಿಕ ಲಾಭ ಪಡೆದಿವೆ. ಹೊಸ ಆವಿಷ್ಕಾರಗಳಿಂದ ಆ ಕ್ಷೇತ್ರಗಳಲ್ಲಿ ಭಾರಿ ಬದಲಾವಣೆಗಳೂ ಆಗಿವೆ. ಆದರೆ, ಜಾಗತಿಕ ನಾವೀನ್ಯ ಸೂಚ್ಯಂಕದಲ್ಲಿ ಭಾರತದ ಸ್ಥಾನ ಗಮನಿಸಿದರೆ ಅಭಿವೃದ್ಧಿಯ ಹಾದಿಯಲ್ಲಿ ಅದು ಇನ್ನೂ ಬಹಳಷ್ಟು ದೂರ ಕ್ರಮಿಸಬೇಕಾಗಿದೆ. 2021ರ ಸೂಚ್ಯಂಕದಲ್ಲಿ ನಮ್ಮ ದೇಶ 46ನೇ ಸ್ಥಾನದಲ್ಲಿದೆ. ಅತ್ಯಧಿಕ ಜನಸಂಖ್ಯೆಯ ವಿಚಾರದಲ್ಲಿ ಇನ್ನೇನು ಚೀನಾವನ್ನು ಹಿಂದಿಕ್ಕಲಿರುವ ಭಾರತ, ಅಷ್ಟೊಂದು ಜನಸಂಖ್ಯೆಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಲು ಪ್ರತಿಯೊಂದು ಕ್ಷೇತ್ರದಲ್ಲಿಯೂ ನಾವೀನ್ಯದೊಂದಿಗೆ ದಾಪುಗಾಲು ಹಾಕಬೇಕಿದೆ.

ಜಾಗತಿಕ ನಾವೀನ್ಯ ಸೂಚ್ಯಂಕದ ಮೊದಲ 25 ರಾಷ್ಟ್ರಗಳಲ್ಲಿ ತಾನೂ ಒಂದಾಗಬೇಕು ಎಂಬ ಕನಸನ್ನೇನೋ ಭಾರತ ಕಾಣುತ್ತಿದೆ. ಅದಕ್ಕೆ ಏನೇನು ಮಾಡಬೇಕು ಎಂಬುದನ್ನೂ ನೀತಿ ಆಯೋಗದ ವರದಿಯಲ್ಲಿ ಪಟ್ಟಿ ಮಾಡಲಾಗಿದೆ. ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ವ್ಯಯಿಸುತ್ತಿರುವ ನಿವ್ವಳ ಆಂತರಿಕ ವೆಚ್ಚದ (ಜಿಡಿಇಆರ್‌ಡಿ) ಪ್ರಮಾಣವನ್ನು ಹೆಚ್ಚಿಸಬೇಕು ಎನ್ನುವುದು ಅವುಗಳಲ್ಲಿ ಒಂದು. ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಸದ್ಯ ಖರ್ಚು ಮಾಡುತ್ತಿರುವ ಪ್ರಮಾಣವು ನಿವ್ವಳ ಆಂತರಿಕ ಉತ್ಪನ್ನದ (ಜಿಡಿಪಿ) ಶೇ 0.7ರಷ್ಟು ಮಾತ್ರ. ಆ ಪ್ರಮಾಣವನ್ನು ಕನಿಷ್ಠ ಶೇ 2ಕ್ಕೆ ಹೆಚ್ಚಿಸಬೇಕು ಎಂದು ವರದಿ ಒತ್ತಾಯಿಸುತ್ತದೆ. ಕೈಗಾರಿಕಾ ವಲಯಕ್ಕೆ ಅಗತ್ಯವಿರುವ ಪ್ರತಿಭಾವಂತರ ಪ್ರಮಾಣ ಹಾಗೂ ಈಗ ಶಿಕ್ಷಣ ಸಂಸ್ಥೆಗಳಿಂದ ಸಿಗುತ್ತಿರುವ ಪ್ರತಿಭಾವಂತರ ಪ್ರಮಾಣದ ನಡುವೆ ಇರುವ ಅಂತರವನ್ನು ಕಡಿಮೆ ಮಾಡಬೇಕು ಎನ್ನುವ ಶಿಫಾರಸನ್ನೂ ಮಾಡಲಾಗಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಖಾಸಗಿ ಪಾಲುದಾರಿಕೆ ಎಷ್ಟೊಂದು ಮಹತ್ವದ್ದು ಎನ್ನುವುದು ಅಮೆರಿಕ ಮತ್ತು ದಕ್ಷಿಣ ಕೊರಿಯಾದಲ್ಲಿ ನಡೆದಿರುವ ಬೆಳವಣಿಗೆಗಳನ್ನು ನೋಡಿದರೆ ಗೊತ್ತಾಗುತ್ತದೆ. ನಾವೀನ್ಯವನ್ನು ಉತ್ತೇಜಿಸಲು ವಿಶ್ವವಿದ್ಯಾಲಯಗಳು, ಕೈಗಾರಿಕೆಗಳು, ನಿಯಂತ್ರಣಾ ಪ್ರಾಧಿಕಾರಗಳು ಒಟ್ಟಾಗಿ ಕೆಲಸ ಮಾಡುವಂತಹ ಮತ್ತು ಸಮರ್ಪಕ ನೀತಿಗಳ ಮೂಲಕ ಈ ಸಂಶೋಧನಾ ಚಟುವಟಿಕೆಗಳಿಗೆ ಬೆಂಬಲವನ್ನೂ ನೀಡುವಂತಹ ವಾತಾವರಣ ನಿರ್ಮಿಸುವುದು ಅಗತ್ಯ.

ಈ ಕಾರ್ಯಾಚರಣೆಯನ್ನು ಆರ್ಥಿಕ ಹೊರೆ ಎಂದು ಭಾವಿಸದೇ ಅದು ಒದಗಿಸುವ ಅವಕಾಶ ಬಳಸಿಕೊಳ್ಳಬೇಕು

ಗಣಿ ಮುಚ್ಚುವಿಕೆ: ಬೇಕು ಸ್ಪಷ್ಟ ನೀತಿ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಹಲವಾರು ದಶಕಗಳ ನಿರಂತರ ಗಣಿಗಾರಿಕೆಯ ನಂತರ, ಕಲ್ಲಿದ್ದಲು ನಿಕ್ಷೇಪ ಮುಗಿಯುತ್ತ ಬಂದಾಗ ಗಣಿಗಾರಿಕೆಯನ್ನು ನಿಲ್ಲಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಅದೇ ರೀತಿ ಗಣಿಗಾರಿಕೆಯು ಆರ್ಥಿಕವಾಗಿ ಅನಾಕರ್ಷಕವಾದಾಗ ಅಥವಾ ತೀರಾ ಅಪಾಯಕಾರಿಯಾದಾಗಲೂ ಉತ್ಪಾದನೆಯನ್ನು ನಿಲ್ಲಿಸುವುದುಂಟು. ಆದರೆ ಉತ್ಪಾದನೆಯನ್ನು ಸ್ಥಗಿತಗೊಳಿಸುವುದಕ್ಕೂ ಗಣಿಗಳನ್ನು ಕೈಬಿಡುವುದಕ್ಕೂ (ಮೈನ್ ಅಬ್ಯಾಂಡನಿಂಗ್) ಮತ್ತು ಗಣಿಯನ್ನು ಮುಚ್ಚುವುದಕ್ಕೂ (ಮೈನ್ ಕ್ಲೋಶರ್) ಬಹಳ ವ್ಯತ್ಯಾಸಗಳಿವೆ. 2009ಕ್ಕಿಂತ ಮುಂಚೆ ಉತ್ಪಾದನೆಯನ್ನು ಸ್ಥಗಿತಗೊಳಿಸಿದ ಕಂಪನಿಯು ಗಣಿಗಾರಿಕೆಯ ಯಂತ್ರಗಳೊಡನೆ ಅಲ್ಲಿಂದ ಕಾಲ್ತೆಗೆಯುತ್ತಿದ್ದುದೇ ಹೆಚ್ಚು. ಆನಂತರ ಅಂತಹ ಗಣಿಗಳಲ್ಲಿ ಉಳಿದಿರಬಹುದಾದ ನಿಕ್ಷೇಪಕ್ಕಾಗಿ ಅಕ್ರಮ ಗಣಿಗಾರಿಕೆ ಪ್ರಾರಂಭವಾಗುತ್ತಿತ್ತು. ಯಾವುದೇ ನಿಯಂತ್ರಣವಿಲ್ಲದ ಪರಿಸ್ಥಿತಿಯಲ್ಲಿ ಹಾಗೆ ಬಿಟ್ಟುಹೋದ ಗಣಿಗಳಲ್ಲಿ ನೂರಾರು ಅಪಘಾತಗಳು ನಡೆದ ನಿದರ್ಶನಗಳೂ ಉಂಟು.

ವ್ಯವಸ್ಥಿತವಾಗಿ ಗಣಿಯೊಂದನ್ನು ಮುಚ್ಚುವ ಪರಿಕಲ್ಪನೆಯೇ ನಮ್ಮ ದೇಶಕ್ಕೆ ಹೊಸದು. ಗಣಿಗಳನ್ನು ಮುಚ್ಚುವ ಸಂದರ್ಭದಲ್ಲಿ ವಿಧಿವತ್ತಾಗಿ ಕೈಗೊಳ್ಳಬೇಕಾದ ಎಲ್ಲ ಕ್ರಮಗಳನ್ನೂ ಒಳಗೊಂಡ ಯೋಜನೆಯೊಂದನ್ನು ಎಲ್ಲ ಕಂಪನಿಗಳೂ ಸಿದ್ಧಪಡಿಸಬೇಕೆಂಬ ಆದೇಶವನ್ನು 2009ರಲ್ಲಿ ಮೊದಲ ಬಾರಿಗೆ ಕೇಂದ್ರ ಸರ್ಕಾರ ಹೊರಡಿಸಿತು. ಗಣಿಗಾರಿಕೆಗೆ ಅನುಮೋದನೆ ಪಡೆಯುವ ಸಂದರ್ಭದಲ್ಲೇ ಇಂತಹ ಯೋಜನೆಯ ಸಲ್ಲಿಕೆಯನ್ನು ಕಡ್ಡಾಯ ಮಾಡಿತು. ಆದರೆ ಗಣಿ ಮುಚ್ಚುವ ಅನುಭವವೇ ಇಲ್ಲದ ಪರಿಸ್ಥಿತಿಯಲ್ಲಿ ಈ ಆದೇಶದಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ.

ಹೀಗಾಗಿ 2013ರಲ್ಲಿ, ಗಣಿ ಮುಚ್ಚುವ ಯೋಜನೆ ರೂಪಿಸುವುದಕ್ಕೆ ಸಂಬಂಧಿಸಿದಂತೆ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಕೇಂದ್ರ ಸರ್ಕಾರದ ಕಲ್ಲಿದ್ದಲು ಸಚಿವಾಲಯ ಪ್ರಕಟಿಸಿತು. ಗಣಿಯ ಸದ್ಯದ ಸ್ಥಿತಿಗತಿ, ನಿಕ್ಷೇಪದ ವಿವರ, ಭೂವೈಜ್ಞಾನಿಕ ಮಾಹಿತಿ, ಗಣಿಗಾರಿಕೆಯ ವಿಧಾನ, ಗಣಿಯನ್ನು ಭರ್ತಿಮಾಡಿ ಮುಚ್ಚುವ ರೀತಿ, ಪರಿಸರ ಮಾಲಿನ್ಯ ನಿಯಂತ್ರಣ ಕ್ರಮಗಳು, ಗಣಿಗಾರಿಕೆಯ ಪ್ರದೇಶವನ್ನು ಸೂಕ್ತವಾಗಿ ಉಪಚರಿಸಿ ನೀರು, ಮೇಲ್ಮಣ್ಣು, ಸಸ್ಯಗಳನ್ನು ಸಾಧ್ಯವಾದಷ್ಟೂ ಹಿಂದಿನ ಸ್ಥಿತಿಗೆ ತರಲು ಕೈಗೊಳ್ಳುವ ಕ್ರಮಗಳು, ಗಣಿ ಕಾರ್ಮಿಕರ ಮತ್ತು ಸ್ಥಳೀಯ ಸಮುದಾಯದ ಜೀವನೋಪಾಯಕ್ಕೆ ಪರ್ಯಾಯ ಮಾರ್ಗಗಳು ಮುಂತಾದ ವಿವರಗಳು ಈ ಗಣಿ ಮುಚ್ಚುವ ಯೋಜನೆಯಲ್ಲಿ ಇರುವುದು ಅಗತ್ಯವಾಗಿತ್ತು. ಇಂತಹ ಯೋಜನೆಗೆ ಒಪ್ಪಿಗೆ ನೀಡುವ ಅಧಿಕಾರವನ್ನು ಕಲ್ಲಿದ್ದಲು ಸಚಿವಾಲಯದ ಸ್ಥಾಯಿ ಸಮಿತಿಗೆ ನೀಡಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸುವಾಗ, ಸ್ವತಂತ್ರವಾಗಿ ಅದರ ಮೌಲ್ಯಮಾಪನ ನಡೆಸಿ, ಗುಣಮಟ್ಟದ ಕೆಲಸವನ್ನು ಪ್ರಮಾಣೀಕರಿಸುವ ಜವಾಬ್ದಾರಿಯನ್ನು ರಾಂಚಿಯಲ್ಲಿರುವ ಸೆಂಟ್ರಲ್ ಮೈನ್ ಪ್ಲಾನಿಂಗ್ ಅಂಡ್ ಡಿಸೈನ್ ಇನ್‌ಸ್ಟಿಟ್ಯೂಟ್, ಐಐಟಿ ಖರಗ್‌ಪುರ, ನಾಗಪುರದ ನ್ಯಾಷನಲ್ ಎನ್‌ವೈರನ್‌ಮೆಂಟಲ್ ಎಂಜಿನಿಯರಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಧನಬಾದ್‌ನ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ಗೆ ನೀಡಲಾಯಿತು.

ಈ ಮಾರ್ಗದರ್ಶಿ ಸೂತ್ರಗಳ ಆಶಯ ಉತ್ತಮವಾಗಿದ್ದರೂ ಅವುಗಳನ್ನು ಉಲ್ಲಂಘಿಸಿದ ಅನೇಕ ನಿದರ್ಶನಗಳು ನಮಗೆ ದೊರೆಯುತ್ತವೆ. ಗಣಿ ಮುಚ್ಚುವ ಯೋಜನೆಯನ್ನು ಸಿದ್ಧಪಡಿಸಿ, ಅದಕ್ಕೆ ಅನುಮೋದನೆ ಪಡೆಯುವುದು ಕಡ್ಡಾಯವಾದ್ದರಿಂದ ಬಹುತೇಕ ಕಂಪನಿಗಳು ಅನುಮೋದನೆಯನ್ನು ಪಡೆದಿವೆ. ಗಣಿಯನ್ನು ಮುಚ್ಚಿದರೆ ಆ ಪ್ರದೇಶವನ್ನು ಮರಳಿ ಹಿಂದಿನ ಸ್ಥಿತಿಗೇ ತರಬೇಕು. ಇದು ದುಬಾರಿಯ ಕೆಲಸವಾದ್ದರಿಂದ ಹೆಚ್ಚಿನ ಬಂಡವಾಳ ಬೇಕು. ಒಂದು ಕಡೆ ಗಣಿ ಮುಚ್ಚುವುದರಿಂದ ಆಗುವ ನಷ್ಟ. ಇನ್ನೊಂದೆಡೆ ಗಣಿ ಪ್ರದೇಶದ ಪುನರುಜ್ಜೀವನಕ್ಕೆ ಮಾಡಬೇಕಾದ ವೆಚ್ಚ. ಇದರಿಂದ ತಪ್ಪಿಸಿಕೊಳ್ಳಲು ಉತ್ಪಾದನೆಯನ್ನು ನಿಲ್ಲಿಸಿ, ಅದನ್ನು ಕೇವಲ ತಾತ್ಕಾಲಿಕವೆಂದು ಬಿಂಬಿಸಿ, ಕಟ್ಟುನಿಟ್ಟಿನ ಕ್ರಮಗಳಿಂದ ಪಾರಾಗುವ ಒಳದಾರಿಗಳನ್ನು ಬಳಸುವ ಪ್ರಯತ್ನಗಳು ನಡೆದಿವೆ. ತಾತ್ಕಾಲಿಕವಾಗಿ ಉತ್ಪಾದನೆಯನ್ನು ನಿಲ್ಲಿಸಿದರೆ ಗಣಿ ಪ್ರದೇಶವನ್ನು ಪುನರುಜ್ಜೀವನ ಮಾಡಬೇಕಾಗಿಲ್ಲ. ಹೀಗೆ ಉತ್ಪಾದನೆಯನ್ನು ನಿಲ್ಲಿಸಲು ಹಲವು ಕಾರಣಗಳನ್ನು, ನೆವಗಳನ್ನು ನೀಡಲಾಗುತ್ತಿದೆ. ಗಣಿಗಾರಿಕೆ ನಡೆಯದ, ಆದರೆ ಗಣಿಯನ್ನು ಅಧಿಕೃತವಾಗಿ ಮುಚ್ಚದ ಅನೇಕ ನಿದರ್ಶನಗಳು ನಮಗೆ ದೊರೆಯುತ್ತವೆ.

ಗಣಿ ಮುಚ್ಚುವ ಕಾರ್ಯಾಚರಣೆಯನ್ನು ಆರ್ಥಿಕ ಹೊರೆ ಎಂದು ಭಾವಿಸದೇ ಅದು ಒದಗಿಸುವ ಅನೇಕ ಹೊಸ ಅವಕಾಶಗಳನ್ನು ಬಳಸಿಕೊಳ್ಳಬೇಕು. ಗಣಿಯನ್ನು ಮುಚ್ಚಿ, ಹಿಂದಿರುಗಿ ಪಡೆದ ಪ್ರದೇಶವನ್ನು ಸೌರಶಕ್ತಿ ಸ್ಥಾವರಗಳು, ತೋಟಗಾರಿಕೆ, ಕಾಂಪೋಸ್ಟ್ ತಯಾರಿಕೆ, ಪರಿಸರ ಪ್ರವಾಸೋದ್ಯಮ, ನೀರಿನ ಸಂಗ್ರಹ, ಸಂಸ್ಕರಣೆಯಂತಹ ವಿವಿಧ ಉದ್ದೇಶಗಳಿಗೆ ಸಮರ್ಥವಾಗಿ ಬಳಸಿಕೊಳ್ಳಬಹುದು ಎಂಬುದು ತಜ್ಞರ ಅಭಿಪ್ರಾಯ.

2013ರ ಗಣಿ ಮುಚ್ಚುವ ಯೋಜನೆಗೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳು, ತಾಂತ್ರಿಕ ವಿವರಗಳಿಗೆ ಸೀಮಿತವಾಗಿವೆಯೇ ಹೊರತು ಗಣಿ ಕಾರ್ಮಿಕರ ಮತ್ತು ಸ್ಥಳೀಯ ಸಮುದಾಯದ ಪುನರ್ವಸತಿಯ ಬಗ್ಗೆ ಗಮನ ಹರಿಸಿಲ್ಲವೆಂಬುದು ಈ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಸಂಘಟನೆಗಳ ದೂರು. ಈ ಮಾರ್ಗದರ್ಶಿ ಸೂತ್ರಗಳ 3.10ನೇ ಕಂಡಿಕೆಯಲ್ಲಿ ಪುನರ್ವಸತಿಯ ಬಗ್ಗೆ ಕೆಲವು ಅಂಶಗಳನ್ನು ಪ್ರಾಸಂಗಿಕವಾಗಿ ಸೇರಿಸಲಾಗಿದೆಯೇ ವಿನಾ ಅವುಗಳ ಅನುಷ್ಠಾನದಲ್ಲಿ ಕಂಪನಿಗಳಿಗೆ ಯಾವ ಕಾಳಜಿಯೂ ಇಲ್ಲ ಎಂಬುದು ಈ ಸಂಘಟನೆಗಳ ಅಭಿಪ್ರಾಯ. ಉದಾಹರಣೆಗೆ ಜಾರ್ಖಂಡ್‌ನ ಗೋಪಿನಾಥಪುರಂ ಪಹಾಡಿ ಬಸ್ತಿಯಲ್ಲಿ, ಕಲ್ಲಿದ್ದಲ ಗಣಿಯ ಸ್ವಲ್ಪ ಭಾಗವನ್ನು ಮುಚ್ಚಿರುವ ಈಸ್ಟರ್ನ್ ಕೋಲ್ ಫೀಲ್ಡ್ಸ್ ಕಂಪನಿಯು ಪುನರ್ವಸತಿಯ ಅಂಗವಾಗಿ ಮನೆಗಳನ್ನು ನಿರ್ಮಿಸಿದೆ. ಆದರೆ ಈ ವಸತಿಯ ಕೆಳಭಾಗದ ನೆಲದಾಳದಲ್ಲಿ ಉರಿಯುತ್ತಿರುವ ಕಲ್ಲಿದ್ದಲು ಸಂಗ್ರಹವಿದೆ. ಗಣಿಯನ್ನು ಸರಿಯಾದ ರೀತಿಯಲ್ಲಿ ಮುಚ್ಚದ ಕಾರಣ ಇಲ್ಲಿನ ಮನೆಗಳಲ್ಲಿ ಬಿರುಕುಗಳು ಕಂಡುಬಂದಿದ್ದು ಅದರಿಂದ ಸದಾಕಾಲ ಹೊಗೆ ಬರುತ್ತದೆ. ಮಳೆ ಬಂದಾಗ ವಿಷಕಾರಿ ಅನಿಲಗಳು ಮತ್ತು ಹಬೆ ಇಡೀ ಕಾಲೊನಿಯನ್ನು ಆವರಿಸುತ್ತದೆ. ಪುನರ್ವಸತಿಯ ಪ್ರದೇಶದಲ್ಲಿ ನೆಲದೊಳಗಿನ ಅಂತರ್ಜಲ ಬತ್ತಿಹೋಗಿರುವುದರಿಂದ ಇಲ್ಲಿನ ಜನ ಕುಡಿಯುವ ನೀರಿಗಾಗಿ ಪ್ರತಿದಿನವೂ ಎರಡು ಕಿ.ಮೀ. ದೂರದ ತೊರೆಗೆ ಅಲೆಯುತ್ತಾರೆ.

2013ರಲ್ಲಿ ಜಾರಿಗೆ ಬಂದ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ನಡೆದಿರುವ ಕೆಲಸಗಳು, ಕಾರ್ಯಾಚರಣೆಯಲ್ಲಿರುವ ಕುಂದುಕೊರತೆಗಳನ್ನು ಸರಿಪಡಿಸಿ, ಗಣಿ ಕಾರ್ಮಿಕರು ಮತ್ತು ಸ್ಥಳೀಯ ಸಮುದಾಯದ ಪುನರ್ವಸತಿಗೆ ಅತಿಹೆಚ್ಚಿನ ಆದ್ಯತೆಯನ್ನು ನೀಡುವ ಉದ್ದೇಶದಿಂದ, ಕಳೆದ ನವೆಂಬರ್‌ನಲ್ಲಿ ಕಲ್ಲಿದ್ದಲು ಸಚಿವಾಲಯ ಹೊಸ ಯೋಜನೆಯ ಪ್ರಸ್ತಾವವೊಂದನ್ನು ಆರ್ಥಿಕ ಸಚಿವಾಲಯಕ್ಕೆ ಸಲ್ಲಿಸಿದೆ. ಜಾರ್ಖಂಡ್‌ನ ಬೊಕಾರೋ ಮತ್ತು ಛತ್ತೀಸಗಢದ ಕೋರಿಯಾ ಜಿಲ್ಲೆಗಳಲ್ಲಿರುವ 18 ಕಲ್ಲಿದ್ದಲು ಗಣಿಗಳನ್ನು ವಿಧಿವತ್ತಾಗಿ ಮುಚ್ಚಿ, ಆ ಪ್ರದೇಶಗಳನ್ನು ಹಿಂದಿನ ಸ್ಥಿತಿಗೆ ತಂದು, ಸ್ಥಳೀಯ ಜನರ ಜೀವನೋಪಾಯಕ್ಕೆ ಪರ್ಯಾಯ ಮಾರ್ಗಗಳನ್ನು ಕಲ್ಪಿಸಿ, ಪುನರ್ವಸತಿಗೆ ಹೆಚ್ಚಿನ ಗಮನ ನೀಡುವುದು ಈ ಪ್ರಾಯೋಗಿಕ ಯೋಜನೆಯ ಉದ್ದೇಶ. ವಿಶ್ವಬ್ಯಾಂಕ್‌ನ ನೆರವು, ಮಾರ್ಗದರ್ಶನದಿಂದ ನಡೆಯಲಿರುವ, 8 ವರ್ಷಗಳ ಅವಧಿಯ, ₹ 7,500 ಕೋಟಿ ಅಂದಾಜು ವೆಚ್ಚದ ಈ ಯೋಜನೆಯಿಂದ, ಭವಿಷ್ಯದಲ್ಲಿ ಈ ಎಲ್ಲ ಕೆಲಸಗಳನ್ನೂ ಅಚ್ಚುಕಟ್ಟಾಗಿ ಮಾಡಲು ಬೇಕಾದ ಸಾಮರ್ಥ್ಯ, ಅನುಭವ ಕರಗತವಾಗಬೇಕೆಂಬುದು ಸರ್ಕಾರದ ನಿರೀಕ್ಷೆ.

ಗಣಿಗಳನ್ನು ವ್ಯವಸ್ಥಿತವಾಗಿ ಮುಚ್ಚಿ, ಪುನರ್ವಸತಿಯ ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡಲು ಪ್ರಯತ್ನಿಸುತ್ತಿರುವ ಸರ್ಕಾರವೇ, ಅಂತಹ ಗಣಿಗಳಲ್ಲಿ ಮತ್ತೊಮ್ಮೆ ಗಣಿಗಾರಿಕೆಯನ್ನು ಪ್ರಾರಂಭಿಸುವ ಸೂಚನೆ ನೀಡಿರುವುದು ಗೊಂದಲಕ್ಕೆ ಕಾರಣವಾಗಿದೆ. ಕಲ್ಲಿದ್ದಲು ಖಾತೆ ರಾಜ್ಯ ಸಚಿವ ರಾವ್‌ಸಾಹೇಬ್ ಪಾಟೀಲ್ ದಾನ್ವೆ ಅವರು ಸರ್ಕಾರಿ ಸ್ವಾಮ್ಯದ ಕೋಲ್ ಇಂಡಿಯಾ ಸಂಸ್ಥೆಯ ಅಧೀನದಲ್ಲಿರುವ ಆದರೆ ಗಣಿಗಾರಿಕೆ ನಡೆಯದಿರುವ 20 ಗಣಿಗಳನ್ನು ಖಾಸಗಿ ಕಂಪನಿಗಳಿಗೆ ಹರಾಜಿನ ಮೂಲಕ ನೀಡುವುದಾಗಿ ಇದೀಗ ಘೋಷಿಸಿದ್ದಾರೆ. ಈ ಗಣಿಗಳಲ್ಲಿರುವ 38 ಕೋಟಿ ಟನ್‌ಗಳಷ್ಟು ಕಲ್ಲಿದ್ದಲು ನಿಕ್ಷೇಪದಿಂದ 3ರಿಂದ 4 ಕೋಟಿ ಟನ್‌ಗಳಷ್ಟು ಉತ್ತಮ ಗುಣಮಟ್ಟದ ಕಲ್ಲಿದ್ದಲನ್ನು ಪಡೆದು, ವಾರ್ಷಿಕ 100 ಕೋಟಿ ಟನ್‌ಗಳ ಉತ್ಪಾದನೆಯ ಗುರಿಯತ್ತ ಮುನ್ನಡೆಯಬಹುದೆಂಬುದು ಸರ್ಕಾರದ ವಾದ. ಕಲ್ಲಿದ್ದಲು ಬಳಕೆಯನ್ನು ಹಂತಹಂತವಾಗಿ ಕಡಿಮೆ ಮಾಡಿ, 2070ರ ವೇಳೆಗೆ ಶೂನ್ಯ ಉತ್ಸರ್ಜನೆಯನ್ನು ಸಾಧಿಸುವ ಬದ್ಧತೆಯನ್ನು ವ್ಯಕ್ತಪಡಿಸಿರುವ ಸರ್ಕಾರವು ಈ ಗೊಂದಲವನ್ನು ನಿವಾರಿಸುವುದು ಅಗತ್ಯ.



ಚುರುಮುರಿ



ಕ್ಯಾಮೆರಾ ಕ್ರಷ್!

• ಗುರು ಪಿ.ಎಸ್.

'ಯಾಕ್ ಮುದ್ದಣ್ಣ, ಮುಖ ಜಿಎಸ್‌ಟಿ ಹಾಕಿರೊ ಮೊಸರಂಗಾಗಿದೆ. ಏನ್ ಸಮಾಚಾರ' ಕಾಲೆಳೆದ ವಿಜಿ.

'ಇನ್ನೇನಿರುತ್ತೆ, ಫೈನಾನ್ಶಿಯಲ್ ಪ್ರಾಬ್ಲಮ್ಮು...'

'ಏನೂ! ಸರ್ಕಾರಿ ನೌಕರಿ ಇರೋ ನಿನಗೆ ಆರ್ಥಿಕ ಸಂಕಷ್ಟವೇ...'

'ಗವರ್ನ್‌ಮೆಂಟ್ ಜಾಬ್‌ನಲ್ಲಿರೋರ ಕಷ್ಟ ನಿಂಗೇನ್ ಗೊತ್ತು, ಸುಮ್ನಿರಪ್ಪ' ಸಿಟ್ಟಲ್ಲೇ ಹೇಳ್ದ ಮುದ್ದಣ್ಣ.

'ಸಂಬಳದ ಜೊತೆ ಗಿಂಬಳವೂ ಬರ್ತಿರುತ್ತೆ, ಅಂಥದ್ದರಲ್ಲಿ ಏನಪ್ಪ ಕಷ್ಟ ನಿನಗೆ...'

'10 ವರ್ಷದವರೆಗೂ ನನ್ನ ಸ್ಯಾಲರೀಲಿ 40 ಪರ್ಸೆಂಟ್ ಕಮಿಷನ್ ಕೊಡ್ತೀನಿ ಅಂತಾ ಕಮಿಟ್ ಆಗಿ ಈ ಕೆಲಸ ಗಿಟ್ಟಿಸಿಕೊಂಡಿದೀನಿ... ಈಗ ಅದಕ್ಕೆ ತಕ್ಕಂಗೆ ಗಿಂಬಳದ ಟಾರ್ಗೆಟ್ ರೀಚ್ ಮಾಡೋಕಾಗ್ತಿಲ್ಲ'.

'ಯಾಕೆ, ಯಾರೂ ಲಂಚ ಕೊಡ್ತಿಲ್ವ...'

'ಇಲ್ಲ ಮಾರಾಯ. ಈಗ ಕ್ಯಾಮೆರಾ ಕೈಯಲ್ಲಿ ಹಿಡ್ಕೊಂಡೇ ಬಂದಿರ್ತಾರೆ. ಮೊದಲಾದರೆ, ಸರ್ಕಾರಿ ಆಫೀಸ್‌ನಲ್ಲಿ ಇದಕ್ಕೆಲ್ಲ ಅವಕಾಶ ಇಲ್ಲ ಅಂತಾ ಓಡಿಸ್ತಿದ್ವಿ, ಆದ್ರೆ, ಸರ್ಕಾರ ಆರ್ಡರ್ ಮಾಡಿ, ಕ್ಯಾನ್ಸಲ್ ಮಾಡಿದ ಮೇಲಂತೂ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡಂಗಾಗಿದೆ. ಪೆನ್ ಕ್ಯಾಮೆರಾ, ಮೊಬೈಲ್ ಕ್ಯಾಮೆರಾ, ದೊಡ್ಡ ಕ್ಯಾಮೆರಾ, ಚಿಕ್ಕ ಕ್ಯಾಮೆರಾ ಎಲ್ಲ ತಂದು ಮುಖದ ಮೇಲೆ ಹಿಡಿದು, ಏನೇನೋ ಕೇಳ್ತಾರೆ...'

'ಮುಂದೇನು ಮಾಡಬೇಕಂತಿದೀಯ...'

'ಕ್ಯಾಮೆರಾ ಶಕ್ತಿ ನೋಡಿ, ಅದರ ಮೇಲೆಯೇ ಕ್ರಷ್ ಆಗಿದೆ. ಈ ಕೆಲಸಕ್ಕೆ ರಾಜೀನಾಮೆ ಬಿಸಾಕಿ, ನಾನೇ ಕ್ಯಾಮೆರಾಮನ್ ಆಗಬೇಕಂತ ಮಾಡಿದೀನಿ...'

'ನಿನಗೇನ್ ಹುಚ್ಚಾ... ಕ್ಯಾಮೆರಾಮನ್ ಆದ್ರೆ ಏನ್ ಸಿಗುತ್ತೆ...'

'ಸದ್ಯ, ಕೇಂದ್ರ ಸರ್ಕಾರದ ಗಮನ ಸೆಳೆಯುವ ಶಕ್ತಿ ಇರುವಂತಹ ಏಕೈಕ ವಸ್ತು- ವ್ಯಕ್ತಿ ಅಂದ್ರೆ ಕ್ಯಾಮೆರಾ ಮತ್ತು ಕ್ಯಾಮೆರಾಮನ್. ದೊಡ್ಡೋರ ಜೊತೆ ಯಾವಾಗಲೂ ಓಡಾಡೋದ್ರಿಂದ ಝಡ್ ಪ್ಲಸ್ ಸೆಕ್ಯುರಿಟಿಯೂ ಸಿಗುತ್ತೆ. ಸೋ, ಐ ಲವ್ ಕ್ಯಾಮೆರಾ' ಕಣ್ಣು ಮಿಟುಕಿಸಿದ ಮುದ್ದಣ್ಣ.

ದಿನದ ಟ್ವೀಟ್

ಕೋರ್ಟ್ ಸೂಚನೆ ನೀಡಲಿ



ಆಯೋಗಗಳಲ್ಲಿ ಹುದ್ದೆಗಳು ಖಾಲಿಯಾಗುವ ಆರು ತಿಂಗಳ ಮೊದಲು ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಇದೇ ನೆಲೆಯಲ್ಲಿ ಸುಪ್ರೀಂ ಕೋರ್ಟ್, ಸ್ಥಳೀಯ ಸಂಸ್ಥೆಗಳಿಗೆ ಅವುಗಳ ಅವಧಿ ಮುಗಿಯುವ ಆರು ತಿಂಗಳ ಮೊದಲೇ ಚುನಾವಣಾ ಪ್ರಕ್ರಿಯೆ ಶುರುಮಾಡುವಂತೆ ಸೂಚಿಸಬೇಕು.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ನವ ಭಾರತದಲ್ಲಿ 'ದೊಡ್ಡಣ್ಣ'ನು ಯಾವಾಗಲೂ ಗಮನಿಸುತ್ತಿರುತ್ತಾನೆ, ಆಲಿಸುತ್ತಿರುತ್ತಾನೆ ಎಂಬ ಭಯವು ಎಲ್ಲ ಪಕ್ಷಗಳ ರಾಜಕಾರಣಿಗಳ ನಡುವಿನ ಎಲ್ಲ ಮಾತುಕತೆಗಳಲ್ಲಿ ವ್ಯಾಪಿಸಿಕೊಂಡಿದೆ. ಸಂಸದರು, ರಾಜಕೀಯ ಪಕ್ಷಗಳ ನಾಯಕರು ಹಲವು ಫೋನ್‌ಗಳನ್ನು ಇಟ್ಟುಕೊಂಡಿರುತ್ತಾರೆ, ಮತ್ತೆ ಮತ್ತೆ ನಂಬರ್ ಬದಲಿಸುತ್ತಿರುತ್ತಾರೆ, ಭೇಟಿಯಾದಾಗ ಅವರು ಪಿಸುಮಾತಿನಲ್ಲಿ ಮಾತನಾಡುತ್ತಾರೆ. ಭಯವು ಪ್ರಜಾತಂತ್ರವನ್ನು ಕೊಲ್ಲುತ್ತದೆ.

ಮಾರ್ಗರೆಟ್ ಆಳ್ವ, ಉಪರಾಷ್ಟ್ರಪತಿ ಅಭ್ಯರ್ಥಿ

25 ವರ್ಷಗಳ ಹಿಂದೆ

ಭಾನುವಾರ, 27-7-1997

• **ಕರುಣಾನಿಧಿ ಜತೆ ಚರ್ಚೆ: ಚೆನ್ನೈಗೆ ಪಟೇಲ್**

ಬೆಂಗಳೂರು, ಜುಲೈ 26- ಕಾಡುಗಳ್ಳ ವೀರಪ್ಪನ್ ಅಪಹರಿಸಿರುವ ಅರಣ್ಯ ಸಿಬ್ಬಂದಿಯನ್ನು ಬಿಡುಗಡೆ ಮಾಡಿಸುವ ಸಂಬಂಧದಲ್ಲಿ ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ ಜತೆಗೆ ಚರ್ಚಿಸಲು ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಕಾನೂನು ಸಚಿವ ಎಂ.ಸಿ. ನಾಣಯ್ಯ, ಅರಣ್ಯ ಸಚಿವ ಗುರುಪಾದಪ್ಪ ನಾಗಮಾರಪಲ್ಲಿ ಹಾಗೂ ಗೃಹ ಸಚಿವ ರೋಷನ್ ಬೇಗ್ ಅವರು ಚೆನ್ನೈಗೆ ತೆರಳಿದ್ದಾರೆ.

ಒತ್ತೆಯಾಳುಗಳನ್ನು ಬಿಡುಗಡೆ ಮಾಡಿಸುವುದು ಸದ್ಯ ಮುಖ್ಯವಾಗಿದ್ದು, ಎರಡೂ ರಾಜ್ಯಗಳು ಸೇರಿ ನಿಖರವಾದ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ ಎಂದು ಇದಕ್ಕೂ ಮೊದಲು ಸಂಪುಟ ಸಭೆಯ ನಂತರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ವಾರ್ತಾ ಸಚಿವ ಎಂ.ಸಿ. ನಾಣಯ್ಯ ತಿಳಿಸಿದರು.

• **ಕೃಷ್ಣಕಾಂತ್: ಉಪರಾಷ್ಟ್ರಪತಿ ಸ್ಥಾನಕ್ಕೆ ರಂಗ, ಕಾಂಗ್ರೆಸ್ ಒಮ್ಮತ ಅಭ್ಯರ್ಥಿ**

ನವದೆಹಲಿ, ಜುಲೈ 26 (ಪಿಟಿಐ)- ಆಂಧ್ರ ಪ್ರದೇಶದ ರಾಜ್ಯಪಾಲ ಹಿರಿಯ ಗಾಂಧೀವಾದಿ ಕೃಷ್ಣಕಾಂತ್ ಅವರು ಉಪರಾಷ್ಟ್ರಪತಿ ಸ್ಥಾನಕ್ಕೆ ಕಾಂಗ್ರೆಸ್ ಮತ್ತು ಸಂಯುಕ್ತ ರಂಗದ ಒಮ್ಮತದ ಅಭ್ಯರ್ಥಿಯಾಗಿದ್ದಾರೆ.

ಕೃಷ್ಣಕಾಂತ್ ಒಮ್ಮತದ ಅಭ್ಯರ್ಥಿ ಎಂದು ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಪ್ರಕಟಿಸಿದರು.

ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ ಅಪಾರ ಅನುಭವ ಇರುವ ಕೃಷ್ಣಕಾಂತ್ ಅವರಿಗೆ ಬೆಂಬಲ ನೀಡುವಂತೆ ಪ್ರಧಾನಿ ಐ.ಕೆ. ಗುಜ್ರಾಲ್ ಅವರು ವಿರೋಧಪಕ್ಷಗಳಿಗೆ ಮನವಿ ಮಾಡಿದರು.

50 ವರ್ಷಗಳ ಹಿಂದೆ

ಗುರುವಾರ, 27-7-1972

• **'ಕರ್ನಾಟಕ' ನಾಮಕರಣಕ್ಕೆ ಸ್ವಾಗತ ಮೈಸೂರು ಹಿರಿಮೆಯ ಸ್ಮರಣೆ**

ಬೆಂಗಳೂರು. ಜುಲೈ 26- 'ಕರ್ನಾಟಕ'ವನ್ನು ಸ್ವಾಗತಿಸುತ್ತ ಮೈಸೂರು ಎಂಬ ಹೆಸರಿಗೆ ಇರುವ ಹಿರಿಮೆ, ಸಂಸ್ಕೃತಿ, ಸದಭಿಪ್ರಾಯಗಳ ಸ್ಮರಣೆಯು ಇಂದು ವಿಧಾನಸಭೆಯಲ್ಲಿ ಮುಕ್ತಕಂಠದಿಂದ ನಡೆಯಿತು.

ರಾಜ್ಯಕ್ಕೆ 'ಕರ್ನಾಟಕ' ಮರುನಾಮಕರಣ ಮಾಡುವ ನಿರ್ಣಯದ ಮೇಲಿನ ಚರ್ಚೆಯ ಎರಡನೇ ದಿನವಾದ ಇಂದು ಮಾತನಾಡಿದ ಹದಿನೈದು ಸದಸ್ಯರು, ನಿನ್ನೆಯವರಂತೆ ನಿರ್ಣಯಕ್ಕೆ ಬೆಂಬಲ ಸೂಚಿಸಿದರು.

• **ಆರೋಗ್ಯ ಸೆಸ್ ವಿಧಿಸಲು ಸಲಹೆ**

ನವದೆಹಲಿ, ಜುಲೈ 26- ಜನರಿಗೆ ಕನಿಷ್ಠ ಮಟ್ಟದ ವೈದ್ಯಕೀಯ ಸೌಕರ್ಯ ಕಲ್ಪಿಸುವುದಕ್ಕಾಗಿ ಸಂಪನ್ಮೂಲ ಹೆಚ್ಚಿಸಲು ಆರೋಗ್ಯ ಸೆಸ್ ಅಥವಾ ನೇರ ಶುಲ್ಕ ವಿಧಿಸುವಂತೆ ರಾಜ್ಯ ಆರೋಗ್ಯ ಸಚಿವರ ಎರಡು ದಿನಗಳ ಸಮ್ಮೇಳನ ಇಂದು ಶಿಫಾರಸು ಮಾಡಿತು.

ಸೆಸ್ ವಿಧಿಸುವುದು ಸ್ಥಳೀಯ ಪರಿಸ್ಥಿತಿಯನ್ನು ಅವಲಂಬಿಸಬಹುದೆಂದೂ ಸಮ್ಮೇಳನ ಅಭಿಪ್ರಾಯಪಟ್ಟಿತು.

ಗ್ರಾಮಾಂತರ ಪ್ರದೇಶಗಳ ಬಗ್ಗೆ ರಾಷ್ಟ್ರೀಯ ಆರೋಗ್ಯ ಯೋಜನೆ ವಿವರವನ್ನು ಪರಿಶೀಲಿಸುವುದಕ್ಕಾಗಿ ಉನ್ನತಾಧಿಕಾರದ ಸಮಿತಿಯೊಂದನ್ನು ನೇಮಕ ಮಾಡುವಂತೆ ಸಮ್ಮೇಳನವು ಶಿಫಾರಸು ಮಾಡಿತು.

ಸಂಗತ

ಒಳವಂಶವರ್ಧನೆ: ಅಪಾಯದಲ್ಲಿ ಹುಲಿ

ಹುಲಿ ಸಂತತಿಯ ಸಶಕ್ತ ಮುಂದುವರಿಕೆಗೆ ಇರುವ ಅಡ್ಡಿ– ಆತಂಕ ನಿವಾರಿಸಬೇಕು

• ಶಿಶಿರ ವಸಿಷ್ಠ

ವಿಶ್ವದ ಅರಣ್ಯ ಪ್ರದೇಶಗಳಲ್ಲಿ ಅತಿ ಹೆಚ್ಚು ಹುಲಿಗಳಿರುವ ದೇಶ ನಮ್ಮದು ಎಂಬ ಹೆಗ್ಗಳಿಕೆಯ ಜೊತೆಗೆ ಅವುಗಳ ಸಂತತಿಯನ್ನು ರಕ್ಷಿಸಿ, ಮುಂದುವರಿಸಿಕೊಂಡು ಹೋಗಬೇಕಾದ ಗುರುತರ ಜವಾಬ್ದಾರಿಯೂ ನಮ್ಮ ಮೇಲಿದೆ. ಈಗ ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಹುಲಿ ಪ್ರಭೇದಗಳ ಪೈಕಿ ಭಾರತದ ಹುಲಿಯ ತಳಿಗುಣ ಇತರ ಭಾಗದ ಹುಲಿಗಳಿಗಿಂತ ಭಿನ್ನವಾಗಿದೆ. ಆವಾಸ ನಾಶ, ಕಳ್ಳ ಬೇಟೆಗಳಿಂದಾಗಿ ಕಳೆದ ಐದು ದಶಕಗಳಲ್ಲಿ ಸಹಸ್ರಾರು ಹುಲಿಗಳು ನಾಶವಾಗಿವೆ. ಈಗ ಒಳವಂಶವರ್ಧನೆಯಿಂದಾಗಿ (In breeding) ತಳಿ ವೈವಿಧ್ಯವು ಕಣ್ಮರೆಯಾಗುತ್ತಿದೆ. ಇದು ಹುಲಿ ಸಂತತಿಯ ಸಶಕ್ತ ಮುಂದುವರಿಕೆಗೆ ದೊಡ್ಡ ಅಡ್ಡಿ ಎಂಬುದು ತಜ್ಞರ ವಾದ.

ಮಾನವ ಬಾಹುಳ್ಯ ಹೆಚ್ಚಾದಂತೆ ಹುಲಿಯ ವಾಸದ ಕಾಡು ಕಡಿಮೆಯಾಗಿದೆ. ಇರುವಷ್ಟೇ ಜಾಗದಲ್ಲಿ ಜೀವಿಸುವ ಮತ್ತು ವಂಶ ಮುಂದುವರಿಸಿಕೊಳ್ಳುವ ಇಕ್ಕಟ್ಟಿಗೆ ಸಿಲುಕಿರುವ ಹುಲಿಗಳು ಕಳೆದ ಶತಮಾನದ ಹುಲಿಗಳಿಗಿಂತ ಕಡಿಮೆ ದೈಹಿಕ ಆರೋಗ್ಯ ಮತ್ತು ಕ್ಷಮತೆಯ ಅಪಾಯ ಎದುರಿಸುತ್ತಿವೆ ಎಂಬ ಅನುಮಾನಗಳಿವೆ. ಹದಿನೈದು ವರ್ಷಗಳಿಂದ ಭಾರತದ ವನ್ಯ ಹುಲಿಗಳ ಸಂಖ್ಯೆ ಆರೋಗ್ಯಕರ ರೀತಿಯಲ್ಲಿ ಏರುತ್ತಲೇ ಇದೆ ಎಂಬ ಸಮಾಧಾನ ಇದೆಯಾದರೂ ಅವುಗಳ ಆವಾಸ ಸ್ಥಾನಗಳು ನಾಶವಾಗುತ್ತಿರುವುದರಿಂದ ಪ್ರತ್ಯೇಕವಾಗಿ ಮತ್ತು ಸಣ್ಣಸಣ್ಣ ಜಾಗಗಳಲ್ಲಿ ಜೀವಿಸುವ ಒತ್ತಡ ಸೃಷ್ಟಿಯಾಗಿದೆ. ಕುಟುಂಬವರ್ಧನೆ ಸಹ ಅದೇ ಗುಂಪಿನ ಹುಲಿಗಳ ನಡುವೆ ಆಗುವುದರಿಂದ ಜನಿಸುವ ಹುಲಿಗಳಿಗೆ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತದೆ ಎಂಬುದು ಅಧ್ಯಯನಗಳಿಂದ ತಿಳಿದುಬಂದಿದೆ.

ರಾಜಸ್ಥಾನದ ರಣಥಂಬೋರ್ ಹುಲಿ ಸಂರಕ್ಷಿತಾರಣ್ಯದಲ್ಲಿ ಈ ಕುರಿತು ಮೂರು ವರ್ಷಗಳ ವಿಸ್ತೃತ ಅಧ್ಯಯನ ಮಾಡಿರುವ ನ್ಯಾಷನಲ್ ಸೆಂಟರ್ ಫಾರ್ ಬಯಲಾಜಿಕಲ್ ಸೈನ್ಸ್‌ನ ಪ್ರಾಧ್ಯಾಪಕಿ ಉಮಾ ರಾಮಕೃಷ್ಣನ್ 'ಆವಾಸ ಸಂಕುಚಿತವಾದಷ್ಟೂ ಹುಲಿಗಳ ದೂರ ಓಡಾಟ ಕಡಿಮೆಯಾಗುತ್ತದೆ, ತಾವಿರುವ ಜಾಗದಲ್ಲೇ ಸಂಗಾತಿಗಳೊಂದಿಗೆ ವಂಶವರ್ಧನೆ ಮಾಡಿಕೊಳ್ಳುವ ಅನಿವಾರ್ಯಕ್ಕೆ ಹುಲಿ ಸಂತತಿ ಸಿಲುಕಿಕೊಂಡಿದೆ, ಇದು ಸರಿಯಾದ ಬೆಳವಣಿಗೆಯಲ್ಲ' ಎನ್ನುತ್ತಾರೆ.

ರಣಥಂಬೋರ್ ಕಾಡಿನ ಸಣ್ಣ ಗುಂಪಿನ ಹದಿನೈದು, ಇನ್ನೊಂದು ಗುಂಪಿನ ನೂರು ಮತ್ತು ದಕ್ಷಿಣ ಹಾಗೂ ಮಧ್ಯಭಾರತದ ಕಾಡುಗಳ ನಡುವೆ ದೂರ ಓಡಾಟವಿಟ್ಟುಕೊಂಡಿರುವ 250ಕ್ಕೂ ಹೆಚ್ಚು ಹುಲಿಗಳಿರುವ ಗುಂಪಿನ ಸದಸ್ಯ ಹುಲಿಗಳ ಪೈಕಿ ಒಟ್ಟು 57 ಹುಲಿಗಳ ಡಿಎನ್‌ಎ ಅಧ್ಯಯನ ಕೈಗೊಂಡಾಗ ರಣಥಂಬೋರ್ ಕಾಡಿನ ಹುಲಿಗಳಲ್ಲಿ ಒಳವಂಶವರ್ಧನೆ ಹೆಚ್ಚು ಎಂಬ ಅಂಶ ಬೆಳಕಿಗೆ ಬಂದಿದೆ. ಉಳಿದೆರಡು ಗುಂಪುಗಳಲ್ಲೂ ಇನ್‌ಬ್ರೀಡಿಂಗ್ ಇದೆಯಾದರೂ ರಣಥಂಬೋರ್‌ನ ಹುಲಿಗಳಲ್ಲಿ ಅದು ದುಪ್ಪಟ್ಟು ಎಂಬ ಅಂಶ ಹುಲಿ ತಜ್ಞರ ನಿದ್ದೆಕೆಡಿಸಿದೆ. ಹೆಚ್ಚಿನ ಪ್ರಮಾಣದ ಮ್ಯುಟೇಶನ್ (ರೂಪಾಂತರ), ಬೇಡದ ಅಶಕ್ತ ಅಥವಾ ರೋಗಯುಕ್ತ ಪ್ರಭೇದಗಳ ನೈಸರ್ಗಿಕ ನಾಶ ಮತ್ತು ಒಳ ಸಂತಾನೋತ್ಪತ್ತಿ ಖಿನ್ನತೆಗಳು ಒತ್ತೊತ್ತಾಗಿ ವಾಸಿಸುವ ಹುಲಿಗಳಲ್ಲಿ ಪತ್ತೆಯಾಗಿವೆ. ಒಳ ಸಂತಾನೋತ್ಪತ್ತಿ ಖಿನ್ನತೆಯಿಂದಾಗಿ ಉದ್ಭವಿಸುವ ಹಾನಿಕಾರಕ 'ಅಲೆಲ್'ಗಳು (ರೂಪಾಂತರದಿಂದ ಒಂದೇ ಜಾಗದಲ್ಲಿ ಕಂಡುಬರುವ ಜೀನ್‌ನ ಎರಡು ಅಥವಾ ಹೆಚ್ಚಿನ ಪರ್ಯಾಯ ರೂಪಗಳು) ಸಂತತಿ ನಾಶದ ಮುನ್ನುಡಿ ಬರೆಯುತ್ತವೆ.

ಜೀವಿ ಪರಿಸರ ವ್ಯವಸ್ಥೆಯಲ್ಲಿ ಹೀಗೆ ಆಗುತ್ತಿರುವುದು ಇದೇ ಮೊದಲೇನಲ್ಲ, ಹಿಂದೆಯೂ ಆಗಿತ್ತು ಮತ್ತು ಮುಂದೆಯೂ ಆಗಲಿದೆ. ಆದರೆ ಒಳ ಸಂತಾನೋತ್ಪತ್ತಿಯು ಮರಣ ಪ್ರಮಾಣವನ್ನು ಹೆಚ್ಚಿಸಬಹುದು ಇಲ್ಲವೆ ಸಂತಾನೋತ್ಪತ್ತಿ ಕ್ಷಮತೆಯನ್ನು ಕಡಿಮೆ ಮಾಡಬಹುದು, ಆಗ ಹುಟ್ಟುವ ಹುಲಿಗಳು ಕುಂದಿದ ರೋಗನಿರೋಧಕ ಶಕ್ತಿ ಪಡೆದಿರುತ್ತವೆ ಮತ್ತು ಸುಲಭವಾಗಿ ರೋಗಕ್ಕೆ ಬಲಿಯಾಗಬಹುದು.



ಮಾನವರಲ್ಲಿ ಒಂದೇ ಕುಟುಂಬದ ಸದಸ್ಯರಲ್ಲಿ ನಡೆಯುವ ಮದುವೆಗಳಿಂದ ಜನಿಸುವ ಶಿಶುಗಳು ಹೇಗೆ ಶಕ್ತಿಹೀನವಾಗಿ ಸಣ್ಣಪುಟ್ಟ ಕಾಯಿಲೆಗಳನ್ನೂ ತಡೆದುಕೊಳ್ಳದೆ ರೋಗರುಜಿನಗಳಿಗೆ ಬಲಿಯಾಗುತ್ತವೋ ಅದೇ ರೀತಿಯಲ್ಲೇ ಹುಲಿಗಳೂ ಅಳಿಯುತ್ತವೆ. ಒಳ ಸಂತಾನೋತ್ಪತ್ತಿಯಿಂದಾಗಿ ಈಗಾಗಲೇ 13 ಬಗೆಯ ಬೆಕ್ಕಿನ ಸಂತತಿಯು ಗಣನೀಯ ಪ್ರಮಾಣದಲ್ಲಿ ಕುಸಿದಿದೆ ಎಂದಿರುವ ಬ್ರಿಟನ್‌ನ ನಾರ್‌ವಿಚ್ ಸಂಶೋಧನಾ ವಿಶ್ವವಿದ್ಯಾಲಯದ ಪ್ರಭೇದ ತಜ್ಞ ಸಿ.ವಾನ್ ಓಸ್ಟರ್ಹಾಟ್, ಅಪರೂಪದ ಹುಲಿಗಳನ್ನು ಇನ್‌ಬ್ರೀಡಿಂಗ್‌ನ ಸಮಸ್ಯೆಯಿಂದ ರಕ್ಷಿಸಲೇಬೇಕು ಎಂದು ಒತ್ತಾಯಿಸಿದ್ದಾರೆ.

ಭಾರತದ ಹುಲಿಗಳಿಗೆ ಹೆಚ್ಚಿನ ಸಂರಕ್ಷಣೆ ದೊರೆತಿದೆಯಾದರೂ ಅವುಗಳ ವಿಕಾಸದ ಚರಿತ್ರೆಯ ಕುರಿತು ನಮಗೆ ಹೆಚ್ಚು ತಿಳಿದಿಲ್ಲ. ಇಲ್ಲಿನ ಹುಲಿಗಳ ವರ್ಣತಂತು ವ್ಯವಸ್ಥೆಯ ವಿಭಿನ್ನತೆಗಳೂ ನಮಗೆ ಪೂರ್ಣವಾಗಿ ಮನದಟ್ಟಾಗಿಲ್ಲ. ವಿಶ್ವದ ಒಟ್ಟು ಹುಲಿಗಳ ಪೈಕಿ ಶೇ 70ರಷ್ಟು ನಮ್ಮಲ್ಲೇ ಇವೆ. ಇವುಗಳ ವರ್ಣತಂತು ವೈವಿಧ್ಯವನ್ನು ಅರ್ಥ ಮಾಡಿಕೊಂಡರೆ, ವಿಶ್ವದಾದ್ಯಂತ ಇರುವ ಬೆಕ್ಕುಗಳ ಸಂತತಿ ರಕ್ಷಣೆ ಸುಲಭವಾಗಲಿದೆ. ಮೂರು ವರ್ಷಗಳ ನಿರಂತರ ಅಧ್ಯಯನದ ಫಲವಾಗಿ ಲಭ್ಯವಾಗಿರುವ ಮಾಹಿತಿಯಂತೆ ಇತ್ತೀಚಿನ ವರ್ಷಗಳಲ್ಲಿ ಹುಲಿಗಳ ಆನುವಂಶಿಕ ರಚನೆಯಲ್ಲಿ ಮಾರ್ಪಾಟುಗಳಾಗಿವೆ. ಇದನ್ನು ಮೀರಲು ಹುಲಿಗಳ ಆವಾಸ ವಿಸ್ತಾರಗೊಳ್ಳ ಬೇಕು ಮತ್ತು ಸ್ವಚ್ಛಂದ ಓಡಾಟಕ್ಕೆ ಅವಕಾಶವಿರಬೇಕು. ಭಾರತದ ಹುಲಿಗಳ ಆನುವಂಶಿಕ ರಚನೆ ಇತರ ದೇಶದ ಹುಲಿಗಳದ್ದಕ್ಕಿಂತ ಮಾರ್ಪಾಟುಗಳಿಂದ ಕೂಡಿದೆ ಎಂಬದೂ ಅಧ್ಯಯನದಿಂದ ಸಾಬೀತಾಗಿದೆ. ಅಂದಹಾಗೆ, ಜುಲೈ 29, ವಿಶ್ವ ಹುಲಿಗಳ ದಿನ.

ವಾಚಕರ ವಾಣಿ

ಸರ್ಕಾರಿ ನೌಕರರಿಗೆ ಕಡಿವಾಣ

ಸರ್ಕಾರಿ ನೌಕರರು ಕಚೇರಿ ಅವಧಿಯಲ್ಲಿ ಪೂರ್ವಾನುಮತಿ ಇಲ್ಲದೇ ಹೊರಗೆ ಹೋಗುವುದು ಕಂಡುಬಂದಲ್ಲಿ ಅಂತಹವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಎಲ್ಲಾ ಇಲಾಖೆಗಳ ಮುಖ್ಯಸ್ಥರಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಆದೇಶ ಹೊರಡಿಸಿರುವುದು ಶ್ಲಾಘನೀಯ.

ಇತ್ತೀಚಿನ ದಿನಗಳಲ್ಲಿ ಶೇಕಡ 90ರಷ್ಟು ಅಧಿಕಾರಿಗಳು ಮತ್ತು ನೌಕರರು ಕಚೇರಿಯ ಸಮಯ ಪಾಲನೆ ಮಾಡುವುದಿಲ್ಲ. ಇಷ್ಟ ಬಂದಾಗ ಕಚೇರಿಗೆ ಬರುತ್ತಾರೆ. ಹೇಳದೆ ಕೇಳದೆ ಹೊರಗೆ ಹೋಗಿರುತ್ತಾರೆ. ಸಮಯ ಪಾಲನೆ ನಿಯಮ ಬಿಗಿಯಾಗಿರಬೇಕು. ಯಾವುದೇ ಕಾರಣದಿಂದಲೂ ಸಡಿಲಗೊಳಿಸಬಾರದು. ಇದರಿಂದ ಸ್ವಲ್ಪಮಟ್ಟಿಗಾದರೂ ಆಡಳಿತ ಸುಧಾರಣೆ ಸಾಧ್ಯವಾದೀತು.

ಕೆ.ಎಸ್. ಕುಮಾರಸ್ವಾಮಿ, ತುಮಕೂರು

ನೀರಿನ ಪ್ಲಾಸ್ಟಿಕ್ ಪೌಚ್ ಬಳಕೆ ನಿಷೇಧಿಸಿ

ರಾಜ್ಯದಲ್ಲಿ ನೀರಿನ ಪ್ಲಾಸ್ಟಿಕ್ ಪೌಚ್‌ಗಳ ಬಳಕೆಯನ್ನು ನಿಷೇಧಿಸದಿರುವುದು ದುರದೃಷ್ಟಕರ. ರಾಜ್ಯದ ಬಹುತೇಕ ನಗರ- ಪಟ್ಟಣಗಳಲ್ಲಿನ ಹೋಟೆಲ್, ರೆಸ್ಟೋರೆಂಟ್, ಬೇಕರಿಗಳಲ್ಲಿ ಈ ಪೌಚ್‌ಗಳನ್ನು ಬಳಸಲಾಗುತ್ತಿದೆ.

ಈ ಪ್ಲಾಸ್ಟಿಕ್ ಪೌಚ್‌ಗಳ ತ್ಯಾಜ್ಯವು ನಗರಗಳ ಬೀದಿಬದಿ, ಉದ್ಯಾನ, ಧಾರ್ಮಿಕ ಸ್ಥಳ, ಮಾರುಕಟ್ಟೆಗಳ ಬಳಿ ರಾಶಿಯಾಗಿ ಬಿದ್ದಿರುತ್ತದೆ. ಬಳಸಿ ಬಿಸಾಡಿದ ಇಂಥ ಪೌಚ್‌ಗಳ ಸೇವನೆಯಿಂದ ಹಸುಗಳು ಮತ್ತು ಇತರ ಪ್ರಾಣಿಗಳು ತೊಂದರೆಗೆ ಒಳಗಾಗುವಂತಾಗಿದೆ. ಈ ಪೌಚ್‌ಗಳ ತ್ಯಾಜ್ಯವು ಸೊಳ್ಳೆಗಳ ಆವಾಸಸ್ಥಾನವಾಗಿದ್ದು, ರೋಗ ಹರಡುವ ಭೀತಿಯೂ ಇಲ್ಲದಿಲ್ಲ. ಆದಕಾರಣ, ಇಂಥ ಪ್ಲಾಸ್ಟಿಕ್ ಪೌಚ್‌ಗಳ ಬಳಕೆ ಮತ್ತು ಮಾರಾಟವನ್ನು ರಾಜ್ಯ ಸರ್ಕಾರ ಕೂಡಲೇ ನಿಷೇಧಿಸಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಸಂಪುಟ ವಿಸ್ತರಣೆ: ಅಲೆದಾಡಿಸುವುದೇಕೆ?

ಮಹಾರಾಷ್ಟ್ರದಲ್ಲಿ ಏಕನಾಥ ಶಿಂದೆ ಮುಖ್ಯಮಂತ್ರಿಯಾಗಿ ತಿಂಗಳಾಗಿದ್ದು, ಸಂಪುಟ ವಿಸ್ತರಣೆಗೆ ಅನುಮತಿ ಕೋರಿ ಅವರು ಒಂದೆರಡು ಬಾರಿ ದೆಹಲಿಗೆ ಭೇಟಿ ನೀಡಿದ್ದೂ ಆಗಿದೆ. ಆದರೂ ಸಂಪುಟ ವಿಸ್ತರಣೆಯಾಗುತ್ತಿಲ್ಲ. ಈ ಸ್ಥಿತಿಯು ಈ ಹಿಂದೆ ವರಿಷ್ಠರ ಅನುಮತಿಗಾಗಿ ಆಗಾಗ್ಗೆ ದೆಹಲಿಗೆ ಭೇಟಿ ನೀಡುತ್ತಿದ್ದ ಕರ್ನಾಟಕದ ಮುಖ್ಯಮಂತ್ರಿಯ ಪಡಿಪಾಟಲನ್ನು ನೆನಪಿಸುತ್ತದೆ.

ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆಗೆ ಅನುಮತಿ ನೀಡಲು ಈ ರೀತಿ ಅಲೆದಾಡಿಸುವುದೇಕೆ? ವರಿಷ್ಠರು ಅನುಸರಿಸುವ ಈ ವಿಳಂಬ ಧೋರಣೆಯ ಹಿಂದಿನ ಮರ್ಮ ಅರ್ಥವಾಗುತ್ತಿಲ್ಲ. ಇದರ ಪರಿಣಾಮವು ಆಡಳಿತ ವ್ಯವಸ್ಥೆಯ ಮೇಲೆ ಆಗಲಿದೆ ಎಂಬುದು ವರಿಷ್ಠರಿಗೆ ಅಥವಾ ಹೈಕಮಾಂಡ್‌ಗೆ ಗೊತ್ತಿಲ್ಲವೇ? ಸಂಪುಟ ವಿಸ್ತರಣೆಯನ್ನು ನಿರಾಳವಾಗಿ ಮಾಡಲಾಗದಿದ್ದರೆ, ಇದ್ದ ಸರ್ಕಾರವನ್ನು ಉರುಳಿಸಿದ್ದಾದರೂ ಏಕೆ?

ರಮಾನಂದ ಶರ್ಮಾ, ಬೆಂಗಳೂರು

ಮತದಾರರ ಹೀಗೊಂದು ಅಪರೂಪದ ಶಿಸ್ತು!

'ಮತದಾರರ ಒಲವೇ ಗೆಲುವ ಚಂದಿರ' ಎಂಬ ಲೇಖನದಲ್ಲಿ (ಪ್ರ.ವಾ., ಜುಲೈ 26) 'ನಿಜ ನಾಯಕನನ್ನು ಯಾವ ಮತಕ್ಷೇತ್ರವೂ ಕಡೆಗಣಿಸುವುದಿಲ್ಲ' ಎಂದು ಟಿ.ಕೆ. ತ್ಯಾಗರಾಜ್ ಹೇಳಿದ್ದಾರೆ. ಹಾಗೇನೂ ಇಲ್ಲ. ಎಂ.ಪಿ. ಪ್ರಕಾಶ್ ಅವರನ್ನು ಹೂವಿನಹಡಗಲಿ ಕ್ಷೇತ್ರದ ಮತದಾರರು ಒಂದು ಚುನಾವಣೆಯಲ್ಲಿ ಗೆಲ್ಲಿಸಿದರೆ, ಮತ್ತೊಂದು ಚುನಾವಣೆಯಲ್ಲಿ ಕಡ್ಡಾಯವಾಗಿ ಸೋಲಿಸುವ ಅಪರೂಪದ ಶಿಸ್ತು ಪಾಲಿಸುತ್ತಿದ್ದರು. ಹೀಗೇಕೆ ಎಂದು ಯೋಚಿಸಿದರೆ ಅನೇಕ ಕಾರಣಗಳು ಬಯಲಾಗುತ್ತಿದ್ದವು.

ಹಾಗೆ ನೋಡಿದರೆ ಪ್ರಕಾಶ್ ಅವರು ಹಲವು ಜನಪ್ರಿಯ ಮತ್ತು ಜನಪರ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿದ್ದರು. ಅವರೊಬ್ಬ ನಿಜ ನಾಯಕರೂ ಆಗಿದ್ದರು. ತಮ್ಮ ಕ್ಷೇತ್ರದಾದ್ಯಂತ ನಿರಂತರ ಜನಸಂಪರ್ಕ ಹೊಂದಿರುತ್ತಿದ್ದರು. ಆದರೂ ಮತದಾರರು ಅವರನ್ನು ಸೋಲಿಸಿಬಿಡುತ್ತಿದ್ದರು. ಅದಕ್ಕೆ ಕಾರಣವೇನೆಂದರೆ ಅವರು ಪ್ರತಿನಿಧಿಸುತ್ತಿದ್ದ ಪಕ್ಷದ ಕಾರ್ಯಕರ್ತರ ಜಡತ್ವ ಮತ್ತು ಎಲ್ಲರ ಬೇಡಿಕೆಯನ್ನು ಈಡೇರಿಸಲಾಗದ ಅಸಹಾಯಕತೆಯಾಗಿರುತ್ತಿತ್ತು. ಎಷ್ಟೋ ಸಂದರ್ಭಗಳಲ್ಲಿ ಜನರ ಬೇಡಿಕೆಗಳು ಸರ್ಕಾರದ ನೀತಿ- ನಿಯಮಗಳನ್ನು ಮೀರಿದ್ದವಾಗಿರುತ್ತಿದ್ದವು. ಇಲ್ಲವೇ ತೀರಾ ವೈಯಕ್ತಿಕ ಬೇಡಿಕೆಗಳಾಗಿರುತ್ತಿದ್ದವು. ಅವುಗಳು ಈಡೇರದಿದ್ದಾಗ, ಅದರಿಂದ ಸಿಟ್ಟಾದವರು ಪ್ರಕಾಶ್ ಬಗ್ಗೆ ವ್ಯಾಪಕವಾಗಿ ಅಪಪ್ರಚಾರ ಮಾಡುತ್ತಿದ್ದರು. ತೀರಾ ಈಚೆಗೆ ಮತದಾರರ ಒಲವು ಜಾತಿ ಆಧಾರಿತವಾಗುತ್ತಿದ್ದು, ಅವರು ಹಣವನ್ನು ನಿರೀಕ್ಷಿಸುವಂಥ ಸಂದರ್ಭವನ್ನು ರಾಜಕಾರಣಿಗಳೇ ಹುಟ್ಟುಹಾಕಿದ್ದಾರೆ. ಹೀಗಾಗಿ, ಚುನಾವಣೆ ಎಂದಾಗ ಮತದಾರರ ಬದಲಾದ ನಕಾರಾತ್ಮಕ ನಿಲುವುಗಳು ಕೂಡ ಮುಖ್ಯ ಪಾತ್ರ ವಹಿಸುತ್ತವೆ ಎಂಬುದು ಸುಳ್ಳಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ವಾರಾಂತ್ಯದ ಪ್ರವಾಸ: ಜನಸಾಮಾನ್ಯರಿಗೆ ಉಪಯುಕ್ತ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಪ್ರಾರಂಭಿಸಿರುವ 'ವಾರಾಂತ್ಯದ ಪ್ಯಾಕೇಜ್ ಪ್ರವಾಸ'ವು ಶ್ರೀಸಾಮಾನ್ಯರನ್ನು ಗಮನದಲ್ಲಿರಿಸಿಕೊಂಡು ರೂಪಿಸಿದ ಒಂದು ಜನಪರ ಕಾರ್ಯಕ್ರಮ. ಸಾಮಾನ್ಯ ಜನರಿಗೆ ಕೈಗೆಟಕುವ ದರದಲ್ಲಿ ಒದಗುವ ಪ್ರವಾಸ ಇದಾಗಿದೆ. ಆಯಾ ಪ್ರದೇಶದ ಪ್ರವಾಸಿತಾಣಗಳು, ಅದರಲ್ಲೂ ಉತ್ತಮ ಮಳೆಯಿಂದ ಮೈದುಂಬಿ ಹರಿಯುತ್ತಿರುವ ಜಲಪಾತದ ವೀಕ್ಷಣೆಗೆ ಈ ಕಾರ್ಯಕ್ರಮ ಅನುವು ಮಾಡಿಕೊಡುವುದಲ್ಲದೆ ಸುತ್ತಮುತ್ತಲ ಪ್ರದೇಶಗಳಲ್ಲಿ ಇರುವ ಪ್ರಸಿದ್ಧ ಯಾತ್ರಾಸ್ಥಳ, ದೇವಸ್ಥಾನಗಳ ವೀಕ್ಷಣೆಗೆ ಸಹ ಅನುಕೂಲ ಆಗಲಿದೆ.

ಒಂದು ದಿನದ ಪ್ರವಾಸ ಇದಾಗಿರುವುದರಿಂದ ಹೆಚ್ಚಿನ ತಯಾರಿ, ಲಗೇಜ್, ಗೋಜಲು ಗೊಂದಲಗಳ ತಾಪತ್ರಯ ಇರುವುದಿಲ್ಲ. ಇಂತಹ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ಆಯೋಜಕರ ಸಿದ್ಧತೆ ಎಷ್ಟು ಮುಖ್ಯವೋ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಪ್ರವಾಸಿಗರ ಗುಂಪು ಶಿಸ್ತು ಮತ್ತು ಸಮಯ ಪರಿಪಾಲನೆಯೂ ಅಷ್ಟೇ ಮುಖ್ಯ.

ಟಿ.ವಿ.ಬಿ.ರಾಜನ್, ತಲಘಟ್ಟಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

‘ನೀಟ್’ಗೆ ತಮಿಳರ ವಿರೋಧ

• ಜಯಸಿಂಹ ಆರ್.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ದೇಶದಾದ್ಯಂತ ನಡೆಸುವ ನೀಟ್ ಪರೀಕ್ಷೆಗೆ ತಮಿಳುನಾಡಿನಲ್ಲಿ ವ್ಯಾಪಕ ವಿರೋಧವಿದೆ. ರಾಜ್ಯದಲ್ಲಿ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ, 12ನೇ ತರಗತಿಯ ಅಂಕಗಳ ಆಧಾರದಲ್ಲೇ ಅವಕಾಶ ಮಾಡಿಕೊಡಬೇಕು ಎಂದು ತಮಿಳುನಾಡು ಸರ್ಕಾರವು ವಾದಿಸುತ್ತಿದೆ. ಬಿಜೆಪಿ ಬಿಟ್ಟು ತಮಿಳುನಾಡಿನ ಬೇರೆಲ್ಲಾ ರಾಜಕೀಯ ಪಕ್ಷಗಳೂ ಸರ್ಕಾರದ ಈ ಪ್ರತಿಪಾದನೆಯನ್ನು ಬೆಂಬಲಿಸಿವೆ. ಈ ಸಂಬಂಧ 2021ರಲ್ಲಿ ಮಸೂದೆಯೊಂದನ್ನು ರೂಪಿಸಿ, ರಾಷ್ಟ್ರಪತಿಯವರ ಅಂಕಿತಕ್ಕೆ ಅದನ್ನು ಕಳುಹಿಸಲಾಗಿತ್ತು. ಅಂದಿನ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಆ ಮಸೂದೆಯನ್ನು ತಿರಸ್ಕರಿಸಿದ್ದರು. ಮತ್ತೆ ಅಂಥದ್ದೇ ಮಸೂದೆಯನ್ನು ತಮಿಳುನಾಡಿನ ಉಭಯ ಸದನಗಳಲ್ಲೂ ಅಂಗೀಕರಿಸಿ, ರಾಷ್ಟ್ರಪತಿ ಅಂಕಿತಕ್ಕೆ ಕಳುಹಿಸಿ ತಿಂಗಳುಗಳು ಕಳೆದಿವೆ. ಆ ಮಸೂದೆ ಇನ್ನೂ ಕೇಂದ್ರ ಸರ್ಕಾರದ ಬಳಿಯೇ ಉಳಿದಿದೆ.

ದೇಶದ ಬೇರೆಲ್ಲಾ ರಾಜ್ಯಗಳು ನೀಟ್ ಪ್ರವೇಶ ಪರೀಕ್ಷೆ ಪದ್ಧತಿಯನ್ನು ಒಪ್ಪಿಕೊಂಡು, ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ನೀಡುತ್ತಿವೆ. ತಮಿಳುನಾಡು ಸರ್ಕಾರವು ಅನಿವಾರ್ಯವಾಗಿ ನೀಟ್ ಪದ್ಧತಿಯನ್ನು ಪಾಲಿಸುತ್ತಿದ್ದರೂ, ಅದನ್ನು ಪ್ರಬಲವಾಗಿ ವಿರೋಧಿಸುತ್ತಿದೆ. ನೀಟ್ ಪ್ರವೇಶ ಪರೀಕ್ಷೆ ಪದ್ಧತಿ ಏಕೆ ಬೇಡ ಎಂಬುದನ್ನು ಮನವರಿಕೆ ಮಾಡಿಕೊಡಲು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸರ್ಕಾರವು ನಿವೃತ್ತ ನ್ಯಾಯಮೂರ್ತಿ ಎ.ಕೆ.ರಾಜನ್ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಆ ಸಮಿತಿ ನೀಡಿದ ವರದಿಯ ಆಧಾರದಲ್ಲೇ ನೀಟ್ ವಿನಾಯಿತಿ–2022 ಮಸೂದೆಯನ್ನು ತಮಿಳುನಾಡು ಸರ್ಕಾರ ಸಿದ್ಧಪಡಿಸಿದೆ. ನೀಟ್ ಪದ್ಧತಿಯಿಂದ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಪ್ರತಿಕೂಲ ಬದಲಾವಣೆಗಳನ್ನು ಮತ್ತು ನೀಟ್ ಪದ್ಧತಿ ಹೇಗೆ ಮಾರಕ ಎಂಬುದನ್ನು ಈ ವರದಿಯಲ್ಲಿ ದತ್ತಾಂಶಗಳ ಸಮೇತ ವಿವರಿಸಲಾಗಿದೆ. ಈ ದತ್ತಾಂಶಗಳನ್ನು ಇರಿಸಿಕೊಂಡೇ ಸರ್ಕಾರವು ನೀಟ್ ಬೇಡ ಎಂದು ಪಟ್ಟು ಹಿಡಿದಿದೆ.

ನೀಟ್ ತಂದ ಬದಲಾವಣೆಗಳು

80.20% 2010–11ರಲ್ಲಿ ನೀಟ್ ಪದ್ಧತಿ ಇಲ್ಲದೇ ಇದ್ದಾಗ ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳ ಪ್ರಮಾಣ

19.80% ಅದೇ ವರ್ಷ ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ತಮಿಳು ಮಾಧ್ಯಮದ ವಿದ್ಯಾರ್ಥಿಗಳ ಪ್ರಮಾಣ

98.01% 2020–21ರಲ್ಲಿ ನೀಟ್ ಮೂಲಕ ಎಂಬಿಬಿಎಸ್ ಕೋರ್ಸ್ ಸೇರಿದ ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳ ಪ್ರಮಾಣ

1.99% ಅದೇ ವರ್ಷ ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ತಮಿಳು ಮಾಧ್ಯಮದ ವಿದ್ಯಾರ್ಥಿಗಳ ಪ್ರಮಾಣ

• ನೀಟ್ ಪದ್ಧತಿಯಲ್ಲಿ ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳಿಗಷ್ಟೇ ಸಾಧ್ಯವಾಗುತ್ತಿದೆ. ತಮಿಳು ಮಾಧ್ಯಮದ ವಿದ್ಯಾರ್ಥಿಗಳು ನೀಟ್ ಪರೀಕ್ಷೆಯಲ್ಲಿ ವಿಫಲವಾಗುತ್ತಿರುವುದರಿಂದ ಅವರು ಅವಕಾಶ ವಂಚಿತರಾಗುತ್ತಿದ್ದಾರೆ

65.17% 2016–17ರಲ್ಲಿ ನೀಟ್ ಪದ್ಧತಿ ಇಲ್ಲದೇ ಇದ್ದಾಗ ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಪ್ರಮಾಣ

34.83% ಅದೇ ವರ್ಷ ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ನಗರ ಪ್ರದೇಶಗಳ ವಿದ್ಯಾರ್ಥಿಗಳ ಪ್ರಮಾಣ

49.91% 2020–21ರಲ್ಲಿ ನೀಟ್ ಪದ್ಧತಿ ಮೂಲಕ ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಪ್ರಮಾಣ

50.09% ಅದೇ ವರ್ಷ ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆದ ನಗರ ಪ್ರದೇಶಗಳ ವಿದ್ಯಾರ್ಥಿಗಳ ಪ್ರಮಾಣ

• ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಗ್ರಾಮೀಣ ಭಾಗದ ಹೆಚ್ಚಿನ ವಿದ್ಯಾರ್ಥಿಗಳು ವಿಫಲರಾಗುತ್ತಿದ್ದಾರೆ. ಎಂಬಿಬಿಎಸ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ನಗರ ಪ್ರದೇಶದ ವಿದ್ಯಾರ್ಥಿಗಳಲ್ಲಿ ನಗರ/ಖಾಸಗಿ/ವಿದೇಶಿ ಆಸ್ಪತ್ರೆಗಳಿಗೆ ಕೆಲಸಕ್ಕೆ ಸೇರುವವರ ಪ್ರಮಾಣ ಹೆಚ್ಚು. ಇದರಿಂದ ರಾಜ್ಯದ ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಿಗೆ ವೈದ್ಯರ ಲಭ್ಯತೆ ಇಲ್ಲದಂತಾಗುತ್ತದೆ ಎಂದು ಸರ್ಕಾರ ಪ್ರತಿಪಾದಿಸಿದೆ

ಆಧಾರ: ನಿವೃತ್ತ ನ್ಯಾಯಮೂರ್ತಿ ಎ.ಕೆ.ರಾಜನ್ ವರದಿ, ನೀಟ್ ವಿನಾಯಿತಿ ಮಸೂದೆ–2022, ಪಿಟಿಐ



ಸಿಬಿಎಸ್‌ಇ ವಿದ್ಯಾರ್ಥಿಗಳಿಗಷ್ಟೇ ಅನುಕೂಲ: ಸರ್ಕಾರ

‘ನೀಟ್ ಪದ್ಧತಿಯು ಸಾಮಾಜಿಕ ನ್ಯಾಯಕ್ಕೆ ಧಕ್ಕೆ ತರುತ್ತದೆ’ ಎಂಬುದು ತಮಿಳುನಾಡು ಸರ್ಕಾರದ ಮೊದಲ ಆಕ್ಷೇಪ. ರಾಜ್ಯದಲ್ಲಿ ಶೇ 72ರಷ್ಟು ವಿದ್ಯಾರ್ಥಿಗಳು ರಾಜ್ಯಪಠ್ಯಕ್ರಮ ಇರುವ ಸರ್ಕಾರಿ ಶಾಲೆ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನೀಟ್ ಪದ್ಧತಿ ಇಲ್ಲದೇ ಇದ್ದಾಗ, 2010–11ರಲ್ಲಿದ್ದ ಒಟ್ಟು ಸೀಟುಗಳಲ್ಲಿ ಪ್ರವೇಶ ಪಡೆದ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳ ಪ್ರಮಾಣ ಶೇ 99.2ರಷ್ಟಿತ್ತು. ಸಿಬಿಎಸ್‌ಇ ಪಠ್ಯಕ್ರಮದ ವಿದ್ಯಾರ್ಥಿಗಳ ಪ್ರಮಾಣ ಶೇ 1ಕ್ಕಿಂತಲೂ ಕಡಿಮೆ ಇತ್ತು. ಆದರೆ 2020–21ನೇ ಸಾಲಿನಲ್ಲಿ ಈ ಕೋರ್ಸ್‌ಗಳಿಗೆ ಪ್ರವೇಶ ಪಡೆದ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳ ಪ್ರಮಾಣ ಶೇ 59ಕ್ಕೆ ಕುಸಿದಿದೆ. ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮದ ವಿದ್ಯಾರ್ಥಿಗಳ ಪ್ರಮಾಣ ಶೇ 41ಕ್ಕೆ ಏರಿಕೆಯಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ. ನೀಟ್ ಪರೀಕ್ಷೆಯ ಪಠ್ಯಕ್ರಮವು ಸಿಬಿಎಸ್‌ಇ ಪಠ್ಯಕ್ರಮಕ್ಕೆ ಹತ್ತಿರವಾದ ವಿಷಯಗಳನ್ನು ಒಳಗೊಂಡಿದೆ. ಹೀಗಾಗಿ ಸಿಬಿಎಸ್‌ಇ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆ ಸುಲಭವಾಗುತ್ತದೆ ಮತ್ತು ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಪರೀಕ್ಷೆ ಕಷ್ಟವಾಗುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸರ್ಕಾರವೂ ಇದನ್ನೇ ಪ್ರತಿಪಾದಿಸುತ್ತಿದೆ.

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 183

ವಿಷ್ಣುಚಕ್ರವ ಸ್ತಂಭಿಸಿದ ವೀರಭದ್ರ

ದಕ್ಷಬ್ರಹ್ಮನ ಯಜ್ಞನಾಶಕ್ಕೆ ವೀರಭದ್ರ ದಿವ್ಯರಥವನ್ನೇರಿ ಮಹಾಸಿಂಹನಾದ ಮಾಡುತ್ತಾ ಮುನ್ನುಗ್ಗಿ ಬಂದರೆ, ತನ್ನ ಭಕ್ತನಾದ ದಕ್ಷಬ್ರಹ್ಮನ ಯಜ್ಞಯಶಸ್ಸಿಗೆ ವಿಷ್ಣು ತನ್ನ ಪಾಂಚಜನ್ಯವೆಂಬ ಮಹಾಶಂಖವನ್ನು ಊದುತ್ತಾ ಬರುತ್ತಾನೆ. ಯುದ್ಧದಿಂದ ಓಡಿಹೋಗಿದ್ದ ದೇವತೆಗಳೆಲ್ಲ ವಿಷ್ಣು ಪಾಳಯ ಸೇರುತ್ತಾರೆ. ದೇವತೆಗಳು ಮತ್ತು ಶಿವಗಣಗಳ ನಡುವೆ ಮಹಾಯುದ್ಧವಾಗುತ್ತದೆ. ಇಂದ್ರ, ಅಗ್ನಿ, ಕುಬೇರ, ನಿರ್‌ಋತಿ ಮತ್ತು ಇತರ ದೇವತೆಗಳು ವೀರಭದ್ರನ ನೇತೃತ್ವದ ಶಿವಗಣಗಳ ಮೇಲೆ ಆಕ್ರಮಣ ಮಾಡುತ್ತಾರೆ. ಇಂದ್ರ ತನ್ನ ಹರಿತವಾದ ನೂರು ಅಲಗುಗಳುಳ್ಳ ವಜ್ರಾಯುಧದಿಂದ ನಂದಿಗೆ ಹೊಡೆದರೆ, ನಂದಿಯೂ ತ್ರಿಶೂಲದಿಂದ ಇಂದ್ರನ ಎದೆಯ ಮೇಲೆ ಪ್ರಹರಿಸಿದ. ನಂದಿ ಮತ್ತು ಇಂದ್ರ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಇಚ್ಛೆಯಿಂದ ನಾನಾ ವರಸೆಗಳಿಂದ ಮಹಾಯುದ್ಧ ಮಾಡಿದರು. ಅಗ್ನಿಯು ಶಕ್ತ್ಯಾಯುಧದಿಂದ ಆತ್ಮನೆಂಬ ಶಿವಗಣನನ್ನು ಹೊಡೆದರೆ, ಆತ್ಮನೂ ಹರಿತವಾದ ಶೂಲದಿಂದ ಅಗ್ನಿಯನ್ನು ಇರಿದ. ಮಹಾಲೋಕನೆಂಬ ಗಣೇಶ್ವರನು ಯಮನೊಡನೆ ತುಮುಲಯುದ್ಧವನ್ನು ಮಾಡಿದರೆ, ಬಲಶಾಲಿಯಾದ ಚಂಡನೆಂಬುವನು ನಿರ್‌ಋತಿ ಮೇಲೆ ಮಹಾಸ್ತ್ರಗಳನ್ನು ಪ್ರಯೋಗಿಸಿದ. ಮಹಾಬಲಶಾಲಿಯಾದ ಮಂಡನೆಂಬ ಶಿವಗಣ, ಜಗತ್ತೇ ವಿಸ್ಮಯಗೊಳ್ಳುವಂತೆ ವರುಣನೊಡನೆ ಯುದ್ಧಮಾಡಿದ. ವಾಯು ಮಹಾಸ್ತ್ರದಿಂದ ಭೃಂಗಿಯನ್ನು ಪ್ರಹರಿಸಿದರೆ, ಭೃಂಗಿಯೂ ತ್ರಿಶೂಲದಿಂದ ವಾಯುವನ್ನು ಹೊಡೆದರೆ, ಕುಬೇರನು ಶಿವಭಕ್ತ ಕೂಷ್ಮಾಂಡಪತಿಯೊಡನೆ ಸೆಣಸಿದ.

ಭೈರವೀನಾಯಕನಾದ ಕಾಲಭೈರವನು ಯೋಗಿಗಳೊಂದಿಗೆ ಸೇರಿ ಕೈಗೆ ಸಿಕ್ಕ ದೇವತೆಗಳನ್ನು ಸೀಳಿ, ಅವರ ರಕ್ತವನ್ನು ಕುಡಿಯುತ್ತಿದ್ದ. ಕಾಳಿ ಸಹ ದೇವತೆಗಳನ್ನು ಸೀಳಿ, ಅವರ ರಕ್ತವನ್ನು ಕುಡಿಯುತ್ತಿದ್ದಳು. ಶಿವನ ಕ್ಷೇತ್ರಪಾಲಕರು ದೇವತೆಗಳನ್ನು ಭಕ್ಷಿಸುತ್ತಿದ್ದರು. ಹೀಗೆ ಶಿವಗಣಗಳ ಕೈ ಮೇಲಾಗುತ್ತಿರುವುದನ್ನು ಕಂಡ ಹರಿಯು ಶಿವಗಣಗಳ ವಿರುದ್ಧ ನೇರ ಯುದ್ಧಕ್ಕಿಳಿದ. ದಶದಿಕ್ಕುಗಳನ್ನೂ ಸುಡುವಂತೆ ವೇಗದಿಂದ ಸುದರ್ಶನ ಚಕ್ರವನ್ನು ಪ್ರಯೋಗಿಸಿದ. ಶಿವಕ್ಷೇತ್ರಪಾಲನು ವೇಗದಿಂದ ಬರುತ್ತಿದ್ದ ವಿಷ್ಣುಚಕ್ರವನ್ನು ಹಿಡಿದು ನುಂಗಿದ. ಹರಿಯು ಕ್ಷೇತ್ರಪಾಲನ ಮುಖವನ್ನ ಅದುಮಿ ಚಕ್ರವನ್ನು ಹೊರ ತೆಗೆದ. ಮತ್ತೆ ವಿಷ್ಣುವು ಚಕ್ರ ಮತ್ತಿತರ ಮಹಾಸ್ತ್ರಗಳನ್ನು ಪ್ರಯೋಗಿಸುತ್ತಾ ಯುದ್ಧ ಮಾಡಿದ. ಹರಿಯು ಸುದರ್ಶನಚಕ್ರ ಮತ್ತು ಇತರ ಮಹಾಸ್ತ್ರಗಳ ಪ್ರಯೋಗಿಸುತ್ತಾ ತುಮುಲಯುದ್ಧವನ್ನು ಮಾಡಿ, ಅನೇಕ ಗಣಗಳನ್ನು ಕೊಂದ. ಇದರಿಂದ ಭೈರವ ಮೊದಲಾದ ಶಿವಗಣಗಳು ಕೋಪಗೊಂಡು ಅನೇಕ ಆಯುಧಗಳನ್ನು ಪ್ರಯೋಗಿಸಿ ಹರಿಯ ಮೇಲೆ ಮುಗಿಬಿದ್ದರು. ವೀರಭದ್ರ ತಾನೂ ಗಣಗಳೊಡನೆ ಸೇರಿಕೊಂಡ. ಆಗ ಹರಿಯು ಕೋಪಗೊಂಡು ಚಕ್ರವನ್ನು ಹಿಡಿದು ವೀರಭದ್ರನೊಡನೆ ಯುದ್ಧಮಾಡಿದ. ಈ ಘನಘೋರವಾದ ಮತ್ತು ರೋಮಾಂಚಕರವಾದ ಯುದ್ಧದಲ್ಲಿ ವಿಷ್ಣು ತನ್ನ ಯೋಗಬಲದಿಂದ ಭಯಂಕರರಾದಂತಹ ಅನೇಕ ವೀರರನ್ನು ಸೃಷ್ಟಿಸಿದ.

ವಿಷ್ಣುವಿನ ಶರೀರದಿಂದ ಜನಿಸಿದಂತಹ ಆ ವೀರರು ವಿಷ್ಣುವಿನಂತೆ ಶಂಖಚಕ್ರಧಾರಿಗಳಾಗಿ ವೀರಭದ್ರನೊಡನೆ ಯುದ್ಧಮಾಡಿದರು. ವಿಷ್ಣುಗಣಗಳನ್ನೆಲ್ಲಾ ವೀರಭದ್ರನು ಶಿವನನ್ನು ಸ್ಮರಿಸಿ, ಶೂಲದಿಂದ ಪ್ರಹರಿಸಿ ಭಸ್ಮ ಮಾಡಿದ. ಬಳಿಕ ವಿಷ್ಣುವಿನ ಎದೆಯಲ್ಲಿ ಆಟವಾಡುವಂತೆ ಅನಾಯಾಸವಾಗಿ ತ್ರಿಶೂಲದಿಂದ ಪ್ರಹರಿಸಿದ. ಶೂಲದ ಏಟಿನಿಂದ ಪುರುಷೋತ್ತಮನಾದ ಹರಿಯು ಬಿದ್ದು ಮೂರ್ಛಿತನಾದ. ಸ್ವಲ್ಪಹೊತ್ತಿನ ನಂತರ ಮೇಲೆದ್ದ ಹರಿಯು ಪ್ರಳಯಕಾಲದ ಅಗ್ನಿಯಂತೆ ಭಯಂಕರವಾದ, ಮೂರು ಲೋಕಗಳನ್ನು ಸುಡುವಷ್ಟು ಶಕ್ತಿಯುಳ್ಳ ತನ್ನ ಸುದರ್ಶನಚಕ್ರವನ್ನು ವೀರಭದ್ರನ ಮೇಲೆ ಪ್ರಹರಿಸಲು ಉದ್ಯುಕ್ತನಾದ. ವೀರಭದ್ರನು ಪ್ರಳಯಕಾಲದ ಸೂರ್ಯನಂತೆ ಪ್ರಜ್ವಲಿಸುತ್ತಾ ತನ್ನೆಡೆಗೆ ಬರುತ್ತಿದ್ದ ಭಯಂಕರವಾದ ವಿಷ್ಣುಚಕ್ರವನ್ನು ಸ್ತಂಭಿಸಿದ. ವಿಷ್ಣು ಎಷ್ಟೇ ಪ್ರಯತ್ನಿಸಿದರೂ, ಶಂಕರನ ಪ್ರಭಾವದಿಂದ ಅದು ಅಲುಗಾಡಲಿಲ್ಲ.

ಕೇರಳ ಸೆಮಿ ಹೈಸ್ಪೀಡ್ ರೈಲು: ನೂರಾರು ಸವಾಲು

• ಅಮೃತ ಕಿರಣ್ ಬಿ.ಎಂ.


ರಾಜ್ಯದ ಉತ್ತರ ತುದಿಯನ್ನು ದಕ್ಷಿಣ ತುದಿಯೊಂದಿಗೆ ಬೆಸೆಯುವ ಬೃಹತ್ ರೈಲ್ವೆ ಯೋಜನೆಯನ್ನು (ಕೆ–ರೈಲ್) ಕೇರಳ ಸರ್ಕಾರ ಪ್ರಸ್ತಾಪಿಸಿದೆ. ರಾಜ್ಯವನ್ನು ವಿಭಾಗಿಸಿದಂತೆ ಕಾಣಿಸುವ ಈ ರೈಲು ಮಾರ್ಗಕ್ಕೆ ಪರಿಸರವಾದಿಗಳು, ರಾಜಕೀಯ ಪಕ್ಷಗಳಿಂದ ವಿರೋಧ ವ್ಯಕ್ತವಾಗಿದೆ. ಆದರೆ, ಅಭಿವೃದ್ಧಿಗೆ ಇದು ಅತ್ಯಗತ್ಯ ಎಂದು ಸರ್ಕಾರ ಪ್ರತಿಪಾದಿಸುತ್ತಿದೆ.

‘ಸಿಲ್ವರ್ ಲೈನ್ ರೈಲ್ ಪ್ರಾಜೆಕ್ಟ್’ ಹೆಸರಿನ ‘ಸೆಮಿ ಹೈಸ್ಪೀಡ್’ ರೈಲುಗಳನ್ನು ಗಂಟೆಗೆ 200 ಕಿಲೋಮೀಟರ್ ವೇಗದಲ್ಲಿ ಓಡಿಸುವ ಕಲ್ಪನೆಯನ್ನು ಸರ್ಕಾರ ಬಿಚ್ಚಿಟ್ಟಿದೆ. ಆಧುನಿಕ ತಂತ್ರಜ್ಞಾನದ ಈ ರೈಲ್ವೆಯು ಪ್ರತ್ಯೇಕ ಮಾರ್ಗ ಹೊಂದಲಿದ್ದು, ಇಂಗಾಲ ಉಗುಳುವಿಕೆ ಕಡಿಮೆ ಮಟ್ಟದಲ್ಲಿರಲಿದೆ. ಈ ಯೋಜನೆಯಿಂದ ಉತ್ತರ ಭಾಗದ ಕಾಸರಗೋಡು ಹಾಗೂ ದಕ್ಷಿಣ ಭಾಗದ ತಿರುವನಂತಪುರ ನಡುವಣ ಪ್ರಯಾಣಕ್ಕೆ ಕೇವಲ 4 ಗಂಟೆ ಸಾಕು (ಈಗ 12 ಗಂಟೆ ಹಿಡಿಯುತ್ತದೆ) . ಈ ಮಾರ್ಗದಲ್ಲಿ 11 ನಿಲ್ದಾಣಗಳು, ವಿಮಾನ ನಿಲ್ದಾಣಗಳ ಸಂಪರ್ಕ ಸಾಧ್ಯವಾಗಲಿದ್ದು, ಆರ್ಥಿಕ ಅಭಿವೃದ್ಧಿಯಲ್ಲಿ ಬಹುಮುಖ್ಯ ಪಾತ್ರ ವಹಿಸಲಿದೆ. ಪ್ರಾದೇಶಿಕ ಅಭಿವೃದ್ಧಿಗೂ ನೆರವಾಗುತ್ತದೆ ಎಂದು ಸರ್ಕಾರ ಪ್ರತಿಪಾದಿಸಿದೆಯಾದರೂ, ಭಾರಿ ಮಟ್ಟದ ಪ್ರತಿರೋಧ ಎದುರಾಗಿದೆ.

ವಿಪರೀತ ವೆಚ್ಚದ ಹೊರೆ

ವಿಪರೀತ ವೆಚ್ಚದಾಯಕ ಹಾಗೂ ದೀರ್ಘಕಾಲದ ಯೋಜನೆ ಎಂಬ ಕಾರಣಕ್ಕೆ ಯೋಜನೆಯು ಆರ್ಥಿಕವಾಗಿ ಕಾರ್ಯಸಾಧುವಲ್ಲ ಎಂದು ಪ್ರತಿಭಟನಕಾರರು ವಾದಿಸಿದ್ದಾರೆ. ಈ ಯೋಜನೆಯ ವೆಚ್ಚ ₹63,940 ಕೋಟಿ. ಆದರೆ, ಯೋಜನೆ ಮುಗಿಯುವ ಹೊತ್ತಿಗೆ ಈ ವೆಚ್ಚವು ₹1,26,000 ಕೋಟಿಗೆ ತಲುಪಬಹುದು ಎಂದು ನೀತಿ ಆಯೋಗ ಎಚ್ಚರಿಕೆ ನೀಡಿದೆ. ಈ ಒಂದು ಯೋಜನೆಗೆ ಮಾಡುವ ವೆಚ್ಚದಿಂದ ರಾಜ್ಯದ ಹತ್ತಾರು ಸಾರಿಗೆ ಮೂಲಸೌಕರ್ಯ ಯೋಜನೆಗಳು ಹಣ ಸಿಗದೇ ಬಡವಾಗುತ್ತವೆ ಎಂಬ ವಾದವೂ ಇದೆ.

ಈ ಯೋಜನೆಗಾಗಿ ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆ, ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನಂತಹ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ತರುವ ಸಾಲ ಹಾಗೂ ಮರುಪಾವತಿಯಿಂದ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುತ್ತದೆ ಎಂದು ವಿರೋಧಿಗಳು ಎಚ್ಚರಿಸಿದ್ದಾರೆ. ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದ ಸಾಲದ ಪ್ರಮಾಣವು ₹3.2 ಲಕ್ಷ ಕೋಟಿಯಿಂದ ₹3.9 ಲಕ್ಷ ಕೋಟಿಗೆ ಏರಿಕೆಯಾಗಲಿದೆ ಎಂದು 2021ರ ಕೇರಳ ಸರ್ಕಾರದ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.



ಆಧಾರ: ಕೆ–ರೈಲ್ ಯೋಜನೆ, ಪಿಟಿಐ

ಸಾಮಾಜಿಕ ಪರಿಣಾಮ

ಯಾವುದೇ ಬೃಹತ್ ಯೋಜನೆಗಾಗಿ ಭೂಮಿಯನ್ನು ಬಿಟ್ಟುಕೊಟ್ಟ ಜನರ ಪುನರ್ವಸತಿ ಎಂಬುದು ದೊಡ್ಡ ಸಮಸ್ಯೆ. ಉದಾಹರಣೆಗೆ, ವಲ್ಲಾರ್‌ಪಾಡಂ ಟ್ರಾನ್ಸ್‌ಶಿಪ್‌ಮೆಂಟ್ ಟರ್ಮಿನಲ್ ಯೋಜನೆಗಾಗಿ ಜಾಗ ನೀಡಿ ತೊಂದರೆ ಅನುಭವಿಸಿದ್ದ ಕೊಚ್ಚಿಯ ಮೂಲಂಬಳ್ಳಿ ಜನರ ಕಹಿನೆನಪು ಇನ್ನೂ ಮಾಸಿಲ್ಲ. ಸಿಲ್ವರ್‌ಲೈನ್ ಯೋಜನೆಗೂ ಜಮೀನು ಸ್ವಾಧೀನವಾಗಬೇಕಿದೆ.

ಕಾನೂನಿನ ಪ್ರಕಾರವೇ ಸಂತ್ರಸ್ತರಿಗೆ ಪರಿಹಾರ ನೀಡುವುದಾಗಿ ಸರ್ಕಾರ ಭರವಸೆ ನೀಡಿದೆ. ಆದರೆ ಭೂಸ್ವಾಧೀನಕ್ಕೆ ವ್ಯವಸ್ಥಿತ ಯೋಜನೆಯನ್ನು ಸರ್ಕಾರ ರೂಪಿಸಿಲ್ಲ ಎಂಬುದು ಪ್ರತಿಭಟನಕಾರರ ಆರೋಪ. ಸರ್ಕಾರ ಅಥವಾ ಸರ್ಕಾರದ ಹೆಸರಿನಲ್ಲಿ ಖಾಸಗಿಯವರು ಒತ್ತಾಯಪೂರ್ವಕವಾಗಿ ಒಕ್ಕಲೆಬ್ಬಿಸುವ ಸಾಧ್ಯತೆಯ ಬಗ್ಗೆ ತೀವ್ರ ಕಳವಳವಿದೆ. ಇಂತಹ ಯೋಜನೆಗಳಲ್ಲಿ ಸ್ಥಳೀಯ ಸಮುದಾಯಗಳ ದನಿಯನ್ನು ನಿರ್ಲಕ್ಷಿಸಲಾಗುತ್ತದೆ ಎಂಬ ಆರೋಪವೂ ಇದೆ.

ಪರಿಸರ ಕಾಳಜಿ

ಪಶ್ಚಿಮ ಘಟ್ಟದಂತಹ ಅಮೂಲ್ಯ ಸಂಪತ್ತನ್ನು ಹೊಂದಿರುವ ಕೇರಳ ರಾಜ್ಯವು ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರೀತ್ಯದಿಂದ ಹಲವು ಅವಘಡಗಳಿಗೆ ಸಾಕ್ಷಿಯಾಗಿದೆ. ಮಳೆ ಸುರಿಯುವಿಕೆಯಲ್ಲಿ ಆಗಿರುವ ಬದಲಾವಣೆ, ಭೂಕುಸಿತ ವಿದ್ಯಮಾನಗಳು ಪ್ರತಿವರ್ಷ ಸಾಮಾನ್ಯ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೃಹತ್ ಅಭಿವೃದ್ಧಿ ಯೋಜನೆಗಳೇ ಪರಿಸರದಲ್ಲಿ ಅಸಮತೋಲನಕ್ಕೆ ಕಾರಣ ಎಂದು ಪರಿಸರವಾದಿಗಳು ಆಕ್ಷೇಪಿಸಿದ್ದಾರೆ. ಪರಿಸರದ ಮೇಲೆ ಪರಿಣಾಮ ಉಂಟಾಗದೇ ಯಾವುದೇ ಅಭಿವೃದ್ಧಿ ಕೆಲಸವನ್ನು ಮಾಡಲು ಸಾಧ್ಯವಿಲ್ಲ ಎಂಬುದು ನಿಜ.

ಆದರೆ, ದೀರ್ಘಕಾಲೀನ ಪರಿಸರ ಪರಿಣಾಮಗಳನ್ನು ನಿರ್ಲಕ್ಷಿಸಿ ಬೃಹತ್ ಅಭಿವೃದ್ಧಿ ಯೋಜನೆಗಳನ್ನು ವಿನ್ಯಾಸಗೊಳಿಸುವುದು ಅಪಾಯವನ್ನು ಆಹ್ವಾನಿಸಿದಂತೆ. ಫಲವತ್ತಾದ ಭೂಮಿಯ ನಾಶ, ಕೃಷಿ ಉತ್ಪಾದನೆಯಲ್ಲಿ ಕುಸಿತ, ಸ್ಥಳೀಯ ಭೂ ವಿನ್ಯಾಸದಲ್ಲಿ ಆಗುವ ಬದಲಾವಣೆ – ಇವೆಲ್ಲವೂ ಪರಿಸರದ ಮೇಲೆ ಶಾಶ್ವತ ಪರಿಣಾಮ ಉಂಟುಮಾಡುತ್ತವೆ ಎಂದು ಕ್ಷಿಪ್ರ ಪರಿಸರ ಪರಿಣಾಮ ಮೌಲ್ಯಮಾಪನ (ಎಐಎ) ವರದಿ ತಿಳಿಸಿದೆ.



ಯೋಜನೆ ವಿರೋಧಿಸಿ ನಡೆದಿದ್ದ ಪ್ರತಿಭಟನೆಯಲ್ಲಿ ಪರಿಸರವಾದಿ ಮೇಧಾ ಪಾಟ್ಕರ್ ಪಾಲ್ಗೊಂಡಿದ್ದರು

ಹೋರಾಟದ ಕಿಚ್ಚು

ಈ ಎಲ್ಲ ಅಂಶಗಳನ್ನು ಮುಂದಿಟ್ಟುಕೊಂಡು ಸೆಮಿ ಹೈಸ್ಪೀಡ್ ರೈಲು ಯೋಜನೆ ವಿರೋಧಿ ಒಕ್ಕೂಟವೊಂದು ರಚನೆಯಾಗಿದ್ದು, ಸಂತ್ರಸ್ತರು, ಸಾಮಾಜಿಕ ಹೋರಾಟಗಾರರು, ರಾಜಕೀಯ ನಾಯಕರು, ಸರ್ಕಾರೇತರ ಸಂಘಟನೆಗಳನ್ನು ಯೋಜನೆ ವಿರುದ್ಧ ಒಟ್ಟುಗೂಡಿಸುತ್ತಿದೆ. ಬಿಜೆಪಿ, ಕಾಂಗ್ರೆಸ್ ಮೊದಲಾದ ರಾಜಕೀಯ ಪಕ್ಷಗಳು ಯೋಜನೆ ವಿರೋಧಿಸಿದ್ದು, ಹೋರಾಟಕ್ಕೆ ಕೈಜೋಡಿಸಿವೆ. ಅಭಿವೃದ್ಧಿಯತ್ತ ಸಾಗಬೇಕು, ಜನರ ಅಮೂಲ್ಯ ಸಮಯವನ್ನು ಉಳಿಸಬೇಕು ಎಂಬ ಅಂಶಗಳು ನಿಜ. ಆದರೆ ಬೃಹತ್ ಮೂಲಸೌಕರ್ಯ ಯೋಜನೆಗಳಿಂದಲೇ ಇದು ಸಾಧ್ಯ ಎಂಬ ಹುಸಿ ಕಲ್ಪನೆಯನ್ನು ತ್ಯಜಿಸಬೇಕಿದೆ. ಹೊಸ ಕೇರಳ ಕಟ್ಟಲು ಅನ್ಯ ಮಾರ್ಗಗಳನ್ನೂ ಸರ್ಕಾರ ಶೋಧಿಸಬೇಕಿದೆ. ಬೊಕ್ಕಸಕ್ಕೆ ಹೊರೆಯಾಗದ, ಪರಿಸರವನ್ನು ಹೆಚ್ಚು ಘಾಸಿಗೊಳಿಸದ, ಸಾಮಾಜಿಕವಾಗಿ ದೊಡ್ಡ ಪರಿಣಾಮಗಳನ್ನು ಉಂಟುಮಾಡದ ಯೋಜನೆಗಳ ಕುರಿತು ಸರ್ಕಾರ ಚಿಂತಿಸಲಿ ಎಂಬುದು ಕೇರಳಿಗರ ಕೂಗು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಯುಪಿಎ ಸರ್ಕಾರದ ಅವಧಿಯಲ್ಲಿ ಸರಕುಗಳ ಮೇಲೆ ವಿಧಿಸಿದ್ದ ತೆರಿಗೆಗೂ, ಈಗಿನ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಸರಕುಗಳ ಮೇಲೆ ವಿಧಿಸಲಾಗುತ್ತಿರುವ ತೆರಿಗೆಗೂ ಹೋಲಿಕೆ ಮಾಡಿರುವ ಗ್ರಾಫಿಕ್ಸ್ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಯುಪಿಎ ಅವಧಿಯಲ್ಲಿ ಅತ್ಯಧಿಕ ತೆರಿಗೆ ವಿಧಿಸಲಾಗುತ್ತಿದ್ದ ಸರಕುಗಳಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕಡಿಮೆ ತೆರಿಗೆ ಹಾಕುತ್ತಿದೆ ಎಂದು ಬಿಂಬಿಸಲಾಗಿದೆ.



ಈ ಗ್ರಾಫಿಕ್ಸ್‌ನಲ್ಲಿರುವ ಮಾಹಿತಿಯನ್ನು ವಿಶ್ಲೇಷಿಸಿರುವ ‘ದಿ ಕ್ವಿಂಟ್’, ಜನರ ದಾರಿತಪ್ಪಿಸುವುದು ಇದರ ಉದ್ದೇಶ ಎಂದು ತಿಳಿಸಿದೆ. ಯುಪಿಎ ಅವಧಿಯಲ್ಲಿ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪದ್ಧತಿ ಇತ್ತು. ಸರಕುಗಳ ಮೇಲಿನ ತೆರಿಗೆಯು ರಾಜ್ಯದಿಂದ ರಾಜ್ಯಕ್ಕೆ ಬೇರೆಯಾಗಿರುತ್ತಿತ್ತು. ಅಲ್ಲದೆ, ಅಂತರರಾಜ್ಯ ಮಾರಾಟಕ್ಕೆ ಕೇಂದ್ರ ಸರ್ಕಾರ ತೆರಿಗೆ ಹಾಕುತ್ತಿತ್ತು. ಹೀಗಾಗಿ ಪ್ರತಿ ಸರಕಿನ ಮೌಲ್ಯವು ಒಂದೇ ಆಗಿರುತ್ತಿರಲಿಲ್ಲ. ಆದರೆ 2017ರಲ್ಲಿ ಜಿಎಸ್‌ಟಿ ಜಾರಿಗೆ ಬಂದ ಬಳಿಕ ದೇಶದಾದ್ಯಂತ ಏಕ ರೀತಿಯ ತೆರಿಗೆ ಪದ್ಧತಿ ಜಾರಿಗೆ ಬಂದಿದೆ. ಯುಪಿಎ ಅವಧಿಯಲ್ಲಿ ಕೆಲವು ಸರಕುಗಳ ಮೇಲಿನ ವ್ಯಾಟ್ ದರ ಹೆಚ್ಚಿದ್ದರೂ, ಗ್ರಾಫಿಕ್ಸ್‌ನಲ್ಲಿ ಆಯ್ದ ಸರಕುಗಳನ್ನು ಮಾತ್ರ ತೋರಿಸಿ, ಎನ್‌ಡಿಎ ಅವಧಿಯಲ್ಲಿ ಕಡಿಮೆ ತೆರಿಗೆ ಇದೆ ಎಂದು ಬಿಂಬಿಸಲಾಗುತ್ತಿದೆ. ಗೋಧಿಹಿಟ್ಟು ಸೇರಿದಂತೆ ಇಲ್ಲಿ ಉಲ್ಲೇಖಿಸಿರುವ ಜಿಎಸ್‌ಟಿ ದರಗಳು ಪರಿಷ್ಕರಣೆಗೂ ಮೊದಲಿನ ದರಗಳು ಎಂದು ಕ್ವಿಂಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಜ್ಞಾನಿಯ ಬಗೆ

ಉಂಡಾತನುಣುತಿರುವರನು ಕಾಣ್ಬ ನಲವಿಂದ |
ಪಂಡಿತನು ವಿದ್ಯಾರ್ಥಿಗಳಿಗೊರೆವ ನಯದಿಂ ||
ಕಂಡು ಲೋಕವನು ಸಂತೈಸುತಿರುವವ ಜ್ಞಾನಿ |
ಕಂಡೆಲ್ಲರೊಳು ತನ್ನ – ಮಂಕುತಿಮ್ಮ || 680 ||

ಪದ-ಅರ್ಥ: ಉಂಡಾತನುಣುತಿರುವರನು = ಉಂಡಾತನು(ಉಂಡವನು) + ಉಣುತಿರುವರನು, ಕಾಣ್ಬ = ಕಾಣುವ, ನಲವಿಂದ = ಪ್ರೀತಿಯಿಂದ, ವಿದ್ಯಾರ್ಥಿಗಳಿಗೊರೆವ = ವಿದ್ಯಾರ್ಥಿಗಳಿಗೆ + ಒರೆವ(ತಿಳಿಸುವ), ಕಂಡೆಲ್ಲರೊಳು = ಕಂಡು + ಎಲ್ಲರೊಳು.

ವಾಚ್ಯಾರ್ಥ: ಊಟ ಮಾಡಿ ಮುಗಿಸಿದವ ಊಟ ಮಾಡುವವರನ್ನು ಪ್ರೀತಿಯಿಂದ ಆರೈಕೆ ಮಾಡುವಂತೆ, ಪಂಡಿತ ತನ್ನ ವಿದ್ಯಾರ್ಥಿಗಳಿಗೆ ತಾಳ್ಮೆಯಿಂದ, ಅಕ್ಕರೆಯಿಂದ ಬೋಧಿಸುವಂತೆ, ಜ್ಞಾನಿ ಎಲ್ಲರಲ್ಲೂ ತನ್ನನ್ನೇ ಕಾಣುತ್ತ ಲೋಕವನ್ನು ಸಂತೈಸುತ್ತಾನೆ.

ವಿವರಣೆ: ಶ್ರೀರಾಮ ಕಂಡ, ಅನುಭವಿಸಿದ ನೋವು ಸಣ್ಣದೆ? ಕೃಷ್ಣ ಕಂಡಷ್ಟು ಹಿಂಸೆಯನ್ನು, ರಕ್ತಪಾತವನ್ನು ಮತ್ತಾರೂ ಕಂಡಿರಲು ಸಾಧ್ಯವಿಲ್ಲ. ರಾಜಕುಮಾರನ ಸುಖಶಯ್ಯೆಯಿಂದ ಸನ್ಯಾಸಿ ಬದುಕಿಗೆ ನೆಗೆದ ಬುದ್ಧನ ಕಣ್ಣುಗಳು ಕಷ್ಟಗಳನ್ನು ಕಂಡಿರಲಾರವೆ? ತಮ್ಮ ವಂಶದ ಕುಡಿಗಳೇ ಪರಸ್ಪರ ಹೋರಾಡಿ ಮಣ್ಣಲ್ಲಿ ಮಣ್ಣಾಗಿ ಹೋದದ್ದನ್ನು ಕಂಡ ವೇದವ್ಯಾಸರ ನೋವು ಎಂಥದ್ದು?

ಆದರೆ ಇವರೆಲ್ಲ ಅಜರಾಮರವಾದದ್ದು ತಾವು ಕಂಡ, ಪಟ್ಟ ಕಷ್ಟ, ನೋವುಗಳಿಂದಲ್ಲ. ತಮ್ಮ ನೋವುಗಳ ಲಾವಾರಸದ ನಡುವೆಯೂ ತಣ್ಣಗಿದ್ದು ತಮ್ಮ ಸುತ್ತಮುತ್ತಲಿನ ಜನಕ್ಕೆ, ಮುಂಬರುವ ತಲೆಮಾರುಗಳಿಗೆ ತಿಳಿ ಹೇಳಿದ ಸಾಂತ್ವನದ ಮಾತುಗಳಿಂದ. ಅದಕ್ಕೇ ಅವರು ದೇವರಾದರು, ಜ್ಞಾನಿಗಳಾದರು, ಸಾಂತ್ವನದ ತಿಳಿಗೊಳಗಳಾದರು. ಅವರೆಲ್ಲ ಕಂಡದ್ದು ಬೆಂಕಿಯುರಿಯಾದರೂ ಜಗತ್ತನ್ನು ನಯದಿಂದ ಕಂಡರು. ಕಂಡದ್ದನ್ನು ಪ್ರೀತಿಯಿಂದ ಹೇಳಿದರು. ಜನರ ಮನಸ್ಸಿಗೆ ತಂಗಾಳಿಯನ್ನು ತಂದರು. ಆಸೆ, ಆತ್ಮವಿಶ್ವಾಸಗಳನ್ನು ಕುದುರಿಸಿದರು. ಅಂಥ ಜ್ಞಾನಿಗಳ ಉಸುರುವಿಕೆಯಿಂದ ಪ್ರಪಂಚ ಇನ್ನೂ ನಿಂತಿದೆ.

ಕಗ್ಗ, ಜ್ಞಾನಿಗಳ ಈ ಕಾರ್ಯವನ್ನು ಎರಡು ಸುಂದರ ಉದಾಹರಣೆಗಳೊಂದಿಗೆ ವಿವರಿಸುತ್ತದೆ. ಹೊಟ್ಟೆ ತುಂಬ ಊಟ ಮಾಡಿ ತೃಪ್ತನಾದ ವ್ಯಕ್ತಿ, ತನ್ನ ಜೊತೆಗಾರರು ಊಟಕ್ಕೆ ಕುಳಿತಾಗ ಅವರನ್ನು ಪ್ರೀತಿಯಿಂದ ಉಪಚರಿಸುತ್ತಾನೆ. ಇದಕ್ಕೆ ಎರಡು ಕಾರಣಗಳು. ಒಂದು, ಅವನಿಗೆ ಜೊತೆಗಾರರ ಬಗ್ಗೆ ಪ್ರೀತಿಯಿದೆ. ಎರಡು, ತನ್ನ ಹೊಟ್ಟೆ ತುಂಬಿದೆ, ತೃಪ್ತಿಯಾಗಿದೆ. ತನ್ನ ಹೊಟ್ಟೆ ಹಸಿದಿದ್ದರೆ ಆ ಪ್ರೀತಿಯಿಂದ ಉಪಚರಿಸುತ್ತಿದ್ದನೇ? ಅವರ ಊಟವನ್ನು ಬೇಗ ಮುಗಿಸಿ ತನ್ನ ಊಟಕ್ಕೆ ಅವಸರಿಸುತ್ತಿದ್ದನೆ? ಇದೇ ರೀತಿ ಒಬ್ಬ ಒಲವಿನ ಶಿಕ್ಷಕ ತನ್ನ ಶಿಷ್ಯರಿಗೆ ಪಾಠಗಳನ್ನು ತಿಳಿಸುವ ಪರಿ.

ತಾನು ಚೆನ್ನಾಗಿ ತಿಳಿದುಕೊಂಡಿದ್ದಾನೆ, ತಿಳಿದದ್ದನ್ನು ಮಕ್ಕಳಿಗೆ ಅರ್ಥವಾಗುವಂತೆ ಪ್ರೀತಿಯಿಂದ ತಿಳಿಸುತ್ತಾನೆ.

ಹೊಟ್ಟೆ ತುಂಬಿ ತೃಪ್ತನಾದ ವ್ಯಕ್ತಿ, ಮತ್ತೊಬ್ಬರ ಹಸಿವನ್ನು ತಣಿಸುವುದರಲ್ಲಿ ನಿರತನಾಗಿರುವಂತೆ, ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡ ಶಿಕ್ಷಕ ತನ್ಮಯತೆಯಿಂದ ತನ್ನ ವಿದ್ಯಾರ್ಥಿಗಳಿಗೆ ತಿಳಿಹೇಳುವಂತೆ, ಜ್ಞಾನಿಯಾದವನು ಈ ಪ್ರಪಂಚವನ್ನು ಅತ್ಯಂತ ಪ್ರೀತಿಯಿಂದ, ನಯದಿಂದ ತಿಳಿದು ತಿಳುವಳಿಕೆಯನ್ನು, ಸಾಂತ್ವನವನ್ನು ನೀಡುತ್ತಾನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜುಲೈ 27, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಚತುರ್ದಶಿ ಗಂ.21-12 ನಕ್ಷತ್ರ: ಪುನರ್ವಸು ಅಹೋರಾತ್ರ ಯೋಗ: ಹರ್ಷಣ ಗಂ. 17-06, ಕರಣ: ವಿಷ್ಟಿ ಗಂ. 08-01, ಕರ್ಕಾಟಕ ಮಾಸದ 10 ನೇ ದಿನ.
ರಾಹುಕಾಲ : ಮಧ್ಯಾಹ್ನ 12:00 – 01:30
ಸೂರ್ಯೋದಯ : 06-18 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 27 ಜುಲ್‌ಹಿಜಾನ್,
ಅದೃಷ್ಟ ಸಂಖ್ಯೆ : 5, 9

ಮೇಷ : ಆದಾಯಕ್ಕಿಂತ ಜಾಸ್ತಿ ಅನಿವಾರ್ಯತೆಯ ಖರ್ಚುಗಳು ಎದುರಾಗಬಹುದು . ಹಣಕಾಸಿನ ವಿಚಾರದಲ್ಲಿ ಜಾಗ್ರತೆ ವಹಿಸಿ. ಅಡಿಕೆ ಮಾರಾಟ ಪ್ರತಿನಿಧಿಗಳಿಗೆ ಹೆಚ್ಚಿನ ಕಮಿಷನ್ ಸಿಗಲಿದೆ.

ವೃಷಭ : ವೈಯಕ್ತಿಕ ಜೀವನದ ಸಮಸ್ಯೆಗಳು ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಾಧನೆಗೆ ಸುಸಮಯ. ಅಪರೂಪದ ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ.

ಮಿಥುನ : ಮಕ್ಕಳೊಡನೆ ಉಪಯುಕ್ತ ಸಮಯ ಕಳೆಯುವಿರಿ. ಕೌಟುಂಬಿಕ ನೆಮ್ಮದಿ ಸಮೃದ್ಧಿಯಾಗಿದ್ದರೂ ಸಣ್ಣ-ಪುಟ್ಟ ಮಾನಸಿಕ ಕಿರಿಕಿರಿಗಳು ತಪ್ಪದಂತಾಗಲಿದೆ.

ಕರ್ಕಾಟಕ : ನಿಮ್ಮ ಯೋಜನೆಗಳಿಗೆ ಸ್ತ್ರೀವರ್ಗದಿಂದ ಮಹತ್ವದ ಸಹಾಯ ಪ್ರಾಪ್ತವಾಗಲಿದೆ. ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಬಹಳಷ್ಟು ಪ್ರಚಾರ ಸಿಗುವುದು. ರಾಜಕೀಯ ನಡೆಯಲ್ಲಿ ಭವಿಷ್ಯವಿದೆ.

ಸಿಂಹ : ಪ್ರಾರಂಭಿಸಿದ ಎಲ್ಲಾ ಕೆಲಸಗಳಲ್ಲಿಯೂ ಯಶಸ್ಸು, ಲಾಭ, ಅಭಿವೃದ್ಧಿಗಳಿಂದ ಮನಸ್ಸಿಗೆ ಸಂತೋಷ ಸಿಗಲಿದೆ. ಗ್ರಹಗಳ ಚಲನೆಯು ತಿರುಗಾಟ ಮಾಡಿಸುವುದರಿಂದ ಆರೋಗ್ಯದ ಬಗ್ಗೆ ಗಮನಹರಿಸಿ.

ಕನ್ಯಾ : ದುಷ್ಫಲವನ್ನು ಅನುಭವಿಸುತ್ತಿರುವ ನೀವು ಈ ದಿನದಲ್ಲಿ ಸ್ವಲ್ಪಮಟ್ಟಿನ ಚೇತರಿಕೆ ಕಾಣುವಿರಿ. ಹಂತ ಹಂತವಾಗಿ ವಿವಾದಗಳ ನಿವಾರಣೆ ಆಗಲಿವೆ. ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯುವುದು ಉತ್ತಮ.

ತುಲಾ : ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆತು ಮುಂದಿನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಕೋರ್ಟಿನಲ್ಲಿರುವ ಹಳೆಯ ಕೇಸ್‌ಗಳು ಮುಕ್ತಾಯಗೊಳ್ಳುವ ಸಂಭವವಿದೆ.

ವೃಶ್ಚಿಕ : ಬಂದ ಅವಕಾಶಗಳನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡಲ್ಲಿ ವ್ಯಾಪಾರ, ವ್ಯವಹಾರದಲ್ಲಿ ಅಧಿಕ ಲಾಭ ಕಾಣಬಹುದು. ನಿಮ್ಮ ಲಾಭಕ್ಕಾಗಿ ಇನ್ನೊಬ್ಬರಿಗೆ ಮೋಸ ಮಾಡಬೇಡಿ.

ಧನು : ಕಚೇರಿಯಲ್ಲಿ ನಿಸ್ವಾರ್ಥ ಕೆಲಸಗಳಿಂದಾಗಿ ಮುಂದಿನ ದಿನಗಳಲ್ಲಿ ಹೆಚ್ಚಿನ ಲಾಭ ಪಡೆಯುವಿರಿ. ಸರಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಕಲಾವಿದರಿಗೆ ಹೆಚ್ಚಿನ ಅವಕಾಶ ಲಭಿಸಲಿದೆ.

ಮಕರ : ಇತ್ತೀಚಿನ ದಿನದಲ್ಲಿ ಸಂಪಾದನೆಯ ವಿಚಾರದಲ್ಲಿ ವೈರಾಗ್ಯ ಹೊಂದಿರುವ ನೀವು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಪರಿಶ್ರಮದಿಂದ ದುಡಿದರೆ ಪ್ರಗತಿಯ ಹಾದಿಯನ್ನು ಕಾಣುವಿರಿ.


ಕುಂಭ : ದೈಹಿಕ ಕೆಲಸವನ್ನು ಮಾಡಿ ದುಡಿಮೆ ಮಾಡುತ್ತಿರುವವರು ದೇಹಕ್ಕೆ ಸ್ವಲ್ಪಮಟ್ಟಿನ ವಿಶ್ರಾಂತಿ ನೀಡಬೇಕಾಗುತ್ತದೆ. ಸರ್ಕಾರಿ ಉದ್ಯೋಗಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪ್ರಯತ್ನವನ್ನು ಮಾಡಬೇಕು.

ಮೀನ : ಚರ್ಮಸಂಬಂಧ ಅನಾರೋಗ್ಯವು ಕಾಣಿಸಿದಲ್ಲಿ ಆಯುರ್ವೇದದ ಮೊರೆ ಹೋಗುವುದರಿಂದ ಶಾಶ್ವತ ಪರಿಹಾರ ದೊರಕಲಿದೆ. ಚೋರ ಕೃತ್ಯಗಳು ನಡೆಯುವ ಸಂಭವವಿದೆ. ಸಂತಾನಾಪೇಕ್ಷಿಗಳು ಫಲವನ್ನು ಪಡೆಯುವಿರಿ.

ಪದಬಂಧ 5031 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಉತ್ತ ಮೇಲೆ ನೆಲವನ್ನು ಮಟ್ಟ ಮಾಡುವ ಸಾಧನ(3)
4.ಅಟ್ಟದ ಮೇಲೆ ಆದರಣೆ ಮಾಡಿದ್ದಕ್ಕೇ ಸಾಂದ್ರತೆ!(3)
5.ಕತ್ತು ಕೊನೆಗೊಂಡಿರುವುದಕ್ಕೇ ಇದು ಅಡ್ಡಿ(4)
6.ಆಹುತಿಯನ್ನು ಕೊಡುವ ಸ್ಥಳ(4)
8.ಹತ್ತಿರದಲ್ಲಿಯೇ ಪ್ರತ್ಯಕ್ಷನಾಗಿರುವ ಶಿವ!(2)
10.ಇಪ್ಪತ್ನಾಲ್ಕು ಗಂಟೆಗಳ ಅವಧಿ(2)
13.ನಿದರ್ಶನ ತೋರಿಸುತ್ತಿರುವ ತತ್ವ ಜ್ಞಾನಿ(4)
14.ಸುಮಾರು ಮೂರು ಮೈಲುಗಳ ಅಳತೆ(4)
15.ಮಣಿ ಸರ ಧರಿಸಿರುವ ಚಲುವೆ(3)
16.ಸತ್ವ ಇಲ್ಲಿದೆ(3)

ಮೇಲಿಂದ ಕೆಳಕ್ಕೆ
1.ಹೊಟ್ಟೆಯನ್ನು ಹೊರೆದುಕೊಳ್ಳುವುದು(6)
2.ಲಲಾಟದ ಮೇಲೆ ಮೂಡಿರುವ ವಿಧಿಲಿಖಿತ(5)
3.ಮಂಕ ಹಿಡಿದಿರುವ ಬುಟ್ಟಿ(3)
5.ವಠಾರಕ್ಕೆ ಛಲವಾದಿ ಬಂದಿರುವನಲ್ಲಾ! (4)
7.ಒಪ್ಪವಾಗಿ ಬಂದಿರುವ ಪರಿವಿಡಿ(6)
9.ದಾಹ ತೀರಿದ ನಂತರ ಪಡೆದುಕೊಂಡಿರುವ ಅಪ್ಪಣೆ ಚೀಟಿ(4)
11.ಹಳೆಯದನ್ನು ಪುನಃ ಹೊಸದು ಮಾಡುವಿಕೆ(5)
12.ಸರೀಕರೆದುರು ಧರಿಸಿಕೊಂಡ ಕಂಠಾಭರಣ(3)



5030ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಉಪಮಾತೀತ 4.ಉದರ 5.ತಿನಿಸು 9.ಧ್ಯಾನ 10.ಪಿತೂರಿ 11.ಹೊಗೆ 12.ನಿಗಮ 15.ನಗರ 16.ರಜತೋತ್ಸವ

ಮೇಲಿಂದ ಕೆಳಕ್ಕೆ: 1.ಗುಮಾನಿ 2.ಉರ 3.ತತ4.ಉಪಾಧ್ಯಾಯಿನಿ 6.ಸುಲಿಗೆಗಾರ 7.ನಾಪಿತ 8.ಪರಿಷೆ 13.ಮರ 14.ಸಂತೋಷ 15.ನವ

ಸುಡೊಕು 5417

				6		1		
9							7	8
	8		7			2		6
6		1		5		7		9
			8	9	6			
8				7		5		2
3		9		1				
			6		7	9		4
7		8		2			1	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5416 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ರಾಷ್ಟ್ರಪತಿಗೆ ಪ್ರತಿಪಕ್ಷಗಳ ಪತ್ರ

ನವದೆಹಲಿ (ಪಿಟಿಐ): ರಾಜಕೀಯ ವಿರೋಧಿಗಳನ್ನು ಹಣಿಯುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಾಂವಿಧಾನಿಕ ಸಂಸ್ಥೆಗಳನ್ನು ತೀವ್ರವಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿರುವ ಪ್ರತಿಪಕ್ಷಗಳು, ತಕ್ಷಣ ಮಧ್ಯಪ್ರವೇಶಿಸುವಂತೆ ಆಗ್ರಹಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮಂಗಳವಾರ ಪತ್ರ ಬರೆದಿವೆ. ಕಾಂಗ್ರೆಸ್, ಡಿಎಂಕೆ, ಎಸ್‌ಪಿ, ಎಎಪಿ, ಆರ್‌ಜೆಡಿ, ಸಿಪಿಎಂ ಪಕ್ಷಗಳ ಮುಖಂಡರು ಪತ್ರಕ್ಕೆ ಸಹಿ ಹಾಕಿದ್ದಾರೆ. ಬಿಜೆಪಿ ವಿರುದ್ಧ ಸೈದ್ಧಾಂತಿಕವಾಗಿ ಹಾಗೂ ರಾಜಕೀಯವಾಗಿ ಹೋರಾಟ ನಡೆಸುತ್ತಿರುವ ವಿರೋಧ ಪಕ್ಷಗಳನ್ನು ದುರ್ಬಲಗೊಳಿಸುವ ಹಾಗೂ ವರ್ಚಸ್ಸು ಕುಂದಿಸುವ ಏಕೈಕ ಉದ್ದೇಶವನ್ನು ಸರ್ಕಾರ ಹೊಂದಿದೆ ಎಂದು ಪತ್ರದಲ್ಲಿ ಆರೋಪಿಸಲಾಗಿದೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣ; ಇಂದು ಮತ್ತೆ ವಿಚಾರಣೆಗೆ ಬರುವಂತೆ ಇ.ಡಿ ಸೂಚನೆ

ಇ.ಡಿಯಿಂದ 6 ತಾಸು ಸೋನಿಯಾ ವಿಚಾರಣೆ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣ ಕುರಿತಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ.) ಎರಡನೇ ದಿನವಾದ ಮಂಗಳವಾರವೂ ವಿಚಾರಣೆಗೆ ಒಳಪಡಿಸಿತು. ಆರು ತಾಸು ವಿಚಾರಣೆ ನಡೆಸಿದ ಅಧಿಕಾರಿಗಳು ಬುಧವಾರ ಮತ್ತೆ ವಿಚಾರಣೆಗೆ ಬರುವಂತೆ ಸೋನಿಯಾ ಅವರಿಗೆ ಸೂಚಿಸಿದ್ದಾರೆ.

ಮಕ್ಕಳಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರ ಜತೆ ಬೆಳಿಗ್ಗೆ 11 ಗಂಟೆಗೆ ಇ.ಡಿ. ಕಚೇರಿಗೆ ಬಂದ ಸೋನಿಯಾ ಅವರು, ಅಧಿಕಾರಿಗಳ ಎದುರು ತಮ್ಮ ಹೇಳಿಕೆ ದಾಖಲಿಸಿ ಸಂಜೆ 7 ಗಂಟೆಗೆ ನಿರ್ಗಮಿಸಿದರು.

ಸೋನಿಯಾ ಅವರಿಗೆ ಆಗಾಗ್ಗೆ ಔಷಧ ಹಾಗೂ ಮಾತ್ರೆಗಳನ್ನು ನೀಡಬೇಕಿದ್ದರಿಂದ, ಪ್ರಿಯಾಂಕಾ ಅವರು ಇ.ಡಿ. ಕಚೇರಿಯ ಮತ್ತೊಂದು ಕೋಣೆಯಲ್ಲಿ ಇದ್ದರು. ಮಧ್ಯಾಹ್ನ 2 ಗಂಟೆಗೆ ಕಚೇರಿಯಿಂದ ಹೊರಟ ಸೋನಿಯಾ ಅವರು, ಊಟ ಮುಗಿಸಿ ಮತ್ತೆ 3.30ಕ್ಕೆ ವಾಪಸಾದರು.

ಜುಲೈ 21ರಂದು ಎರಡೂವರೆ ಗಂಟೆ ವಿಚಾರಣೆ ಎದುರಿಸಿದ್ದ ಅವರು, ಇ.ಡಿ ಅಧಿಕಾರಿಗಳು ಕೇಳಿದ್ದ 28 ಪ್ರಶ್ನೆಗಳಿಗೆ ಉತ್ತರಿಸಿದ್ದರು. ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಹಾಗೂ ಯಂಗ್ ಇಂಡಿಯಾ ಕಂಪನಿಯಲ್ಲಿನ ಪಾತ್ರದ ಕುರಿತು ಸೋನಿಯಾ ಅವರನ್ನು ಪ್ರಶ್ನಿಸಲಾಯಿತು.


ನವದೆಹಲಿಯ ಎಐಸಿಸಿ ಕಚೇರಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಯುವಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ ಬಿ.ವಿ. ಅವರ ಕೂದಲನ್ನು ಹಿಡಿದು ಪೊಲೀಸರು ಎಳೆದೊಯ್ದರು – ಪಿಟಿಐ ಚಿತ್ರ

ಬೆಲೆಏರಿಕೆ, ಹಣದುಬ್ಬರ, ನಿರುದ್ಯೋಗ, ಅಗ್ನಿಪಥಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಎತ್ತಿದವರನ್ನೆಲ್ಲಾ ಬಂಧಿಸುವಂತೆ ಈ 'ದೇಶದ ರಾಜ' ಆದೇಶ ನೀಡಿದ್ದಾರೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ನೀವು ನಮ್ಮನ್ನು ತುಳಿಯಿರಿ, ಆದರೆ ಆ ಮೂಲಕ ನಮ್ಮ ಚೈತನ್ಯವನ್ನು ಹತ್ತಿಕ್ಕಲಾಗದು. ಬಿಜೆಪಿಯ ದಬ್ಬಾಳಿಕೆಯ ವಿರುದ್ಧ ನಮ್ಮ ಹೋರಾಟ ನಿಲ್ಲುವುದಿಲ್ಲ
ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ನಾಯಕ

ಅಧಿಕಾರದಲ್ಲಿದ್ದಾಗ ತುರ್ತುಪರಿಸ್ಥಿತಿ ಹೇರಿದ್ದವರು ಈಗ ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಮಾತನಾಡುತ್ತಿದ್ದಾರೆ. ಇದು ಅವರಿಗೆ ಹೊಂದುವುದಿಲ್ಲ
ಧರ್ಮೇಂದ್ರ ಪ್ರಧಾನ್
ಕೇಂದ್ರ ಸಚಿವ

ಕಾಂಗ್ರೆಸ್ ಪ್ರತಿಭಟನೆ

ಸಂಸತ್ತಿನಲ್ಲಿ ಚರ್ಚೆಗೆ ಅವಕಾಶ ನೀಡದ್ದನ್ನು ವಿರೋಧಿಸಿ ಮತ್ತು ಸೋನಿಯಾ ಗಾಂಧಿ ಅವರನ್ನು ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ವಿಚಾರಣೆಗೆ ಒಳಪಡಿಸಿದ್ದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ದೇಶದ ಹಲವಡೆ ತೀವ್ರ ಪ್ರತಿಭಟನ ನಡೆಸಿದ್ದಾರೆ. 'ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ.

ದೆಹಲಿಯ ವಿಜಯ್ ಚೌಕ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಸಂಸದರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದ್ದಾರೆ.

ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಯುವ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರನ್ನು ದೆಹಲಿ ಪೊಲೀಸರು ಅಮಾನುಷವಾಗಿ ವಶಕ್ಕೆ ಪಡೆದಿದ್ದಾರೆ. ಹಲ್ಲೆ ನಡೆಸಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಪೊಲೀಸರು, ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ ಅವರ ಕೂದಲು ಹಿಡಿದು ಎಳೆದೊಯ್ಯುತ್ತಿರುವ ದೃಶ್ಯವಿರುವ ವಿಡಿಯೊವನ್ನು ಕಾಂಗ್ರೆಸ್ ಟ್ವೀಟ್ ಮಾಡಿದೆ. ಶ್ರೀನಿವಾಸ ಅವರ ಕೂದಲು ಎಳೆದ ಪೊಲೀಸ್ ಸಿಬ್ಬಂದಿಯ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ ಎಂದು ಎನ್‌ಡಿ ಟಿ.ವಿ ವರದಿ ಮಾಡಿದೆ.

ಕಾಂಗ್ರೆಸ್ ನಾಯಕರ ಮೌನ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾರಿ ನಿರ್ದೇಶನಾಲಯದ (ಇಡಿ) ವಿಚಾರಣೆ ನೆಪದಲ್ಲಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕೇಂದ್ರದ ಬಿಜೆಪಿ ಸರ್ಕಾರ ಅನಗತ್ಯವಾಗಿ ಕಿರುಕುಳ ನೀಡುತ್ತಿದೆ' ಎಂದು ಆರೋಪಿಸಿ ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ 'ಕೈ' ನಾಯಕರು ಮಂಗಳವಾರ ಮೌನ ಪ್ರತಿಭಟನೆ ನಡೆಸಿದರು.

ಜ್ವರದಿಂದ ಬಳಲುತ್ತಿದ್ದ ಸಿದ್ದರಾಮಯ್ಯ ಅವರು ಮಾಸ್ಕ್ ಧರಿಸಿಕೊಂಡು, ಕೈಗೆ ಡ್ರಿಪ್ಸ್ ಹಾಕಿಕೊಂಡೇ ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಡಿ.ಕೆ. ಶಿವಕುಮಾರ್, 'ಕೇಂದ್ರ ಸರ್ಕಾರ ಇಡಿ, ಸಿಬಿಐ, ಐಟಿ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡು, ವಿರೋಧ ಪಕ್ಷಗಳ ನಾಯಕರ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಿದೆ' ಎಂದು ಟೀಕಿಸಿದರು.

'ರಾಹುಲ್ ಗಾಂಧಿ ಅವರನ್ನು 50 ಗಂಟೆ ವಿಚಾರಣೆ ನಡೆಸಿದ್ದ ಇಡಿ ಅಧಿಕಾರಿಗಳು ಬಳಿಕ ಸೋನಿಯಾ ಗಾಂಧಿ ಅವರನ್ನು ಮೂರು ಗಂಟೆ ವಿಚಾರಣೆ ನಡೆಸಿದ್ದರೂ ಕಿರುಕುಳ ನೀಡುವುದನ್ನು ನಿಲ್ಲಿಸಿಲ್ಲ. ಐಟಿ ಇಲಾಖೆ ಅಧಿಕಾರಿಗಳು ಹಾಗೂ ಅಂದಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರೇ ಈ ಪ್ರಕರಣದಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಹೇಳಿದ್ದರು. ಏನೇ ಕಿರುಕುಳ ಕೊಟ್ಟರೂ, ಜೈಲಿಗೆ ಹಾಕಿದರೂ ನಾವು ಜಗ್ಗುವುದಿಲ್ಲ' ಎಂದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್, ಆರ್. ಧ್ರುವನಾರಾಯಣ್, ಶಾಸಕರಾದ ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಯು.ಟಿ. ಖಾದರ್, ಪ್ರಿಯಾಂಕ್ ಖರ್ಗೆ, ಪುಟ್ಟರಂಗಶೆಟ್ಟಿ, ಮುಖಂಡರಾದ ವೀರಪ್ಪ ಮೊಯಿಲಿ, ಎಐಸಿಸಿ ಕಾರ್ಯದರ್ಶಿಗಳಾದ ಮಯೂರ್ ಜೈಕುಮಾರ್, ಅಭಿಷೇಕ್ ದತ್ ಇದ್ದರು.


ಮೌನ ಪ್ರತಿಭಟನೆ ಸಂದರ್ಭದಲ್ಲಿ ಪಕ್ಷದ ಇತರ ನಾಯಕರಿಗೆ ಸಿದ್ದರಾಮಯ್ಯ ನಮಸ್ಕರಿಸಿದರು – ಪ್ರಜಾವಾಣಿ ಚಿತ್ರ

'ಮತ್ಯಾಕೆ ಬಂದ್ರೀ' ಭಾವನಾಗೆ ಪ್ರಶ್ನೆ

ಕಾಂಗ್ರೆಸ್ ಮುಖಂಡರು ಕುಳಿತಿದ್ದ ವೇದಿಕೆಯತ್ತ ತೆರಳಿದ ಚಿತ್ರನಟಿ ಭಾವನಾ ಅವರನ್ನು ಪಕ್ಷದ ಕಾರ್ಯಕರ್ತೆಯೊಬ್ಬರು, 'ನೀವು ಬಿಜೆಪಿಗೆ ಹೋಗಿದ್ದೀರಿ. ಮತ್ಯಾಕೆ ಇಲ್ಲಿಗೆ ಬಂದಿದ್ದೀರಿ' ಎಂದು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು. ಅಲ್ಲದೆ, 'ವೇದಿಕೆ ಬಿಟ್ಟು ಬದಿಗೆ ಬನ್ನಿ' ಎಂದೂ ಆ ಕಾರ್ಯಕರ್ತೆ ಅಡ್ಡಿಪಡಿಸಿದರು.

ಆಗ ತಬ್ಬಿಬ್ಬಾದ ಭಾವನಾ, 'ಬಿಜೆಪಿಗೆ ಹೋಗಿದ್ದು ನಿಜ. ಆದರೆ, ಮತ್ತೆ ಕಾಂಗ್ರೆಸ್ಸಿಗೆ ಮರಳಿದ್ದೇನೆ' ಎಂದರು. ಅದಕ್ಕೆ ಕಾರ್ಯಕರ್ತೆ, 'ಈ ಬಗ್ಗೆ ಮಾಧ್ಯಮದಲ್ಲೂ ಸುದ್ದಿ ನೋಡಿಯೇ ಇಲ್ಲ' ಎಂದರು. ವೇದಿಕೆಯಲ್ಲಿದ್ದ ನಾಯಕರು ಮಧ್ಯಪ್ರವೇಶಿಸಿ ಸಮಾಧಾನಪಡಿಸಿದರು. ಬಳಿಕ, ಕಾರ್ಯಕರ್ತರ ಜತೆ ನಿಂತ ಭಾವನಾ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಭಾವನಾ, 'ನಾನು ಕಾಂಗ್ರೆಸ್ಸಿನಿಂದ ಬಿಜೆಪಿಗೆ ಹೋಗಿದ್ದು ಆತುರದ ನಡೆ ಎಂದು ಅನಿಸಿತು. ಹೀಗಾಗಿ, ಮತ್ತೆ ಕಾಂಗ್ರೆಸ್‌ಗೆ ಮರಳಿದ್ದೇನೆ' ಎಂದರು.

ತೆಲಂಗಾಣ ವ್ಯಕ್ತಿಗೆ ಮಂಕಿಪಾಕ್ಸ್ ಇಲ್ಲ

ಹೈದರಾಬಾದ್/ನವದೆಹಲಿ (ಪಿಟಿಐ): ಕುವೈತ್‌ನಿಂದ ತೆಲಂಗಾಣಕ್ಕೆ ಬಂದಿದ್ದ ಯುವಕನಲ್ಲಿ ಮಂಕಿಪಾಕ್ಸ್ ಲಕ್ಷಣಗಳು ಕಾಣಿಸಿದ್ದರಿಂದ ಆತನ ರಕ್ತದ ಮಾದರಿ ಪರೀಕ್ಷೆಗೆ ಕಳುಹಿಸಲಾಗಿತ್ತು. ನೆಗೆಟಿವ್ ವರದಿ ಬಂದಿದೆ ಎಂದು ಸರ್ಕಾರಿ ಫೀವರ್ ಆಸ್ಪತ್ರೆಯ ವೈದ್ಯ ಡಾ.ಕೆ. ಶಂಕರ್ ಮಂಗಳವಾರ ತಿಳಿಸಿದ್ದಾರೆ.

ಸಂಪರ್ಕಿತ ವ್ಯಕ್ತಿಗೆ ದೇಹದಲ್ಲಿ ನೋವು: 'ಮಂಕಿಪಾಕ್ಸ್ ಸೋಂಕಿತ ದೆಹಲಿ ನಿವಾಸಿಯ ಸಂಪರ್ಕಕ್ಕೆ ಬಂದಿದ್ದ ಆತನ ಸ್ನೇಹಿತನ ದೇಹದಲ್ಲಿ ನೋವು ಕಾಣಿಸಿರುವ ಬಗ್ಗೆ ಮಾಹಿತಿ ಬಂದಿದ್ದು, ಇತರ ರೋಗ ಲಕ್ಷಣಗಳನ್ನು ಪರಿಶೀಲಿಸಲು ನಿಗಾವಹಿಸಲಾಗಿದೆ' ಎಂದು ಮೂಲಗಳು ಮಂಗಳವಾರ ತಿಳಿಸಿವೆ.

ಕಿಟ್ ಬಿಡುಗಡೆ: ಮಂಕಿಪಾಕ್ಸ್ ವೈರಸ್ ಸೋಂಕನ್ನು 50 ನಿಮಿಷಕ್ಕೂ ಕಡಿಮೆ ಸಮಯದಲ್ಲಿ ಪತ್ತೆಮಾಡುವ ಆರ್‌ಟಿ- ಪಿಸಿಆರ್ ಆಧರಿತ ಕಿಟ್ ಅನ್ನು ಜೀನ್ಸ್2ಮಿ ಪ್ರೈವೇಟ್ ಲಿಮಿಟೆಡ್ ಕಂಪನಿ ಬಿಡುಗಡೆ ಮಾಡಿದೆ.

ರಾಜ್ಯಸಭೆ: 19 ಸದಸ್ಯರ ಅಮಾನತು

ಒಂದನೇ ಪುಟದಿಂದ...

ಸಭಾಧ್ಯಕ್ಷರ ಪೀಠದಲ್ಲಿ ಆಸೀನರಾಗಿದ್ದ ಉಪ ಸಭಾಪತಿ ಹರಿವಂಶ ಅವರು ಕಲಾಪ ಸುಗಮವಾಗಿ ನಡೆಸಲು ಅವಕಾಶ ನೀಡುವಂತೆ ಮಾಡಿದ ಮನವಿಗೆ ಕಿವಿಗೊಡಲಿಲ್ಲ. ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್ ಅವರು 10 ಸಂಸದರನ್ನು ಅಮಾನತುಗೊಳಿಸುವ ನಿರ್ಣಯ ಮಂಡಿಸಿದರು. ಇದು ಧ್ವನಿ ಮತದಿಂದ ಅಂಗೀಕಾರವಾಯಿತು. ಉಪಸಭಾಪತಿ ಹರಿವಂಶ್ ಅವರು ಅಮಾನತುಗೊಳಿಸಲಾದ 19 ಸಂಸದರ ಹೆಸರು ಪ್ರಕಟಿಸಿ ಕಲಾಪದಿಂದ ಹೊರ ನಡೆಯಲು ಸೂಚಿಸಿದರು. ಆಗ ಈ ಸದಸ್ಯರು, ಸಭಾಪತಿ ಪೀಠದ ಎದುರು ಪ್ರತಿಭಟಿಸಿದರು. ಇದರಿಂದ ಕಲಾಪವನ್ನು ಎರಡು ಬಾರಿ ಮುಂದೂಡಲಾಯಿತು.

ರಾಜ್ಯಸಭೆಯಲ್ಲಿ ಒಂದೇ ಸಲಕ್ಕೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸಂಸದರನ್ನು ಅಮಾನತುಗೊಳಿಸಿರುವುದು ದಾಖಲೆ. ಕಳೆದ ವರ್ಷ ಮುಂಗಾರು ಅಧಿವೇಶನದಲ್ಲಿ ಪ್ರತಿಭಟಿಸಿದ ಕಾರಣಕ್ಕೆ 12 ಸಂಸದರನ್ನು ಅಮಾನತುಗೊಳಿಸಲಾಗಿತ್ತು. ಚಳಿಗಾಲದ ಅಧಿವೇಶನದ ಕೊನೆಯ ದಿನ ಟಿಎಂಸಿ ಸಂಸದ ಡೆರೆಕ್ ಒಬ್ರಿಯಾನ್ ಅವರನ್ನು ಅಮಾನತುಗೊಳಿಸಿದ್ದರಿಂದ ಅಮಾನತುಗೊಂಡ ಸಂಸದರ ಸಂಖ್ಯೆ 13ಕ್ಕೇರಿತ್ತು. 2020ರ ಮುಂಗಾರು ಅಧಿವೇಶನದಲ್ಲಿ ಕೃಷಿ ಕಾನೂನುಗಳನ್ನು ಅಂಗೀಕರಿಸುವಾಗ ದುರ್ವರ್ತನೆ ತೋರಿದ್ದಕ್ಕೆ ಏಳು ಸಂಸದರನ್ನು ಅಮಾನತುಗೊಳಿಸಲಾಗಿತ್ತು.

ಭಾರವಾದ ಹೃದಯದ ನಿರ್ಧಾರ: 19 ಸಂಸದರನ್ನು ಅಮಾನತುಗೊಳಿಸಿದ ನಿರ್ಧಾರವನ್ನು ಭಾರವಾದ ಹೃದಯದಿಂದ ತೆಗೆದುಕೊಳ್ಳಲಾಗಿದೆ ಎಂದು ಆಡಳಿತಾರೂಢ ಬಿಜೆಪಿ ಹೇಳಿದೆ.

ಸಭಾನಾಯಕ ಪೀಯೂಷ್ ಗೋಯಲ್ ಅವರು, 'ಸಂಸತ್‌ನಲ್ಲಿ ಚರ್ಚೆಯಿಂದ ದೂರ ಸರಿಯುತ್ತಿರುವುದು ವಿರೋಧ ಪಕ್ಷಗಳೇ ಹೊರತು, ಸರ್ಕಾರವಲ್ಲ' ಎಂದು ದೂರಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೋವಿಡ್-19ನಿಂದ ಸಂಪೂರ್ಣವಾಗಿ ಚೇತರಿಸಿಕೊಂಡು ಸಂಸತ್ತಿಗೆ ಮರಳಿದ ನಂತರ ಬೆಲೆ ಏರಿಕೆ ಕುರಿತು ಚರ್ಚಿಸಲು ಸರ್ಕಾರ ಸಿದ್ಧ ಎಂದು ಅವರು ಪುನರುಚ್ಚರಿಸಿದರು.

ಲೋಕಸಭೆ ಕಲಾಪದಿಂದ ಅಮಾನತುಗೊಂಡಿರುವ ಕಾಂಗ್ರೆಸ್‌ನ ನಾಲ್ವರು ಸಂಸದರು ವಿರೋಧ ಪಕ್ಷಗಳ ನಾಯಕರ ನೇತೃತ್ವದಲ್ಲಿ ಸಂಸತ್ ಆವರಣದಲ್ಲಿ ಮಹಾತ್ಮಾ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು.

ಸಂಕ್ಷಿಪ್ತ ಸುದ್ದಿ

ಮಳೆ: ಅಮರನಾಥ ಯಾತ್ರೆ ರದ್ದು

ಶ್ರೀನಗರ (ಪಿಟಿಐ): 'ಹವಾಮಾನ ವೈಪರೀತ್ಯದಿಂದಾಗಿ ಪಂಚತಾರಿಣಿ ಹಾಗೂ ಪವಿತ್ರ ಗುಹಾಲಯ ನಡುವಣದ ಅಮರನಾಥ ಯಾತ್ರೆಯನ್ನು ರದ್ದುಪಡಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪ ಪಟ್ಟಿಯಲ್ಲಿ ಫಾರೂಕ್ ಹೆಸರು

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ಕ್ರಿಕೆಟ್ ಸಂಸ್ಥೆಯಲ್ಲಿ (ಜೆಕೆಸಿಎ) ನಡೆದಿದೆ ಎನ್ನಲಾಗಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಮಂಗಳವಾರ ಹೊಸದಾಗಿ ಆರೋಪಪಟ್ಟಿ ಸಲ್ಲಿಸಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಹಾಗೂ ಇತರರ ಹೆಸರುಗಳನ್ನು ಅದರಲ್ಲಿ ಸೇರ್ಪಡೆ ಮಾಡಿದೆ.

'ಆಗಸ್ಟ್ 27ರಂದು ವಿಚಾರಣೆಗೆ ಹಾಜರಾಗುವಂತೆ ಎಲ್ಲರಿಗೂ ಸಮನ್ಸ್ ನೀಡಲಾಗಿದೆ' ಎಂದು ಇ.ಡಿ ತಿಳಿಸಿದೆ.

ಜಾಮೀನು ಅರ್ಜಿ ತಿರಸ್ಕೃತ

ಲಖನೌ (ಪಿಟಿಐ): ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದ ಆರೋಪಿ ಆಶಿಶ್ ಮಿಶ್ರಾ ಅವರ ಜಾಮೀನು ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ಅಯ್ಯಪ್ಪನ ಚಿನ್ನದ ಮಾಳಿಗೆಯಲ್ಲಿ ಸೋರಿಕೆ

ಶಬರಿಮಲೆ (ಕೇರಳ): ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾ ಸ್ಥಳ, ಕೇರಳದ ಶಬರಿಮಲೆಯ ಅಯ್ಯಪ್ಪ ದೇವಸ್ಥಾನದ ಗರ್ಭಗುಡಿಯ ಚಿನ್ನಲೇಪಿತ ಮಾಳಿಗೆ ಸೋರುತ್ತಿರುವುದು ಕಂಡು ಬಂದಿದೆ.

ದೇವಸ್ಥಾನದ ಉನ್ನತ ಸಮಿತಿಯಾದ 'ತಿರುವಾಂಕೂರು ದೇವಸ್ವಂ ಮಂಡಳಿ'ಗೆ ಈ ಲೋಪ ಗಮನಕ್ಕೆ ಬಂದಿದ್ದು ಶೀಘ್ರದಲ್ಲೇ ಅದನ್ನು ಸರಿ ಮಾಡುವುದಾಗಿ ತಿಳಿಸಿದೆ.

ದೇವಸ್ಥಾನದ ಗರ್ಭಗುಡಿಯ ಎಡಮೂಲೆಯಲ್ಲಿ ಚಿನ್ನಲೇಪಿತ ಮಾಳಿಗೆಯಲ್ಲಿ ನೀರು ಸೋರುತ್ತಿರುವುದು ಕಂಡು ಬಂದಿದೆ. ಆಗಸ್ಟ್ 3 ರಂದು ಬಾಗಿಲು ತೆಗೆದು ಪರೀಕ್ಷೆ ಮಾಡಿದರೆ ಸೋರುವ ಪ್ರಮಾಣ ಎಷ್ಟು ಎಂದು ಗೊತ್ತಾಗಲಿದೆ ಎಂದು ಮಂಡಳಿ ತಿಳಿಸಿದೆ.

ಕಾರ್ಗಿಲ್ ವಿಜಯೋತ್ಸವ: ಯುದ್ಧ ಸ್ಮಾರಕಕ್ಕೆ ಗಣ್ಯರ ನಮನ

ಉಧಂಪುರ/ಜಮ್ಮು (ಪಿಟಿಐ): ಪಾಕಿಸ್ತಾನ ವಿರುದ್ಧದ 1999ರ ಕಾರ್ಗಿಲ್ ಯುದ್ಧದ ವಿಜಯೋತ್ಸವ ಸ್ಮರಣಾರ್ಥ ಭಾರತೀಯ ಸೇನೆ ಮಂಗಳವಾರ 23ನೇ ಕಾರ್ಗಿಲ್ ವಿಜಯ ದಿವಸವನ್ನು ಆಚರಿಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಆಪರೇಷನ್ ವಿಜಯ' ಯಶಸ್ಸಿನ ಸಂಕೇತವಾಗಿ ಉಧಂಪುರದ ಉತ್ತರ ಕಮಾಂಡ್, ಜಮ್ಮುವಿನ ಟೈಗರ್ ಡಿವಿಷನ್ ಮತ್ತು ರಜೌರಿ, ಪೂಂಚ್ ಮತ್ತು ದೋಡಾದಲ್ಲಿ ಆಚರಣೆ ಮಾಡಲಾಯಿತು. ಉತ್ತರ ಕಮಾಂಡ್ ಮುಖ್ಯಕಚೇರಿಯಲ್ಲಿರುವ ಯುದ್ಧ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಸೇನಾ ಅಧಿಕಾರಿಗಳು, ಯೋಧರು ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಿದರು ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ.


ನವದೆಹಲಿಯಲ್ಲಿ ಮಂಗಳವಾರ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಯುದ್ಧ ಸ್ಮಾರಕಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸೇನಾ ಮುಖ್ಯಸ್ಥ ಮನೋಜ್ ಪಾಂಡೆ, ವಾಯು ಪಡೆ ಮುಖ್ಯಸ್ಥ ವಿ.ಆರ್. ಚೌಧರಿ, ನೌಕಾಪಡೆ ಮುಖ್ಯಸ್ಥ ಆರ್.ಹರಿಕುಮಾರ್ ಗೌರವ ಸಲ್ಲಿಸಿದರು – ಪಿಟಿಐ ಚಿತ್ರ

ದೆಹಲಿ ಪಾಲಿಕೆಯ 6 ಅಧಿಕಾರಿಗಳ ಅಮಾನತು

ನವದೆಹಲಿ (ಪಿಟಿಐ): ಅಧಿಕಾರ ದುರುಪಯೋಗ ಹಾಗೂ ಲಂಚ ಪಡೆದ ಆರೋಪಗಳನ್ನು ಎದುರಿಸುತ್ತಿದ್ದ ದೆಹಲಿ ನಗರಪಾಲಿಕೆಯ (ಎಂಸಿಡಿ) ಆರು ಜನ ಅಧಿಕಾರಿಗಳನ್ನು ಅಮಾನತುಗೊಳಿಸಿ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಆದೇಶಿಸಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಸೂಪರಿಂಟೆಂಡೆಂಟ್ ಎಂಜಿನಿಯರ್ ಎ.ಎಸ್.ಯಾದವ್, ಆಡಳಿತಾಧಿಕಾರಿ ಮನೀಶ್‌ಕುಮಾರ್, ಡೆಪ್ಯುಟಿ ಕಂಟ್ರೋಲರ್ ಆಫ್ ಅಕೌಂಟ್ಸ್ ಅಂಜು ಭೂತಾನಿ, ಇನ್ಸ್‌ಪೆಕ್ಟರ್ (ದಕ್ಷಿಣ ವಲಯ) ವಿಜಯಕುಮಾರ್, ಕಿರಿಯ ಎಂಜಿನಿಯರ್ ಸಾಂಖ್ಯ ಮಿಶ್ರಾ ಹಾಗೂ ಸಹಾಯಕ ಎಂಜಿನಿಯರ್ ಶ್ರೀನಿವಾಸ ಅಮಾನತುಗೊಂಡವರು.

ಕರೋಲ್ ಬಾಗ್‌ನಲ್ಲಿನ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಿದ ಆರೋಪ ಎದುರಿಸುತ್ತಿದ್ದ, ಆಸಿಫ್ ಅಲಿ ರಸ್ತೆ ಶಾಖೆಯ ಸಬ್ ರಜಿಸ್ಟ್ರಾರ್-3 ರಾಜ್ ಪಾಲ್ ವಿರುದ್ಧ ಸಿಬಿಐ ತನಿಖೆ ನಡೆಸಲು ಸಕ್ಸೇನಾ ಅವರು ಅನುಮತಿಯನ್ನು ನೀಡಿದ್ದಾರೆ ಎಂದೂ ಹೇಳಿದ್ದಾರೆ.

ರಣವೀರ್ ಸಿಂಗ್ ವಿರುದ್ಧ ಎಫ್‌ಐಆರ್

ಮುಂಬೈ: ಸಾಮಾಜಿಕ ಮಾಧ್ಯಮದಲ್ಲಿ ತಮ್ಮದೇ ನಗ್ನ ಚಿತ್ರಗಳನ್ನು ಪ್ರಕಟಿಸಿದ್ದಕ್ಕಾಗಿ ಬಾಲಿವುಡ್ ನಟ ರಣವೀರ್ ಸಿಂಗ್ ವಿರುದ್ಧ ಮುಂಬೈ ಪೊಲೀಸರು ಮಂಗಳವಾರ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೂರ್ವ ಮುಂಬೈ ಉಪನಗರ ಮೂಲದ ಎನ್‌ಜಿಒ ಕಾರ್ಯಕರ್ತರೊಬ್ಬರು ರಣವೀರ್ ವಿರುದ್ಧ ಸೋಮವಾರ ಮುಂಬೈಯ ಚೆಂಬೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ತೀಸ್ತಾ ಜಾಮೀನು: ಆದೇಶ ನಾಳೆ

ಅಹಮದಾಬಾದ್: ಗುಜರಾತ್ ಗಲಭೆ ಪ್ರಕರಣಗಳಲ್ಲಿ ನಿರಪರಾಧಿಗಳನ್ನು ಸಿಲುಕಿಸಲು ಹುಸಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂಬ ಪ್ರಕರಣದಲ್ಲಿ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಮತ್ತು ಮಾಜಿ ಡಿಜಿಪಿ ಆರ್.ಬಿ.ಶ್ರೀಕುಮಾರ್ ಅವರ ಜಾಮೀನು ಅರ್ಜಿ ಕುರಿತ ಆದೇಶವನ್ನು ಇಲ್ಲಿನ ನ್ಯಾಯಾಲಯವೊಂದು ಜುಲೈ 28ಕ್ಕೆ ಮುಂದೂಡಿದೆ.

ವಿಮಾನ ನಿಲ್ದಾಣದಲ್ಲಿ ಬಿಷಪ್ ಬಂಧನ

ತಿರುವನಂತಪುರ: ಚರ್ಚ್ ಆಫ್ ಸೌತ್ ಇಂಡಿಯಾದ (ಸಿಎಸ್‌ಐ) ದಕ್ಷಿಣ ಕೇರಳ ಧರ್ಮಪ್ರಾಂತ್ಯದ ಬಿಷಪ್ ಧರ್ಮರಾಜ್ ರಸಾಲಂ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ತಿರುವನಂತಪುರದಲ್ಲಿ ಚರ್ಚ್‌ನ ಅಧೀನದಲ್ಲಿರುವ ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕಾಗಿ ಕ್ಯಾಪಿಟೇಷನ್ ಶುಲ್ಕ ಸಂಗ್ರಹಿಸಿ ಹಣಕಾಸಿನ ದುರ್ಬಳಕೆ ಮಾಡಿರುವ ಆರೋಪ ಅವರ ಮೇಲಿತ್ತು.


'₹28,732 ಕೋಟಿಯ ಶಸ್ತ್ರಾಸ್ತ್ರ ಖರೀದಿ'

ನವದೆಹಲಿ (ಪಿಟಿಐ): ₹28,732 ಕೋಟಿ ಮೊತ್ತದ ಡ್ರೋನ್‌ಗಳು, ಬುಲೆಟ್‌ಪ್ರೂಫ್ ಜಾಕೆಟ್‌ಗಳು ಸೇರಿ ಸೇನಾ ಉಪಕರಣಗಳು ಹಾಗೂ ಶಸ್ತ್ರಾಸ್ತ್ರಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯ ಒಪ್ಪಿಗೆ ನೀಡಿದೆ.

ಬಂಧನ

ಶಿಲ್ಲಾಂಗ್ (ಪಿಟಿಐ): ವೆಸ್ಟ್ ಗಾರೋ ಹಿಲ್ಸ್ ಜಿಲ್ಲೆಯ ತುರಾದ ತಮ್ಮ ತೋಟದ ಮನೆಯಲ್ಲಿ, ಲೈಂಗಿಕ ದಂಧೆ ನಡೆಸುತ್ತಿದ್ದ ಆರೋಪ ಹೊತ್ತಿರುವ ಮೇಘಾಲಯದ ಬಿಜೆಪಿ ಉಪಾಧ್ಯಕ್ಷ ಬರ್ನಾಡ್ ಎನ್. ಮರಾಕ್ ಅವರನ್ನು ಬಂಧಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,631
ಇಂದಿನ ಅಂತ್ಯ	16483
▼	147
ದಿನದ ಕನಿಷ್ಠ	16636

ವಿನಿಮಯ ದರ

$ ಡಾಲರ್	79.78
£ ಪೌಂಡ್	95.48
€ ಯುರೊ	81.7
¥ ಯನ್ (100ಕ್ಕೆ)	58.43

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹425

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1630 (1630)
ಸೋಯಾ (ರಿಫೈಂಡ್)	₹1230 (1220)
ಸೂರ್ಯಕಾಂತಿ (ರಿಫೈಂಡ್)	₹1570 (1560)
ಪಾಮೋಲಿನ್	₹1205 (1185)

ಜಿಯೊ, ಏರ್‌ಟೆಲ್, ವೊಡಾಫೋನ್ ಐಡಿಯಾ, ಅದಾನಿ ಕಂಪನಿಗಳು ಭಾಗಿ

5ಜಿ ಹರಾಜು: ₹ 1.45 ಲಕ್ಷ ಕೋಟಿ ಬಿಡ್



ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ತರಂಗಾಂತರ ಹರಾಜು ಪ್ರಕ್ರಿಯೆಯ ಮೊದಲ ದಿನವಾದ ಮಂಗಳವಾರ ಒಟ್ಟು ₹ 1.45 ಲಕ್ಷ ಕೋಟಿ ಮೌಲ್ಯದ 5ಜಿ ತರಂಗಾಂತರಗಳಿಗೆ ಬಿಡ್‌ಗಳು ಸಲ್ಲಿಕೆಯಾಗಿವೆ.

ಮುಕೇಶ್ ಅಂಬಾನಿ ಮಾಲೀಕತ್ವದ ರಿಲಯನ್ಸ್ ಜಿಯೊ, ಸುನಿಲ್ ಭಾರ್ತಿ ಮಿತ್ತಲ್ ಮಾಲೀಕತ್ವದ ಭಾರ್ತಿ ಏರ್‌ಟೆಲ್, ವೊಡಾಫೋನ್ ಐಡಿಯಾ ಮತ್ತು ಗೌತಮ್ ಅದಾನಿ ಮಾಲೀಕತ್ವದ ಅದಾನಿ ಸಮೂಹದ ಒಂದು ಕಂಪನಿ 5ಜಿ ತರಂಗಾಂತರ ಹರಾಜು ಪ್ರಕ್ರಿಯೆಯಲ್ಲಿ 'ಸಕ್ರಿಯವಾಗಿ' ಪಾಲ್ಗೊಂಡಿವೆ.

5ಜಿ ಸೇವೆಗಳು ದೇಶದಲ್ಲಿ ಆರಂಭಗೊಂಡ ನಂತರದಲ್ಲಿ 4ಜಿ ಸೇವೆಗಳಲ್ಲಿ ಲಭ್ಯವಾಗುವುದಕ್ಕಿಂತ ಹತ್ತು ಪಟ್ಟು ಹೆಚ್ಚು ವೇಗದ ಇಂಟರ್ನೆಟ್ ಸಂಪರ್ಕ ಗ್ರಾಹಕರಿಗೆ ಲಭ್ಯವಾಗಲಿದೆ. ಅಲ್ಲದೆ, ಇಂಟರ್ನೆಟ್ ಜೊತೆ ಸಂಪರ್ಕಗೊಂಡಿರುವ ಎಲ್ಲ ಉಪಕರಣಗಳ ನಡುವೆ ದತ್ತಾಂಶ ಹಂಚಿಕೆ ಪ್ರಕ್ರಿಯೆಯು ಅತ್ಯಂತ ವೇಗವಾಗಿ ಆಗುತ್ತದೆ.

ಮಂಗಳವಾರದ ಹರಾಜಿನಲ್ಲಿ ಒಟ್ಟು ₹ 1.45 ಲಕ್ಷ ಕೋಟಿ ಮೌಲ್ಯದ ಬಿಡ್ ಸಲ್ಲಿಕೆಯಾಗಿದ್ದು, ಇದು ನಿರೀಕ್ಷೆಗಿಂತಲೂ ಹೆಚ್ಚು. 2015ರ ದಾಖಲೆಯನ್ನು ಇದು ಮುರಿದಿದೆ ಎಂದು ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಯಾವ ಕಂಪನಿಯು ಎಷ್ಟು ತರಂಗಾಂತರಗಳನ್ನು ಗೆದ್ದುಕೊಂಡಿದೆ ಎಂಬುದು ಪ್ರಕ್ರಿಯೆ ಪೂರ್ಣವಾಗುವವರೆಗೆ ಗೊತ್ತಾಗುವುದಿಲ್ಲ. ಮಂಗಳವಾರ ಒಟ್ಟು ನಾಲ್ಕು ಸುತ್ತು ಬಿಡ್ಡಿಂಗ್ ನಡೆಯಿತು. ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಕಂಪನಿಗಳ ಪಾಲ್ಗೊಳ್ಳುವಿಕೆ ಆರೋಗ್ಯಕರವಾಗಿತ್ತು, ಕಂಪನಿಗಳ ಪಾಲ್ಗೊಳ್ಳುವಿಕೆ ಗಮನಿಸಿದರೆ ಉದ್ಯಮವು ಸಂಕಷ್ಟದ ಪರಿಸ್ಥಿತಿಯಿಂದ ಹೊರಬಂದಿದೆ ಎನ್ನಿಸುತ್ತಿದೆ ಎಂದು ಸಚಿವರು ಹೇಳಿದ್ದಾರೆ. 5ಜಿ ತರಂಗಾಂತರಗಳನ್ನು ಆಗಸ್ಟ್ 14ಕ್ಕೆ ಮೊದಲು ಹಂಚಿಕೆ ಮಾಡಲಾಗುತ್ತದೆ. 5ಜಿ ಸೇವೆಗಳು ಸೆಪ್ಟೆಂಬರ್ ವೇಳೆಗೆ ಶುರುವಾಗುವ ನಿರೀಕ್ಷೆ ಇದೆ ಎಂದೂ ಅವರು ತಿಳಿಸಿದ್ದಾರೆ.

5ಜಿ ಸೇವೆಗಳು ಶುರುವಾದ ನಂತರದಲ್ಲಿ ಅತ್ಯುತ್ತಮ ದೃಶ್ಯ ಗುಣಮಟ್ಟದ ವಿಡಿಯೊಗಳನ್ನು ಅಥವಾ ಸಿನಿಮಾಗಳನ್ನು ಕೆಲವೇ ಸೆಕೆಂಡ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಇ–ಆರೋಗ್ಯ ಸೇವೆಗಳನ್ನು ಒದಗಿಸುವುದನ್ನು ಇದು ಸಾಧ್ಯವಾಗಿಸಲಿದೆ. ಹರಾಜು ಪ್ರಕ್ರಿಯೆಯು ಬುಧವಾರವೂ ಮುಂದುವರಿಯಲಿದೆ.

ಮುಖ್ಯಾಂಶಗಳು
- ಆಗಸ್ಟ್ 14ರೊಳಗೆ ತರಂಗಾಂತರ ಹಂಚಿಕೆ
- ಸೆಪ್ಟೆಂಬರ್ ವೇಳೆಗೆ 5ಜಿ ಸೇವೆ ನಿರೀಕ್ಷೆ
- ಬುಧವಾರವೂ ಮುಂದುವರಿಯಲಿದೆ ಹರಾಜು

ಐ.ಟಿ., ಎಫ್‌ಎಂಸಿಜಿ, ಬ್ಯಾಂಕಿಂಗ್ ಷೇರು ಮೌಲ್ಯ ಇಳಿಕೆ



ಮುಂಬೈ (ಪಿಟಿಐ): ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಹೆಚ್ಚಿಸಬಹುದು ಎಂಬ ನಿರೀಕ್ಷೆಯಲ್ಲಿ ಹೂಡಿಕೆದಾರರು ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್ ಮತ್ತು ಎಫ್‌ಎಂಸಿಜಿ ವಲಯದ ಷೇರುಗಳನ್ನು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದರು. ಇದರ ಪರಿಣಾಮವಾಗಿ ದೇಶದ ಷೇರುಪೇಟೆ ಸಂವೇದಿ ಸೂಚ್ಯಂಕಗಳು ಮಂಗಳವಾರ ಸರಿಸುಮಾರು ಶೇಕಡ 1ರ ವರೆಗೆ ಇಳಿಕೆ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 497 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 147 ಅಂಶ ಇಳಿಕೆ ಕಂಡವು. ಇನ್ಫೊಸಿಸ್ ಷೇರುಗಳು ಶೇ 3.4ರವರೆಗೂ ಕುಸಿದವು. ವಿಪ್ರೊ, ಎಚ್‌ಸಿಎಲ್, ಟೆಕ್ ಮಹೀಂದ್ರ ಮತ್ತು ಟಿಸಿಎಸ್ ಷೇರುಗಳು ಕೂಡ ಕುಸಿದಿವೆ.

ಫೆಡರಲ್ ರಿಸರ್ವ್‌ನ ಸಭೆ ಮಂಗಳವಾರದಿಂದಾಗಿ ಶುರುವಾಗಲಿದೆ. ಅದು ಬಡ್ಡಿ ದರವನ್ನು 75 ಮೂಲಾಂಶಗಳಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ಪಶ್ಚಿಮದ ದೇಶಗಳಲ್ಲಿ ಆರ್ಥಿಕ ಹಿಂಜರಿತದ ಭೀತಿ ಇದೆ. ಇವು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಪಾಶ್ಚಿಮಾತ್ಯ ದೇಶಗಳ ಮಾರುಕಟ್ಟೆಗಳಲ್ಲಿ ಆಗುವ ವಿದ್ಯಮಾನಗಳ ಪರಿಣಾಮದಿಂದ ತಪ್ಪಿಸಿಕೊಳ್ಳಲು ದೇಶಿ ಮಾರುಕಟ್ಟೆಗಳಿಗೆ ಆಗದು ಎಂದೂ ಅವರು ಹೇಳಿದ್ದಾರೆ.

ಫೆಡರಲ್ ರಿಸರ್ವ್ ಹಾಗೂ ವಿಶ್ವದ ಇತರ ಪ್ರಮುಖ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ತೀವ್ರವಾಗಿ ಹೆಚ್ಚಿಸಿದರೆ ಜಾಗತಿಕ ಆರ್ಥಿಕ ಬೆಳವಣಿಗೆಗೆ ಏಟು ಬೀಳಬಹುದು ಎಂಬ ಆತಂಕ ಹೂಡಿಕೆದಾರರಲ್ಲಿ ಇದೆ ಎಂದು ವಿಶ್ಲೇಷಕರು ಹೇಳಿದ್ದಾರೆ. ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 1.21ರಷ್ಟು, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 1.20ರಷ್ಟು ಇಳಿಕೆ ಕಂಡಿವೆ.

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹800-1000
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಕೊಬ್ಬರಿ ಧಾರಣೆ



ತುರುವೇಕೆರೆ ₹14600-15100

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	475
ಅಡಿಕೆ - ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಭದ್ರಾವತಿ	
ರಾಶಿ	48799-49899
ಚನ್ನಗಿರಿ	
ರಾಶಿ	48599-49929
ಚಿತ್ರದುರ್ಗ	
ಆಪಿ	49419-49829
ಬೆಟ್ಟೆ	39359-39799
ಕೆಂಪುಗೋಟು	29409-29810
ರಾಶಿ	48939-49389
ಹೊಳಲ್ಕೆರೆ	
ರಾಶಿ	49799-49799
ಕಾರ್ಕಳ	
ಹೊಸತು	40000-45000
ಹಳತು	46000-56000
ಪುತ್ತೂರು	
ಕೋಕ	11000-26000
ಹೊಸತು	32000-45000
ಸಾಗರ	
ಬಿಳಿಗೋಟು	19900-32599
ಚಾಲಿ	35809-37599
ಕೋಕ	25899-34249
ಕೆಂಪುಗೋಟು	33599-35899
ರಾಶಿ	40681-49569
ಸಿಪ್ಪೆಗೋಟು	14500-21599
ಶಿವಮೊಗ್ಗ	
ಬೆಟ್ಟೆ	50099-54199
ರಾಶಿ	44999-50299
ಸರಕು	57619-79640
ಸಿದ್ದಾಪುರ	
ಬಿಳಿಗೋಟು	25299-33333
ಚಾಲಿ	36599-40599
ಕೋಕ	27799-33800
ಕೆಂಪುಗೋಟು	32600-35669
ರಾಶಿ	47199-48939
ತಟ್ಟಿಬೆಟ್ಟೆ	37799-47699
ಶಿರಸಿ	
ಬೆಟ್ಟೆ	34723-45519
ಬಿಳಿಗೋಟು	23199-34600
ಚಾಲಿ	37698-40608
ರಾಶಿ	45199-49199
ತುಮಕೂರು	
ರಾಶಿ	48800-49800
ಯಲ್ಲಾಪುರ	
ಬಿಳಿಗೋಟು	28009-33811
ಚಾಲಿ	34312-41109
ಕೋಕ	18899-30212
ಕೆಂಪುಗೋಟು	31199-34205
ರಾಶಿ	47310-54719
ತಟ್ಟಿಬೆಟ್ಟೆ	38969-45819
ರೇಷ್ಮೆಗೂಡು ಮಾರುಕಟ್ಟೆ	
ರಾಮನಗರ	
ಮಿಶ್ರ ತಳಿ:	₹310–₹642
ದ್ವಿತಳಿ:	₹202–755
ರಬ್ಬರ್ ಧಾರಣೆ	
ನರಸಿಂಹರಾಜಪುರ	
ಆರ್‌ಎಸ್‌ಎಸ್ 4	₹169.50
ಆರ್ ಎಸ್‌ಎಸ್ 5	₹160.50
ಗುಡ್ ಲಾಟ್	₹ 154.50

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15300	15750	210.05 ಸೆಂಟ್ಸ್
ಎಸಿ	8680	8300	8550	
ಆರ್‌ಪಿ	9500	9500	9650	ಲಂಡನ್
ಆರ್‌ಸಿ	4700	4500	4475	1973 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

26-7-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಸೋಯಾ ಕಚ್ಚಾ	1175 (1160)
ಪಾಮ್ ವಾರದ ಡೆಲಿವರಿ	1203(1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,550 (50,600)
ಬೆಳ್ಳಿ ಕೆ.ಜಿ 54,200 (54,600)


ಆವರಣದಲ್ಲಿ ಹಿಂದಿನ ದಿನದ ಧಾರಣೆ

ಆಗಸ್ಟ್ 1ಕ್ಕೆ ಉದ್ಧವ್ ಬಣದ ಅರ್ಜಿ ವಿಚಾರಣೆ: 'ಸುಪ್ರೀಂ'

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣವನ್ನು ನೈಜ ಶಿವಸೇನಾ ಎಂದು ಗುರುತಿಸುವ ಭಾರತೀಯ ಚುನಾವಣಾ ಆಯೋಗದ ಪ್ರಕ್ರಿಯೆಗೆ ತಡೆಯೊಡ್ಡಬೇಕೆಂದು ಕೋರಿ ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಬಣ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಆಗಸ್ಟ್ 1ಕ್ಕೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಅರ್ಜಿಯ ವಿಚಾರಣೆಯನ್ನು ಶೀಘ್ರವೇ ನಡೆಸಬೇಕೆಂದು ಉದ್ಧವ್ ಬಣದ ಪರ ವಕೀಲ ಕಪಿಲ್ ಸಿಬಲ್ ಅವರು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ಪೀಠಕ್ಕೆ ಮನವಿ ಮಾಡಿದರು. ಅವರ ಮನವಿ ಪುರಸ್ಕರಿಸಿದ ಪೀಠವು ಉದ್ಧವ್ ಬಣದ ಅರ್ಜಿ ಹಾಗೂ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಮತ್ತೊಂದು ಅರ್ಜಿಯ ವಿಚಾರಣೆಯನ್ನು ಆಗಸ್ಟ್ 1ರಂದು ನಡೆಸಲು ಒಪ್ಪಿತು.

ಕೋವಿಡ್: ದೃಢ ಪ್ರಮಾಣ ಶೇ12ರಷ್ಟು ಇಳಿಕೆ



ನವದೆಹಲಿ: ದೇಶದಲ್ಲಿ ಕೋವಿಡ್ ದೃಢ ಪ್ರಮಾಣದಲ್ಲಿ ಇಳಿಕೆ ಕಂಡಿದೆ. 24 ಗಂಟೆಗಳಲ್ಲಿ 14,830 ಪ್ರಕರಣಗಳು ವರದಿಯಾಗಿವೆ ಎಂದು ಕೇಂದ್ರ ತಿಳಿಸಿದೆ. ಸೋಮವಾರ 16,866 ಕೋವಿಡ್ ಪ್ರಕರಣಗಳು ವರದಿಯಾಗಿದ್ದವು. ಇಂದು ಶೇ 12ರಷ್ಟು ಇಳಿಕೆ ಕಂಡುಬಂದಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆಯೂ 1,47,512ಕ್ಕೆ ಇಳಿಕೆಯಾಗಿದೆ.

ಇದೇ ಅವಧಿಯಲ್ಲಿ 36 ಮಂದಿ ಸೋಂಕಿತರು ಮೃತಪಟ್ಟಿದ್ದು, ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 5,26,110ಕ್ಕೆ ಏರಿದೆ.

ದೈನಂದಿನ ಕೋವಿಡ್ ದೃಢ ಪ್ರಮಾಣ ಶೇಕಡ 0.34 ರಷ್ಟಿದ್ದು, ರಾಷ್ಟ್ರೀಯ ಕೋವಿಡ್ ಚೇತರಿಕೆ ದರ ಶೇಕಡ 98.47 ರಷ್ಟಿದೆ.

ಗುಜರಾತ್:ಕಳ್ಳಬಟ್ಟಿ ಸೇವನೆ: 30 ಸಾವು

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಬೋಟಾದ್ ಜಿಲ್ಲೆಯಲ್ಲಿ ಕಳ್ಳಬಟ್ಟಿ ಸೇವಿಸಿ ಮೃತಪಟ್ಟವರ ಸಂಖ್ಯೆ 30ಕ್ಕೆ ಏರಿಕೆಯಾಗಿದೆ.

ನೀರಿನೊಂದಿಗೆ ವಿಷಕಾರಿ ಮಿಥೆನಾಲ್ ಮಿಶ್ರಣ ಮಾಡಿ ಕಳ್ಳಬಟ್ಟಿ ತಯಾರಿಸುತ್ತಿದ್ದರು. ಇದನ್ನು ಒಂದು ಪೌಚ್‌ಗೆ ₹20 ರಂತೆ ಮಾರಾಟ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಲ್ಲಿಕಾರ್ಜುನಯ್ಯ, ಗಿರಿನಗರ, ಬೆಂಗಳೂರು

- **ಪ್ರಶ್ನೆ:** ಬಹಳಷ್ಟು ಸರ್ಕಾರಿ ಕಂಪನಿಗಳು ಮತ್ತು ಖಾಸಗಿ ಕಂಪನಿಗಳು ಬಾಂಡ್ (ಸಾಲಪತ್ರ) ವಿತರಿಸುತ್ತವೆ. ಇವುಗಳಲ್ಲಿ ಹೂಡಿಕೆ ಭದ್ರವೇ? ಇವುಗಳಲ್ಲಿ ನಾವು ಹಣ ತೊಡಗಿಸುವ ಮುನ್ನ ಏನೇನು ಗಮನಿಸಬೇಕು?

ಉತ್ತರ: ಯಾವುದೇ ಕಂಪನಿ ತನ್ನ ಹಣಕಾಸು ಅಗತ್ಯಗಳಿಗಾಗಿ ಬಾಂಡ್ ವಿತರಿಸಿ ಸಾರ್ವಜನಿಕರಿಂದ ಅಥವಾ ಇತರ ಸಂಸ್ಥೆಗಳಿಂದ ಹಣ ಸಂಗ್ರಹಿಸುತ್ತದೆ. ವ್ಯಾಪಾರ ವಹಿವಾಟಿಗೆ ಬ್ಯಾಂಕ್‌ನಿಂದ ಸಾಲ ಪಡೆಯುವಾಗ ಸಾಮಾನ್ಯವಾಗಿ ಸುಮಾರು ಶೇಕಡ 12ರಿಂದ ಶೇ 14ರತನಕ ಬಡ್ಡಿ ವಿಧಿಸಲಾಗುತ್ತದೆ. ಹೀಗಾಗಿ ಉತ್ತಮ ವ್ಯಾಪಾರ ವಹಿವಾಟು ಹಾಗೂ ಮರುಪಾವತಿ ಸಾಮರ್ಥ್ಯವುಳ್ಳ ಕಂಪನಿಗಳು ಹಣಕಾಸಿನ ಅಗತ್ಯ ಇರುವಾಗ ಅಧಿಕ ಬಡ್ಡಿಯ ಬ್ಯಾಂಕ್ ಸಾಲಗಳ ಮೊರೆ ಹೋಗದೆ ಸಾರ್ವಜನಿಕರಿಗೆ ನೇರವಾಗಿ ಸಾಲಪತ್ರಗಳನ್ನು ವಿತರಿಸಿ ಹಣ ಸಂಗ್ರಹಿಸುತ್ತವೆ. ಇದಕ್ಕೆ ಪ್ರತಿಯಾಗಿ ಹೂಡಿಕೆದಾರರಿಗೆ ಶೇ 8ರಿಂದ ಶೇ 10ರತನಕ ಬಡ್ಡಿ ನೀಡುತ್ತವೆ. ಸಾರ್ವಜನಿಕ ಹೂಡಿಕೆದಾರರಿಗೆ ನಿಶ್ಚಿತ ಠೇವಣಿಯ ಮೇಲೆ ಬ್ಯಾಂಕ್‌ಗಳು ನೀಡುವ ಗರಿಷ್ಠ ಬಡ್ಡಿದರಕ್ಕಿಂತ ಬಾಂಡ್ ಬಡ್ಡಿ ದರ ಶೇ 2ರಿಂದ ಶೇ 3ರಷ್ಟು ಹೆಚ್ಚು ಇರುತ್ತದೆ. ಸಾಲಪತ್ರ ವಿತರಿಸುವ ಕಂಪನಿಗಳು ಅಧಿಕ ಬಡ್ಡಿಯ ಬ್ಯಾಂಕ್ ಸಾಲದ ಮೊರೆ ಹೋಗಬೇಕಾಗಿಲ್ಲ, ಹೂಡಿಕೆದಾರರು ಬ್ಯಾಂಕ್‌ಗಳು ಠೇವಣಿಗಳ ಮೇಲೆ ನೀಡುವ ಕಡಿಮೆ ಬಡ್ಡಿಗೆ ತೃಪ್ತಿಪಟ್ಟುಕೊಳ್ಳಬೇಕಿಲ್ಲ. ಇಂತಹ ವ್ಯವಸ್ಥೆಯನ್ನು ಬಾಂಡ್ ಮಾರುಕಟ್ಟೆ ಕಲ್ಪಿಸಿಕೊಡುತ್ತದೆ. ಇದು ಕಂಪನಿ ಹಾಗೂ ಹೂಡಿಕೆದಾರರ ನಡುವಿನ ನೇರ ವ್ಯವಹಾರ.

ಬಾಂಡ್ ಭದ್ರತೆ ಹಾಗೂ ಸುರಕ್ಷತೆಯ ವಿಚಾರ: ಹೂಡಿಕೆದಾರರಿಗೆ ಅನುಕೂಲ ಮಾಡಿಕೊಡಲು ಹಾಗೂ ಸುಲಭವಾಗಿ ನಿರ್ಧಾರ ಕೈಗೊಳ್ಳುವಂತೆ ಆಗಲು, ಸಾಲಪತ್ರ ವಿತರಿಸುವ ಕಂಪನಿಗಳು ಕೆಲವು ಅಂಶಗಳನ್ನು ಅಗತ್ಯವಾಗಿ ಪ್ರಕಟಿಸಬೇಕು. AAA ರೇಟಿಂಗ್ ಎನ್ನುವುದು ಯಾವುದೇ ಪ್ರಮುಖ ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳು ಬಾಂಡ್‌ಗಳಿಗೆ ಕೊಡುವ ಅತ್ಯಧಿಕ ರೇಟಿಂಗ್. ನಂತರದ ಸ್ಥಾನದಲ್ಲಿ AA ಹಾಗೂ A ರೇಟಿಂಗ್ ಇರುತ್ತವೆ. A ರೇಟಿಂಗ್ ಇರುವ ಯಾವುದೇ ಬಾಂಡ್‌ಅನ್ನು ಉತ್ತಮ ಆರ್ಥಿಕ ಕ್ಷಮತೆ ಹೊಂದಿರುವ ಬಾಂಡ್ ಎಂದು ಪರಿಗಣಿಸಲಾಗುತ್ತದೆ. ಅಂದರೆ ಸಾಲಪತ್ರ ನೀಡುವ ಕಂಪನಿ ಅದರ ಹೂಡಿಕೆದಾರರಿಗೆ ಹಣಕಾಸಿನ ಜವಾಬ್ದಾರಿಗಳನ್ನು ಪೂರೈಸುವ ಬಲವಾದ ಸಾಧ್ಯತೆಯನ್ನು ಹೊಂದಿದೆ ಎಂದು ಅರ್ಥ. ಅದೇ ರೀತಿ B ರೇಟಿಂಗ್ ಇರುವ ಬಾಂಡ್‌ಗಳು ಮಧ್ಯಮ ಗುಣಮಟ್ಟದ ಆರ್ಥಿಕ ಕ್ಷಮತೆ ಹೊಂದಿರುತ್ತವೆ. C ರೇಟಿಂಗ್ ಅತಿ ಹೆಚ್ಚಿನ ಆರ್ಥಿಕ ಅಪಾಯ ಹೊಂದಿದ್ದು, D ರೇಟಿಂಗ್ ಇರುವ ಬಾಂಡ್‌ಗಳು ಹಣದ ಮರುಪಾವತಿಯಲ್ಲಿ ಈಗಾಗಲೇ ತೊಂದರೆಗೆ ಒಳಗಾಗಿವೆ ಎಂದು ಅರ್ಥ. ಹೀಗಾಗಿ ಯಾವುದೇ ಬಾಂಡ್ ಖರೀದಿಸುವ ಮುನ್ನ ಮೇಲಿನ ಅಂಶಗಳನ್ನು ಪರಿಗಣಿಸಿ ನಿರ್ಧಾರ ಕೈಗೊಳ್ಳುವುದು ಒಳಿತು.

ಚಂದ್ರಶೇಖರ್ ಕೆ.ಎನ್., ಬೆಂಗಳೂರು

- **ಪ್ರಶ್ನೆ:** ನಾನು ಕೇಂದ್ರ ಸರ್ಕಾರದ ನಿವೃತ್ತ ಉದ್ಯೋಗಿ. ವಯಸ್ಸು 66 ವರ್ಷ. ವಾರ್ಷಿಕ ₹ 4,15,436 ನಿವೃತ್ತಿ ವೇತನ ಪಡೆಯುತ್ತಿದ್ದೇನೆ. ಇದರೊಡನೆ ₹ 2,91,375 ಬಡ್ಡಿ ಆದಾಯವಿದೆ. ನಾನು ಆರೋಗ್ಯ ವಿಮಾ ಯೋಜನೆಗೆ ಸಂಬಂಧಿಸಿದಂತೆ ₹ 50,000 ಕಟ್ಟಿರುತ್ತೇನೆ. ಹಿರಿಯ ನಾಗರೀಕನಾದ ನನಗೆ ಬರಬಹುದಾದ ತೆರಿಗೆ ಎಷ್ಟೆಂದು ತಿಳಿಸಬಹುದೇ?

ಉತ್ತರ: ನಿಮ್ಮ ವಯಸ್ಸು 60 ವರ್ಷ ಮೀರಿರುವುದರಿಂದ, ಹಿರಿಯ ನಾಗರೀಕರಾಗಿರುತ್ತೀರಿ. ಹೀಗಾಗಿ ನಿಮ್ಮ ಒಟ್ಟು ಆದಾಯದಲ್ಲಿ ಮೊದಲ ₹ 3 ಲಕ್ಷದ ಆದಾಯಕ್ಕೆ ತೆರಿಗೆ ವಿನಾಯಿತಿ ಇದೆ. ನಿಮಗೆ ₹ 50,000ದ ಮೂಲ ಆದಾಯ ಕಡಿತ ಇದೆ. ನೀವು ಪಾವತಿಸುವ ಆರೋಗ್ಯ ವಿಮಾ ಯೋಜನೆಯ ಮೇಲೆ ಸೆಕ್ಷನ್ 80ಡಿ ಅಡಿ ₹ 50,000 ಕಡಿತ ಸಿಗುತ್ತದೆ. ಮಾತ್ರವಲ್ಲದೆ, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಟಿಟಿಬಿ ಅಡಿ, ಬ್ಯಾಂಕ್, ಅಂಚೆ ಕಚೇರಿ ಅಥವಾ ಸಹಕಾರಿ ಬ್ಯಾಂಕ್‌ಗಳಲ್ಲಿಟ್ಟ ಠೇವಣಿಗಳಿಂದ ಹಿರಿಯ ನಾಗರೀಕರು ಗಳಿಸುವ ಬಡ್ಡಿಯ ಮೇಲೆ ₹ 50 ಸಾವಿರದವರೆಗೆ ತೆರಿಗೆ ವಿನಾಯಿತಿ ಇದೆ. ಉಳಿತಾಯ ಠೇವಣಿ ಮತ್ತು ಸ್ಥಿರ ಠೇವಣಿಗಳ ಮೇಲೆ ಗಳಿಸಿದ ಬಡ್ಡಿ ಎರಡೂ ಈ ನಿಬಂಧನೆಯ ಅಡಿಯಲ್ಲಿ ವಿನಾಯಿತಿಗೆ ಅರ್ಹ.

ನಿಮಗೆ ಮೇಲಿನ ಎಲ್ಲಾ ವರ್ಗಗಳಲ್ಲಿ ಒಟ್ಟು ₹ 1.50 ಲಕ್ಷದ ಆದಾಯದ ಮೇಲೆ ತೆರಿಗೆ ಬರುವುದಿಲ್ಲ. ಮೊದಲ ₹ 3 ಲಕ್ಷಕ್ಕೆ ತೆರಿಗೆ ಇರುವುದಿಲ್ಲ. ನಂತರ, ₹ 3 ಲಕ್ಷದಿಂದ ₹ 5 ಲಕ್ಷದವರೆಗೆ ಶೇ 5ರಷ್ಟು ತೆರಿಗೆ, ಹಾಗೂ ₹ 5 ಲಕ್ಷಕ್ಕೂ ಮಿಕ್ಕ ₹ 10 ಲಕ್ಷದ ತನಕದ ಆದಾಯಕ್ಕೆ ಶೇ 20ರಷ್ಟು ತೆರಿಗೆ ಇರುತ್ತದೆ. ಉಳಿದ ಮೊತ್ತವಾದ ₹ 5.56 ಲಕ್ಷವನ್ನಷ್ಟೇ ತೆರಿಗೆಗೊಳಪಡಿಸಲಾಗುತ್ತದೆ. ಮೇಲಿನ ದರಗಳಂತೆ ಅನ್ವಯವಾಗುವ ಮೊತ್ತಕ್ಕೆ ಶೇ 4ರಷ್ಟು ಸೆಸ್ ಸೇರಿ ₹ 22 ಸಾವಿರ ಅಂದಾಜು ತೆರಿಗೆ ಬರುತ್ತದೆ. ಈಗಾಗಲೇ ನಿಮ್ಮ ಬಡ್ಡಿ ಅಥವಾ ಪಿಂಚಣಿ ವೇತನದಲ್ಲಿ ತೆರಿಗೆ ಮುರಿದುಕೊಂಡಿದ್ದಲ್ಲಿ, ಉಳಿದ ಮೊತ್ತವನ್ನಷ್ಟೇ ನೀವು ಪಾವತಿಸಬೇಕಾಗಿರುತ್ತದೆ.

ಸೆಕ್ಷನ್ 80ಸಿ ಅಡಿ ಪರಿಗಣಿಸಲಾಗುವ ಯಾವುದೇ ಹೂಡಿಕೆ, ಉಳಿತಾಯವನ್ನು ಆಯಾ ಆರ್ಥಿಕ ವರ್ಷದಲ್ಲಿ ನೀವು ಮಾಡಿದ್ದರೆ ಆ ಮೊತ್ತಕ್ಕೂ ತೆರಿಗೆ ವಿನಾಯಿತಿ ಇರುತ್ತದೆ. ಈ ಸೆಕ್ಷನ್ ಅಡಿ ತೆರಿಗೆ ಲಾಭ ಪಡೆಯಲು ನೀವು ಅಂಚೆ ಕಚೇರಿಯಲ್ಲಿ ಅಥವಾ ತೆರಿಗೆ ವಿನಾಯಿತಿ ಸಿಗುವ 5 ವರ್ಷಗಳ ಬ್ಯಾಂಕ್ ಠೇವಣಿಗಳಲ್ಲಿ ₹ 1.50 ಲಕ್ಷದತನಕ ಪ್ರತಿ ವರ್ಷ ಹೂಡಿಕೆ ಮಾಡುವ ಮೂಲಕ ತೆರಿಗೆ ಪ್ರಮಾಣವನ್ನು ತಗ್ಗಿಸಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಎಲ್‌ಆ್ಯಂಡ್‌ಟಿ ಲಾಭ ಏರಿಕೆ

ನವದೆಹಲಿ (ಪಿಟಿಐ): ಎಲ್‌ಆ್ಯಂಡ್‌ಟಿ ಕಂಪನಿಯ ಜೂನ್ ತ್ರೈಮಾಸಿಕದ ನಿವ್ವಳ ಲಾಭವು ಶೇಕಡ 44.9ರಷ್ಟು ಹೆಚ್ಚಾಗಿದ್ದು, ₹ 1,702 ಕೋಟಿಗೆ ತಲುಪಿದೆ. ಕಂಪನಿಯು ಕಾರ್ಯಾಚರಣೆಯಲ್ಲಿ ಹೆಚ್ಚಿನ ಆದಾಯ ಸಂಗ್ರಹಿಸಲು ಸಾಧ್ಯವಾದ ಕಾರಣ ಲಾಭದ ಪ್ರಮಾಣ ಜಾಸ್ತಿಯಾಗಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 1,174 ಕೋಟಿ ನಿವ್ವಳ ಲಾಭ ಕಂಡಿತ್ತು.

ಏಪ್ರಿಲ್–ಜೂನ್ ಅವಧಿಯಲ್ಲಿ ಕಂಪನಿಯು ಕಾರ್ಯಾಚರಣೆಗಳಿಂದ ಒಟ್ಟು ₹ 35 ಸಾವಿರ ಕೋಟಿ ಆದಾಯ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 29 ಸಾವಿರ ಕೋಟಿ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಟಿಎಂಸಿ ಶಾಸಕ ಮಾಣಿಕ್ ಭಟ್ಟಾಚಾರ್ಯಗೆ ಇ.ಡಿ ಸಮನ್ಸ್

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಶಿಕ್ಷಕರ ಅಕ್ರಮ ನೇಮಕಾತಿ ಹಗರಣದಲ್ಲಿ ನಡೆದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಟಿಎಂಸಿ ಶಾಸಕ ಮಾಣಿಕ್ ಭಟ್ಟಾಚಾರ್ಯ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ನೀಡಿದೆ ಎಂದು ಮೂಲಗಳು ತಿಳಿಸಿವೆ.

ನಾದಿಯಾ ಜಿಲ್ಲೆಯ ಶಾಸಕ ಮತ್ತು ಪಶ್ಚಿಮ ಬಂಗಾಳ ಪ್ರೌಢ ಶಿಕ್ಷಣಾ ಮಂಡಳಿಯ ಮಾಜಿ ಅಧ್ಯಕ್ಷರಾದ ಭಟ್ಟಾಚಾರ್ಯ ಅವರಿಗೆ, ಬುಧವಾರ ಮಧ್ಯಾಹ್ನ 12 ಗಂಟೆಗೆ ಸಿಜಿಒ ಸಂಕೀರ್ಣದಲ್ಲಿರುವ ಕಚೇರಿಗೆ ಹಾಜರಾಗುವಂತೆ ಇ.ಡಿ ಸೂಚಿಸಿದೆ.

ಸುನಕ್– ಟ್ರಸ್ ಮಧ್ಯೆ ನೇರ ಹಣಾಹಣಿ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಅಭ್ಯರ್ಥಿ ಸ್ಥಾನದ ಅಂತಿಮ ಸ್ಪರ್ಧಿಗಳಾಗಿ ನೇರ ಹಣಾಹಣಿ ನಡೆಸುತ್ತಿರುವ ಮಾಜಿ ಚಾನ್ಸಲರ್ ರಿಷಿ ಸುನಕ್ ಮತ್ತು ವಿದೇಶಾಂಗ ಸಚಿವೆ ಲಿಜ್ ಟ್ರಸ್ ಅವರು ತಮ್ಮ ಆರ್ಥಿಕ ನೀತಿಗಳು ಮತ್ತು ತೆರಿಗೆ ಯೋಜನೆಗಳ ಬಗ್ಗೆ ಮೊದಲ ಟಿ.ವಿ ಚರ್ಚೆಯಲ್ಲಿ ಬಿರುಸಿನ ಪೈಪೋಟಿ ನಡೆಸಿದರೂ ಇದರಲ್ಲಿ ಯಾರು ನಿಶ್ಚಿತ ಗೆಲುವು ಸಾಧಿಸಿದ್ದಾರೆ ಎನ್ನುವುದು ಸ್ಪಷ್ಟವಾಗಿಲ್ಲ. ಈ ಇಬ್ಬರೂ ಮಂಗಳವಾರ ಚುನಾವಣಾ ಪ್ರಚಾರ ತೀವ್ರಗೊಳಿಸಿದರು.

ಸೋಮವಾರ ರಾತ್ರಿ ಬಿಬಿಸಿಯಲ್ಲಿ ನಡೆದ ಮುಖಾಮುಖಿ ಚರ್ಚೆಯಲ್ಲಿ ಅತ್ಯುತ್ತಮವಾಗಿ ವಿಷಯ ಮಂಡಿಸಿದ ಸುನಕ್ (ಶೇ 39) ತಮ್ಮ ಎದುರಾಳಿ ಟ್ರಸ್‌ಗಿಂತ (ಶೇ 38) ಮುನ್ನಡೆ ಸಾಧಿಸಿದ್ದಾರೆ. ಆದರೆ, ಕನ್ಸರ್ವೇಟಿವ್ ಪಕ್ಷದ ಶೇ 47ರಷ್ಟು ಮತದಾರರು ಇದನ್ನು ಪ್ರಶ್ನಿಸಿದ್ದು, ವಿದೇಶಾಂಗ ಸಚಿವೆ ಟ್ರಸ್ ಅವರು ಉತ್ತಮ ಅಭ್ಯರ್ಥಿ ಎನ್ನುವುದನ್ನು ಪ್ರದರ್ಶಿಸಿದರು ಎಂದು ಹೇಳಿದರೆ, ಶೇ 38ರಷ್ಟು ಮತದಾರರು ಮಾತ್ರ ಸುನಕ್ ಅವರು ಸಮರ್ಥ ಅಭ್ಯರ್ಥಿ ಎಂದಿದ್ದಾರೆ.

ಒಟ್ಟಾರೆ 1,032 ಬ್ರಿಟಿಷ್ ವಯಸ್ಕರನ್ನು ನಡೆಸಿರುವ ಸಮೀಕ್ಷೆಯ ಆಧಾರದ ಪ್ರಕಾರ, ಮತದಾರರು ಸುನಕ್ ಮತ್ತು ಟ್ರಸ್ ನಡುವೆ ಯಾರು ಸಮರ್ಥರೆನ್ನುವುದನ್ನು ನಿರ್ಧರಿಸಲಾಗದು. ಕೇವಲ ಒಂದು ಅಂಕದ ಅಂತರದ ವ್ಯತ್ಯಾಸ ಈ ಇಬ್ಬರ ನಡುವೆ ಇದೆ. ಚುನಾವಣೆಯಲ್ಲಿ ಯಾರು ಬೇಕಾದರೂ ಹೊರ ಬೀಳಬಹುದು ಎನ್ನುವುದನ್ನು ಇದು ಪ್ರತಿಬಿಂಬಿಸುತ್ತಿದೆ. ಸಮೀಕ್ಷೆಯಲ್ಲಿ ಪಾಲ್ಗೊಂಡ ವಿರೋಧ ಪಕ್ಷದ ಶೇ 41 ಮತದಾರರು 42ರ ಹರೆಯದ ಸುನಕ್ ಉತ್ತಮ ಅಭ್ಯರ್ಥಿ ಎಂದರೆ, ಶೇ 30ರಷ್ಟು ಮತದಾರರು ಮಾತ್ರ 47ರ ವಯಸ್ಸಿನ ಲಿಜ್ ಟ್ರಸ್ ಪರ ಒಲವು ವ್ಯಕ್ತಪಡಿಸಿರುವುದು ಸಮೀಕ್ಷೆಯ ಅಂಕಿಅಂಶಗಳು ತೋರಿಸುತ್ತಿವೆ.

ಸಂವಾದದ ವೇಳೆ ಇಬ್ಬರೂ ಪರಸ್ಪರರನ್ನು ಪ್ರಶಂಸಿಸಿದ್ದಾರೆ.

2024ರ ಬಳಿಕ ಐಎಸ್‌ಎಸ್‌ನಿಂದ ರಷ್ಯಾ ಹೊರಕ್ಕೆ

ಮಾಸ್ಕೊ (ಎಪಿ): 2024ರ ಬಳಿಕ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಯೋಜನೆಯಿಂದ (ಐಎಸ್‌ಎಸ್) ಹೊರಬರಲು ಮತ್ತು ತನ್ನದೇ ಬಾಹ್ಯಾಕಾಶ ನಿಲ್ದಾಣ ನಿರ್ಮಾಣದತ್ತ ಗಮನ ಕೇಂದ್ರೀಕರಿಸಲು ರಷ್ಯಾ ನಿರ್ಧರಿಸಿದೆ.

'ರಾಸ್‌ಕಾಸ್ಮೋಸ್'ನ ನೂತನ ಮುಖ್ಯಸ್ಥ ಯೂರಿ ಬೋರಿಸೋವ್ ಅವರು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಸಭೆ ನಡೆಸಿದ ಬಳಿಕ ಈ ವಿಷಯ ತಿಳಿಸಿದ್ದಾರೆ.

ಸಂಸದೀಯ ಸ್ಥಾಯಿ ಸಮಿತಿ ವರದಿಯಲ್ಲಿ ಉಲ್ಲೇಖ

ಏಮ್ಸ್‌ನಲ್ಲಿ ಎಸ್‌ಸಿ–ಎಸ್‌ಟಿ ಅಭ್ಯರ್ಥಿಗಳಿಗೆ ಅಧ್ಯಾಪಕ ಹುದ್ದೆ ನಿರಾಕರಣೆ

ನವದೆಹಲಿ (ಪಿಟಿಐ): 'ಅರ್ಹತೆ ಹಾಗೂ ಅನುಭವ ಇದ್ದರೂ ಕೂಡ ಎಸ್‌ಸಿ–ಎಸ್‌ಟಿ ಸಮುದಾಯದ ಅಭ್ಯರ್ಥಿಗಳಿಗೆ ಏಮ್ಸ್‌ನಲ್ಲಿ ಅಧ್ಯಾಪಕ ಹುದ್ದೆ ನಿರಾಕರಿಸಲಾಗುತ್ತಿದೆ' ಎಂದು ಸಂಸದೀಯ ಸ್ಥಾಯಿ ಸಮಿತಿ (ಎಸ್‌ಸಿ–ಎಸ್‌ಟಿ) ತನ್ನ ವರದಿಯಲ್ಲಿ ಆರೋಪಿಸಿದೆ.

'1,111 ಹುದ್ದೆಗಳ ಪೈಕಿ ಏಮ್ಸ್‌ನಲ್ಲಿ ಸದ್ಯ 275 ಸಹಾಯಕ ಪ್ರಾಧ್ಯಾಪಕ ಹಾಗೂ 92 ಪ್ರಾಧ್ಯಾಪಕ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಮುಂದಿನ ಮೂರು ತಿಂಗಳೊಳಗೆ ಭರ್ತಿ ಮಾಡಬೇಕು. ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ವರದಿ ಮಂಡನೆಯಾದ ನಂತರದ ಮೂರು ತಿಂಗಳಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಈ ಸಂಬಂಧ ಕಾರ್ಯಸೂಚಿಯೊಂದನ್ನು ಸಿದ್ಧಪಡಿಸಿ ಅದನ್ನು ಕಡ್ಡಾಯವಾಗಿ ಸಲ್ಲಿಸಬೇಕು' ಎಂದು ಸೂಚಿಸಿದೆ.

'ಅಗತ್ಯವಿರುವಷ್ಟು ಅರ್ಹ ಅಭ್ಯರ್ಥಿಗಳು ದೊರೆಯಲಿಲ್ಲ' ಎಂದು ಸರ್ಕಾರ ಪ್ರತಿಬಾರಿಯೂ ಜವಾಬು ನೀಡುತ್ತದೆ. ಇನ್ನು ಮುಂದೆ ಇಂತಹ ಜಾರಿಕೆಯ ಉತ್ತರ ನೀಡಿದರೆ ಅದನ್ನು ಸಹಿಸಲಾಗುವುದಿಲ್ಲ' ಎಂದೂ ಸಮಿತಿ ಎಚ್ಚರಿಸಿದೆ.

'ಎಸ್‌ಸಿ–ಎಸ್‌ಟಿ ಸಮುದಾಯದ ಅಭ್ಯರ್ಥಿಗಳು ಇತರರಷ್ಟೇ ಪ್ರತಿಭಾಶಾಲಿಗಳು ಹಾಗೂ ಸಮರ್ಥರಾಗಿದ್ದರೂ ಕೂಡ ಉದ್ದೇಶಪೂರ್ವಕವಾಗಿಯೇ ಈ ಹುದ್ದೆಗಳಿಗೆ ಅವರು ಅರ್ಹರಲ್ಲ ಎಂದು ಬಿಂಬಿಸಲಾಗುತ್ತಿದೆ. ಆಯ್ಕೆ ಸಮಿತಿಯು ಪೂರ್ವಗ್ರಹ ಪೀಡಿತ ನಿರ್ಧಾರದ ಮೂಲಕ ಅಧ್ಯಾಪಕ ಹುದ್ದೆಗೇರುವ ಸಮುದಾಯದ ಅಭ್ಯರ್ಥಿಗಳ ಹಕ್ಕನ್ನು ಕಸಿದುಕೊಳ್ಳುತ್ತಿದೆ' ಎಂದೂ ಸಮಿತಿ ದೂರಿದೆ. 'ಏಮ್ಸ್‌ನ ಕಾರ್ಯಕಾರಿ ಮಂಡಳಿಗಳಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯವನ್ನು ಪ್ರತಿನಿಧಿಸುವವರೇ ಇಲ್ಲ. ಈ ಮಂಡಳಿಗಳಲ್ಲಿ ಸಮುದಾಯದವರನ್ನೂ ಸದಸ್ಯರನ್ನಾಗಿ ನೇಮಿಸಬೇಕು. ಹಾಗಾದಲ್ಲಿ ಈ ಸಮುದಾಯದವರ ಹಿತಾಸಕ್ತಿ ಕಾಯುವುದಕ್ಕೆ ಸಾಧ್ಯವಾಗುತ್ತದೆ. ನಿರ್ಧಾರ ಕೈಗೊಳ್ಳುವಿಕೆ ಪ್ರಕ್ರಿಯೆಯಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನೂ ಪ್ರೋತ್ಸಾಹಿಸಿದಂತಾಗುತ್ತದೆ' ಎಂದು ಸಮಿತಿ ಹೇಳಿದೆ.

'ಮೀಸಲಾತಿ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಮೂಲಕ ಸೂಪರ್ ಸ್ಪೇಷಾಲಿಟಿ ಕ್ಷೇತ್ರದಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯದ ವಿದ್ಯಾರ್ಥಿಗಳು ಹಾಗೂ ಬೋಧಕರಿಗೆ ಆದ್ಯತೆ ಒದಗಿಸಬೇಕು. ಈ ಸಮುದಾಯದ ವೈದ್ಯರು ಹಾಗೂ ವಿದ್ಯಾರ್ಥಿಗಳು ವಿಶೇಷ ತರಬೇತಿಗಾಗಿ ವಿದೇಶಗಳಿಗೆ ಹೋಗುವುದಕ್ಕೆ ಅನುವಾಗುವಂತೆ ಪರಿಣಾಮಕಾರಿ ಕಾರ್ಯವಿಧಾನವೊಂದನ್ನೂ ಜಾರಿಗೊಳಿಸಬೇಕು' ಎಂದಿದೆ.

ಸಿಪಿಇಸಿಗೆ ಚೀನಾ, ಪಾಕ್ ಆಹ್ವಾನ: ಭಾರತ ಆಕ್ಷೇಪ

ನವದೆಹಲಿ (ಪಿಟಿಐ): ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ಹಾಯ್ದು ಹೋಗುವ, ಶತಕೋಟಿ ಡಾಲರ್ ವೆಚ್ಚದ ಕಾರಿಡಾರ್ ನಿರ್ಮಾಣ ಯೋಜನೆಯಲ್ಲಿ ಭಾಗಿಯಾಗುವಂತೆ ಇತರ ದೇಶಗಳನ್ನು ಉತ್ತೇಜಿಸುತ್ತಿರುವ ಚೀನಾ ಹಾಗೂ ಪಾಕಿಸ್ತಾನದ ಯತ್ನಗಳನ್ನು ಭಾರತ ಮಂಗಳವಾರ ಖಂಡಿಸಿದೆ.

ಈ ನಡೆ ಕುರಿತು ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, 'ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್' (ಸಿಪಿಇಸಿ) ಅಡಿ ಕೈಗೊಳ್ಳುವ ಇಂಥ ಚಟುವಟಿಕೆಗಳು ಕಾನೂನುಬಾಹಿರ. ಇದನ್ನು ಒಪ್ಪಲು ಸಾಧ್ಯವಿಲ್ಲ. ಇದಕ್ಕೆ ತಕ್ಕ ಉತ್ತರ ನೀಡಲಾಗುವುದು' ಎಂದಿದ್ದಾರೆ.

'ಯಾವುದೇ ದೇಶ ಈ ಯೋಜನೆಯಲ್ಲಿ ಭಾಗಿಯಾಗಲು ಮುಂದಾದಲ್ಲಿ, ಅದು ಭಾರತದ ಸಾರ್ವಭೌಮತೆ ಹಾಗೂ ಭೌಗೋಳಿಕ ಸಮಗ್ರತೆಗೆ ಧಕ್ಕೆ ತಂದಂತಾಗಲಿದೆ' ಎಂದು ಅವರು ಎಚ್ಚರಿಸಿದರು.

ಗಾಯದಿಂದ ಬಳಲುತ್ತಿರುವ ಭಾರತದ ಜಾವೆಲಿನ್ ಥ್ರೊ ಅಥ್ಲೀಟ್

ಕಾಮನ್‌ವೆಲ್ತ್ ಗೇಮ್ಸ್‌ಗೆ ನೀರಜ್ ಇಲ್ಲ

ಬರ್ಮಿಂಗ್‌ಹ್ಯಾಮ್ (ಪಿಟಿಐ): ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದ ಭಾರತದ ಜಾವೆಲಿನ್ ಥ್ರೊ ಸ್ಪರ್ಧಿ ನೀರಜ್ ಚೋಪ್ರಾ ಕಾಮನ್‌ವೆಲ್ತ್ ಗೇಮ್ಸ್‌ನಿಂದ ಹಿಂದೆ ಸರಿದಿದ್ದಾರೆ. ಪದಕ ಜಯಿಸಬಲ್ಲ ಪ್ರಮುಖ ಸ್ಪರ್ಧಿಯು ಹಿಂದೆ ಸರಿದಿದ್ದರಿಂದ ಭಾರತಕ್ಕೆ ತೀವ್ರ ಹಿನ್ನಡೆಯಾಗಿದೆ.

ಅಮೆರಿಕದ ಒರೆಗಾನ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಕೂಟದಲ್ಲಿ ನೀರಜ್ ಭಾನುವಾರ 88.13 ಮೀಟರ್ಸ್ ದೂರ ಜಾವೆಲಿನ್ ಎಸೆದು ಪದಕಕ್ಕೆ ಮುತ್ತಿಟ್ಟಿದ್ದರು. ಈ ವೇಳೆ ಅವರಿಗೆ ತೊಡೆಸಂಧು ನೋವು ಕಾಣಿಸಿಕೊಂಡಿತ್ತು. ಹೀಗಾಗಿ ಕಾಮನ್‌ವೆಲ್ತ್ ಕೂಟದಲ್ಲಿ ಭಾಗವಹಿಸದಿರಲು ಅವರು ನಿರ್ಧರಿಸಿದ್ದಾರೆ. ಗುರುವಾರದಿಂದ ಗೇಮ್ಸ್ ಆರಂಭವಾಗಲಿದೆ.

ನೀರಜ್ ಅವರು ಇಲ್ಲಿ ಕಣಕ್ಕಿಳಿದಿದ್ದರೆ ವಿಶ್ವ ಚಾಂಪಿಯನ್, ಗ್ರೆನಡಾದ ಆ್ಯಂಡರ್ಸನ್ ಪೀಟರ್ಸ್ ಅವರಿಗೆ ತೀವ್ರ ಪೈಪೋಟಿ ನೀಡುವ ನಿರೀಕ್ಷೆಯಿತ್ತು.

‘ನೀರಜ್ ಅವರು ಅಮೆರಿಕದಲ್ಲಿ ಸೋಮವಾರ ಎಂಆರ್‌ಐ ಸ್ಕ್ಯಾನ್‌ಗೆ ಒಳಗಾಗಿದ್ದು, ಅವರಿಗೆ ವೈದ್ಯರು ಒಂದು ತಿಂಗಳ ವಿಶ್ರಾಂತಿಗೆ ಸೂಚಿಸಿದ್ದಾರೆ’ ಎಂದು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಹೇಳಿದ್ದಾರೆ.

‘ನೀರಜ್ ಅವರಿಗೆ ಸಣ್ಣ ಪ್ರಮಾಣದ ನೋವಿದೆ. ಆದರೆ ಮುಂಜಾಗ್ರತಾ ಕ್ರಮವಾಗಿ ವಿಶ್ರಾಂತಿಗೆ ಸೂಚಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಫೈನಲ್‌ನ ನಾಲ್ಕನೇ ಪ್ರಯತ್ನದಲ್ಲಿ ನೀರಜ್ ಅವರ ಬಲತೊಡೆಯಲ್ಲಿ ನೋವು ಕಾಣಿಸಿಕೊಂಡಿತ್ತು.

‘ನಾಲ್ಕನೇ ಥ್ರೋ ಇನ್ನಷ್ಟು ದೂರ ಸಾಗುವ ನಿರೀಕ್ಷೆ ನನಗಿತ್ತು. ಆದರೆ ತೊಡೆಯ ಸ್ನಾಯುವಿನಲ್ಲಿ ನೋವು ಕಾಡಿತು. ಆದ್ದರಿಂದ ಶ್ರೇಷ್ಠ ದಾಖಲೆಯನ್ನೂ ಸರಿಗಟ್ಟಲಾಗಲಿಲ್ಲ’ ಎಂದು ಪದಕ ಜಯಿಸಿದ ಬಳಿಕ ನೀರಜ್ ಹೇಳಿದ್ದರು.

ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ನೀರಜ್ ಅವರು ಕಾಮನ್‌ವೆಲ್ತ್ ಗೇಮ್ಸ್ ಹಾಲಿ ಚಾಂಪಿಯನ್ ಕೂಡ ಆಗಿದ್ದಾರೆ.

‘ನೀರಜ್ ಜೊತೆ ಸಂಪರ್ಕದಲ್ಲಿದ್ದು, ಅವರು ಚೇತರಿಸಿಕೊಳ್ಳಲು ನೆರವು ನೀಡಲಾಗುವುದು. ಕಾಮನ್‌ವೆಲ್ತ್ ಕೂಟದಲ್ಲಿ ಅವರು ಭಾರತ ತಂಡದ ಧ್ವಜಧಾರಿ ಆಗಬೇಕಿತ್ತು’ ಎಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷ ಆದಿಲ್ ಸುಮರಿವಾಲ ಹೇಳಿದ್ದಾರೆ.

ಧ್ವಜಧಾರಿಯನ್ನು ಶೀಘ್ರ ನಿರ್ಧರಿಸಲಾಗುವುದು ಎಂದು ಭಾರತ ತಂಡದ ಚೆಫ್ ಡಿ ಮಿಶನ್ ರಾಜೇಶ್ ಭಂಡಾರಿ ತಿಳಿಸಿದ್ದಾರೆ.

ಡಿ.ಪಿ.ಮನು ಮತ್ತು ರೋಹಿತ್ ಯಾದವ್ ಅವರು ಭಾರತ ಜಾವೆಲಿನ್ ಥ್ರೊ ತಂಡದಲ್ಲಿದ್ದಾರೆ.



ಮುಖ್ಯಾಂಶಗಳು
- ತೊಡೆನೋವಿನಿಂದ ಬಳಲುತ್ತಿರುವ ನೀರಜ್ ಚೋಪ್ರಾ
- ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಭಾನುವಾರ ಬೆಳ್ಳಿ ಜಯಿಸಿದ್ದ ಅಥ್ಲೀಟ್
- ಒಂದು ತಿಂಗಳ ವಿಶ್ರಾಂತಿಗೆ ಸೂಚಿಸಿರುವ ವೈದ್ಯರು

ನೀರಜ್ ಚೋಪ್ರಾ– ಎಎಫ್‌ಪಿ ಚಿತ್ರ

ಬರ್ಮಿಂಗ್‌ಹ್ಯಾಮ್ 2022
ಕಾಮನ್‌ವೆಲ್ತ್ ಕ್ರೀಡಾಕೂಟ

ಮುನ್ನೆಚ್ಚರಿಕೆ ಪಾಲಿಸಿ: ಐಒಎ

ಕಾಮನ್‌ವೆಲ್ತ್ ಕೂಟದಲ್ಲಿ ಸ್ಪರ್ಧಿಸಲು ತೆರಳಿರುವ ಕ್ರೀಡಾಪಟುಗಳು ಮತ್ತು ಅಧಿಕಾರಿಗಳು ಸಾರ್ವಜನಿಕರ ಸಂಪರ್ಕದಿಂದ ಸಾಧ್ಯವಾದಷ್ಟು ದೂರ ಇರಬೇಕು. ಜನಜಂಗುಳಿಯಲ್ಲಿ ಹೋಗುವುದು ತಪ್ಪಿಸಬೇಕು. ಕೋವಿಡ್ ತಡೆ ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಎಚ್ಚರಿಕೆ ನೀಡಿದೆ.

ಈ ಬಾರಿ ಭಾರತ ತಂಡದಲ್ಲಿ 215 ಅಥ್ಲೀಟ್‌ಗಳು ಮತ್ತು 107 ಅಧಿಕಾರಿ, ನೆರವು ಸಿಬ್ಬಂದಿ ಇದ್ದಾರೆ.

ಮೇಘನಾ, ಪೂಜಾಗೆ ಕೋವಿಡ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಇದೇ ಮೊದಲ ಸಲ ನಡೆಯಲಿರುವ ಮಹಿಳಾ ಕ್ರಿಕೆಟ್‌ನಲ್ಲಿ ಸ್ಪರ್ಧಿಸಲಿರುವ ಭಾರತ ತಂಡದ ಪೂಜಾ ವಸ್ತ್ರಕರ್ ಮತ್ತು ಎಸ್. ಮೇಘನಾ ಅವರಿಗೆ ಕೋವಿಡ್ ಖಚಿತವಾಗಿದೆ.

ಇದೇ ಶುಕ್ರವಾರ ನಡೆಯಲಿರುವ ಮೊದಲ ಪಂದ್ಯದಲ್ಲಿ ಭಾರತ ತಂಡವು ಆಸ್ಟ್ರೇಲಿಯಾವನ್ನು ಎದುರಿಸಲಿದೆ. ಕಳೆದ ವಾರ ಒಬ್ಬ ಆಟಗಾರ್ತಿ ಮತ್ತು ಒಬ್ಬ ನೆರವು ಸಿಬ್ಬಂದಿಗೆ ಕೋವಿಡ್ ಆಗಿದ್ದ ವಿಷಯವನ್ನು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ತಿಳಿಸಿದ್ದರು.

‘ಭಾನುವಾರ ಪ್ರಯಾಣ ಆರಂಭಿಸುವ ಮುನ್ನ ನಡೆದ ಪರೀಕ್ಷೆಯಲ್ಲಿ ಕೋವಿಡ್ ಇರುವುದು ಖಚಿತವಾಗಿದೆ. ಹೀಗಾಗಿ ಇವರಿಬ್ಬರು ಪ್ರತ್ಯೇಕವಾಸದಲ್ಲಿದ್ದು, ಬರ್ಮಿಂಗ್‌ಹ್ಯಾಮ್‌ಗೆ ತೆರಳಿಲ್ಲ. ಅವರು ಗುಣಮುಖರಾದ ನಂತರ ತೆರಳುವರು’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪದಕ ಜಯದ ಸಾಮರ್ಥ್ಯ ಭಾರತಕ್ಕಿದೆ

ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ವಿಶ್ವಾಸ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಕಳೆದ ಒಂದು ದಶಕದಲ್ಲಿ ಕೆಲವು ಅವಿಸ್ಮರಣೀಯ ಸಾಧನೆಗಳಿಗೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಒಂದಿಷ್ಟು ಕಹಿನೆನಪುಗಳನ್ನೂ ಉಂಡಿದ್ದಾರೆ.

ಇದೀಗ ತಮ್ಮ ವೃತ್ತಿಜೀವನದ ಪ್ರಮುಖ ಘಟ್ಟದಲ್ಲಿ ಅವರಿದ್ದಾರೆ. ಮೂರನೇ ಬಾರಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ ತಂಡದ ಗೋಲುಪೆಟ್ಟಿಗೆಯ ರಕ್ಷಕನಾಗಿ ಕಣಕ್ಕಿಳಿಯಲಿದ್ದಾರೆ. ಕೇರಳದ 34 ವರ್ಷದ ಶ್ರೀಜೇಶ್‌ಗೆ ಇದು ಬಹುತೇಕ ಕೊನೆಯ ಕಾಮನ್‌ವೆಲ್ತ್ ಕೂಟವಾಗಲಿದೆ.


ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಇತಿಹಾಸ ಬರೆದಿದ್ದ ಭಾರತ ತಂಡದ ಶ್ರೀಜೇಶ್ ಮಿಂಚಿದ್ದರು. ಅವರ ಅನುಭವ ಮತ್ತು ಚುರುಕಾದ ಗೋಲ್‌ಕೀಪಿಂಗ್ ಬಲದಿಂದ ಬರ್ಮಿಂಗ್‌ಹ್ಯಾಮ್‌ನಲ್ಲಿಯೂ ಭಾರತ ತಂಡವು ಚಿನ್ನದ ಪದಕ ಜಯಿಸುವತ್ತ ಕಣ್ಣಿಟ್ಟಿದೆ.

‘ಜೀವನ ಯಾವಾಗಲೂ ಒಂದೇ ತರಹ ಇರುವುದಿಲ್ಲ. ಏರಿಳಿತಗಳು, ಬದಲಾವಣೆಗಳು ಸಹಜ. ನನ್ನ ಕ್ರೀಡಾಜೀವನದಲ್ಲಿ ಬಹಳಷ್ಟು ಏಳುಬೀಳುಗಳನ್ನು ಕಂಡಿದ್ದೇನೆ. ವೃತ್ತಿಜೀವನದ ಆರಂಭದಲ್ಲ ಸೋಲುಗಳನ್ನು ಎದುರಿಸಿರುವೆ. ನಂತರ ಅನುಭವ ಗಳಿಸುತ್ತ ಈಗ ಭಾರತ ಹಾಕಿ ತಂಡದ ಅಗ್ರಕ್ರಮಾಂಕದ ಗೋಲ್‌ಕೀಪರ್ ಆಗಿದ್ದೇನೆ’ ಎಂದು ಶ್ರೀಜೇಶ್ ಸಂದರ್ಶನದಲ್ಲಿ ಹೇಳಿದ್ದಾರೆ.

‘2012ರ ಲಂಡನ್ ಒಲಿಂಪಿಕ್ ಕೂಟದ ನಿರಾಶೆಯೊಂದಿಗೆ ವೃತ್ತಿಜೀವನ ಆರಂಭವಾಗಿತ್ತು. ಟೋಕಿಯೊದಲ್ಲಿ ಕಂಚಿನ ಪದಕ ಜಯಿಸಿದ ಸಿಹಿಕ್ಷಣವೂ ನನ್ನ ಪಾಲಿನದ್ದಾಯಿತು. ಈ ನಡುವೆ ಭಾರತ ತಂಡದ ನಾಯಕತ್ವ ವಹಿಸಿದ್ದೆ. ಆದರೆ, ಲೆಗ್‌ಮೆಂಟ್ ಗಾಯದಿಂದಾಗಿಯೇ ನನ್ನ ಬಹುತೇಕ ಸಮಯವು ಕಳೆದುಹೋಯಿತು. ಕೇರಳದಲ್ಲಿ ಅವಿಯಾಲ ಎಂಬ ಜನಪ್ರಿಯ ಖಾದ್ಯವಿದೆ. ಅದರಲ್ಲಿ 13 ತರಕಾರಿಗಳನ್ನು ಬಳಸಿ ಸಾರು ಮಾಡಲಾಗುತ್ತದೆ. ಅದೇ ತರಹ ನನ್ನ ವೃತ್ತಿಜೀವನ ಕೂಡ. ತರಹೇವಾರಿ ಅನುಭವಗಳು ಮಿಶ್ರಣಗೊಂಡಿವೆ’ ಎಂದು ಮಾರ್ಮಿಕವಾಗಿ ಹೇಳಿದರು.

‘ಈ ಬಾರಿಯ ಕಾಮನ್‌ವೆಲ್ತ್ ಕೂಟದಲ್ಲಿ ತಂಡವು ಫೈನಲ್ ತಲುಪಲು ಸಮರ್ಥವಾಗಿದೆ. ಆಸ್ಟ್ರೇಲಿಯಾ ವಿಶ್ವದಲ್ಲಿಯೇ ಉತ್ತಮ ಸಾಮರ್ಥ್ಯ ಹೊಂದಿರುವ ತಂಡವಾಗಿದೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿಯೂ ಉತ್ತಮವಾಗಿ ಆಡಿದ್ದರು. ಅವರನ್ನು ಸೋಲಿಸುವುದು ಕಠಿಣ ಸವಾಲು. ಆದರೆ ನಾವು ಯಾವುದೇ ತಂಡವನ್ನೂ ಹಗುರವಾಗಿ ಪರಿಗಣಿಸಿಯೇ ಇಲ್ಲ. ಎಲ್ಲವನ್ನೂ ಗಂಭೀರವಾಗಿಯೇ ಎದುರಿಸಲಿದ್ದೇವೆ’ ಎಂದರು.

ಭಾರತ ತಂಡವು ಕಾಮನ್‌ವೆಲ್ತ್ ಕೂಟದಲ್ಲಿ ಎರಡು ಬಾರಿ ಬೆಳ್ಳಿಪದಕ ಜಯಿಸಿದೆ.



ಪಿ.ಆರ್. ಶ್ರೀಜೇಶ್



ಭಾರತದ ಮಹಿಳಾ ಬಾಕ್ಸರ್‌ಗಳಾದ ಲವ್ಲಿನಾ ಬೊರ್ಗೊಹೈನ್, ನಿಖತ್ ಜರೀನ್, ಜಾಸ್ಮಿನ್ ಲಂಬೋರಿಯ ಮತ್ತು ನೀತು ಅವರು ಮಂಗಳವಾರ ಬರ್ಮಿಂಗ್‌ಹ್ಯಾಂನಲ್ಲಿ ಕಾಮನ್‌ವೆಲ್ತ್ ಕೂಟದ ಲಾಂಛನದ ಮುಂದೆ ಜತೆಯಾಗಿ ಕಾಣಿಸಿಕೊಂಡರು –ಪಿಟಿಐ ಚಿತ್ರ

ಲವ್ಲಿನಾ ಕೋಚ್‌ಗೆ ಮಾನ್ಯತಾಪತ್ರ

ಬರ್ಮಿಂಗ್‌ಹ್ಯಾಂ (ಪಿಟಿಐ): ಮಹಿಳಾ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರ ವೈಯಕ್ತಿಕ ಕೋಚ್ ಸಂಧ್ಯಾ ಗುರುಂಗ್ ಅವರಿಗೆ ಮಂಗಳವಾರ, ಕಾಮನ್‌ವೆಲ್ತ್ ಕ್ರೀಡಾಕೂಟದ ಮಾನ್ಯತಾಪತ್ರ ದೊರೆತಿದೆ.

‘ಮಾನ್ಯತಾಪತ್ರ ದೊರೆಯದ ಕಾರಣ ನನ್ನ ಕೋಚ್ ಸಂಧ್ಯಾ ಅವರಿಗೆ ಬರ್ಮಿಂಗ್‌ಹ್ಯಾಂನ ಕ್ರೀಡಾಗ್ರಾಮಕ್ಕೆ ಪ್ರವೇಶ ದೊರೆತಿಲ್ಲ’ ಎಂದು ಲವ್ಲಿನಾ ಸೋಮವಾರ ‘ಟ್ವೀಟ್’ ಮಾಡಿದ್ದರು. ‘ಭಾರತ ಬಾಕ್ಸಿಂಗ್ ಫೆಡರೇಷನ್ ಅಧಿಕಾರಿಗಳು ನನ್ನ ಕೋಚ್‌ಗಳಿಗೆ ನಿರಂತರ ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿದ್ದರು.

ಇದೀಗ ಅವರಿಗೆ ಮಾನ್ಯತಾಪತ್ರ ಲಭಿಸಿದ್ದು, ವಿವಾದ ಬಗೆಹರಿದಂತಾಗಿದೆ. ‘ಸಂಧ್ಯಾ ಅವರಿಗೆ ಕ್ರೀಡಾಕೂಟದ ಮಾನ್ಯತಾಪತ್ರ ದೊರಕಿಸಿಕೊಡಲಾಗಿದ್ದು, ಬಾಕ್ಸರ್‌ಗಳು ವಾಸ್ತವ್ಯ ಹೂಡಿರುವ ಕ್ರೀಡಾಗ್ರಾಮಕ್ಕೆ ಮಂಗಳವಾರ ಬೆಳಿಗ್ಗೆ ಪ್ರವೇಶ ಲಭಿಸಿದೆ. ಅವರು ಈಗ ತಂಡದ ಜೊತೆ ಇದ್ದಾರೆ’ ಎಂದು ಭಾರತ ಒಲಿಂಪಿಕ್ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹುಮ್ಮಸ್ಸಿನಲ್ಲಿ ಭಾರತ; ಒತ್ತಡದಲ್ಲಿ ವಿಂಡೀಸ್

ಕ್ರಿಕೆಟ್: ಕ್ಲೀನ್‌ಸ್ವೀಪ್‌ನತ್ತ ಶಿಖರ್ ಧವನ್ ಬಳಗದ ಚಿತ್ತ; ಯುವ ಆಟಗಾರರಿಗೆ ಅವಕಾಶ ಸಾಧ್ಯತೆ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಏಕದಿನ ಕ್ರಿಕೆಟ್ ಮಾದರಿಯಲ್ಲಿ ಸತತ 12ನೇ ಸರಣಿ ಗೆಲುವಿನ ವಿಶ್ವದಾಖಲೆಯ ಸಂಭ್ರಮದಲ್ಲಿರುವ ಭಾರತ ತಂಡವು ಬುಧವಾರ ವೆಸ್ಟ್ ಇಂಡೀಸ್ ಎದುರಿನ ಮೂರನೇ ಹಾಗೂ ಕೊನೆಯ ಪಂದ್ಯದಲ್ಲಿ ಗೆದ್ದು ಕ್ಲೀನ್‌ಸ್ವೀಪ್ ಮಾಡಿಕೊಳ್ಳುವ ಉತ್ಸಾಹದಲ್ಲಿದೆ.

ವಿಂಡೀಸ್ ತಂಡದ ಎದುರಿನ ಸರಣಿಯ ಮೊದಲ ಎರಡೂ ಪಂದ್ಯಗಳಲ್ಲಿ ಶಿಖರ್ ಧವನ್ ಬಳಗ ಜಯಿಸಿದೆ. ಈ ಪಂದ್ಯದಲ್ಲಿ ಒತ್ತಡ ಕಡಿಮೆ ಇರುವುದರಿಂದ ಕೆಲವು ಅನುಭವಿ ಆಟಗಾರರಿಗೆ ವಿಶ್ರಾಂತಿ ನೀಡಿ, ಬೆಂಚ್‌ನಲ್ಲಿರುವ ಹುಡುಗರಿಗೆ ಅವಕಾಶ ಕೊಡುವತ್ತ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಚಿತ್ತ ನೆಟ್ಟಿದ್ದಾರೆ.

ಅದರಿಂದಾಗಿ ಶುಭಮನ್ ಗಿಲ್ ಬದಲಿಗೆ ಋತುರಾಜ್ ಗಾಯಕವಾಡ್ ಸ್ಥಾನ ಪಡೆಯಬಹುದು. ಸಂಜು ಸ್ಯಾಮ್ಸನ್ ತಮಗೆ ಲಭಿಸಿದ ಅವಕಾಶಗಳಲ್ಲಿ ಉತ್ತಮವಾಗಿ ಆಡಿದ್ದಾರೆ. ಆದರೂ ಕೊನೆ ಪಂದ್ಯದಲ್ಲಿ ಅವರಿಗೆ ವಿಶ್ರಾಂತಿ ಕೊಟ್ಟು, ಇಶಾನ್ ಕಿಶನ್ ಸಾಮರ್ಥ್ಯವನ್ನು ಪರೀಕ್ಷೆಗೊಡ್ಡಬಹುದು.

ಪದಾರ್ಪಣೆ ಸರಣಿ ಆಡುತ್ತಿರುವ ವೇಗಿ ಆವೇಶ್ ಖಾನ್, ಕಳೆದ ಪಂದ್ಯದ ಹೀರೊ ಅಕ್ಷರ್ ಪಟೇಲ್, ಮೊಹಮ್ಮದ್ ಸಿರಾಜ್ ಮತ್ತು ದೀಪಕ್ ಹೂಡಾ ಈ ಪಂದ್ಯದಲ್ಲಿಯೂ ಆಡಬಹುದು. ಆಲ್‌ರೌಂಡರ್ ಜಡೇಜ ಗಾಯಗೊಂಡಿದ್ದು ಕಣಕ್ಕಿಳಿಯುವುದು ಖಚಿತವಿಲ್ಲ.

ಆದರೆ, ವೆಸ್ಟ್ ಇಂಡೀಸ್ ತಂಡವು ಈ ಪಂದ್ಯದಲ್ಲಿ ಜಯಿಸಿ, ಸೋಲಿನ ಸರಪಣಿ ಕಳಚಿಕೊಳ್ಳುವ ಯೋಚನೆಯಲ್ಲಿದೆ. ಕಳೆದೆರಡೂ ಪಂದ್ಯಗಳಲ್ಲಿ ಉತ್ತಮವಾಗಿ ಆಡಿತ್ತು. ಮೂನ್ನೂರಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿತ್ತು. ಆದರೂ ಭಾರತ ಮೇಲುಗೈ ಸಾಧಿಸಿತ್ತು. ಎರಡನೇ ಪಂದ್ಯದಲ್ಲಿ ಶಾಯ್ ಹೋಪ್ ಶತಕ ಗಳಿಸಿದ್ದರು. ಈಚೆಗೆ ವಿಂಡೀಸ್ ತಂಡವು 0–3ರಿಂದ ಬಾಂಗ್ಲಾದೇಶದ ಎದುರು ಸೋತಿತ್ತು. ಇದೀಗ ಮತ್ತು ವೈಟ್‌ವಾಷ್ ತಪ್ಪಿಸಿಕೊಳ್ಳುವ ಸವಾಲು ಎದುರಿಸುತ್ತಿದೆ.

ತಂಡಗಳು: ಭಾರತ: ಶಿಖರ್ ಧವನ್ (ನಾಯಕ), ಋತುರಾಜ್ ಗಾಯಕವಾಡ್, ಶುಭಮನ್ ಗಿಲ್, ದೀಪಕ್ ಹೂಡಾ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಆವೇಶ್ ಖಾನ್, ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್

ವೆಸ್ಟ್ ಇಂಡೀಸ್: ನಿಕೊಲಸ್ ಪೂರನ್ (ನಾಯಕ), ಶಾಯ್ ಹೋಪ್ (ಉಪನಾಯಕ), ಶಾಮ್ರಾ ಬ್ರೂಕ್ಸ್, ಕೀಸಿ ಕಾರ್ಟಿ, ಜೇಸನ್ ಹೋಲ್ಡರ್, ಅಕೇಲ್ ಹುಸೇನ್, ಅಲ್ಜರಿ ಜೋಸೆಫ್, ಬ್ರೆಂಡನ್ ಕಿಂಗ್, ಕೈಲ್ ಮೇಯರ್ಸ್, ಕೀಮೊ ಪಾಲ್, ರೋವಮನ್ ಪೊವೆಲ್, ಜೇಡನ್ ಸೀಲ್ಸ್, ಹೇಡನ್ ವಾಲ್ಶ್

ಪಂದ್ಯ ಆರಂಭ: ರಾತ್ರಿ 7ರಿಂದ
ನೇರಪ್ರಸಾರ: ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್



ರಾಹುಲ್ ದ್ರಾವಿಡ್ ಮತ್ತು ಶಿಖರ್ ಧವನ್

ಮುಖ್ಯಾಂಶಗಳು
- 12 ಏಕದಿನ ಸರಣಿಗಳಲ್ಲಿ ಸತತ ಜಯ ಸಾಧಿಸಿರುವ ಭಾರತ
- ಈ ಸರಣಿಯಲ್ಲಿ 2–0ಯಿಂದ ಮುನ್ನಡೆಯಲ್ಲಿರುವ ಶಿಖರ್ ಧವನ್ ಬಳಗ
- ಸೋಲಿನ ಸರಪಳಿ ಕಳಚುವ ಛಲದಲ್ಲಿ ವಿಂಡೀಸ್

ಸಂಕ್ಷಿಪ್ತ ಸುದ್ದಿ

ಭಾರತ ತಂಡಕ್ಕೆ ಮೈಂಡ್ ಕೋಚ್ ಆಪ್ಟನ್

ನವದೆಹಲಿ(ಪಿಟಿಐ): ಪ್ಯಾಡಿ ಆಪ್ಟನ್ ಅವರನ್ನು ಭಾರತ ಕ್ರಿಕೆಟ್ ತಂಡದ ಮೆಂಟಲ್ ಕಂಡಿಷನಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ.

2011ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸಿದ್ದ ಭಾರತ ತಂಡಕ್ಕೆ ಪ್ಯಾಡಿ ನೆರವು ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಿದ್ದರು. ಈ ವರ್ಷ ಆಸ್ಟ್ರೇಲಿಯಾದಲ್ಲಿ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದ್ದು, ಅದಕ್ಕಾಗಿ ಭಾರತ ತಂಡದ ಆಟಗಾರರಿಗೆ ಮನೋದಾರ್ಢ್ಯ ನಿರ್ವಹಣೆ ತರಬೇತಿಯನ್ನು ಪ್ಯಾಡಿ ವಹಿಸಲಿದ್ದಾರೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

2025ರ ಮಹಿಳಾ ಏಕದಿನ ವಿಶ್ವಕಪ್‌ಗೆ ಭಾರತ ಆತಿಥ್ಯ

ನವದೆಹಲಿ: 2025ರ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ಆತಿಥ್ಯ ವಹಿಸಲಿದೆ. ಬಾಂಗ್ಲಾದೇಶ ಮತ್ತು ಇಂಗ್ಲೆಂಡ್ ಕ್ರಮವಾಗಿ 2024 ಹಾಗೂ 2026ರ ಟಿ20 ವಿಶ್ವಕಪ್ ಆಯೋಜಿಸಲಿದೆ.

2027 ರಲ್ಲಿ ಮಹಿಳಾ ಟಿ20 ಚಾಂಪಿಯನ್ಸ್ ಟ್ರೋಫಿ ಟೂರ್ನಿ ಶ್ರೀಲಂಕಾದಲ್ಲಿ ನಡೆಯಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ (ಐಸಿಸಿ) ಮಂಗಳವಾರ ತಿಳಿಸಿದೆ.

‘ಐಸಿಸಿ ಮಹಿಳಾ ಏಕದಿನ ಮತ್ತು ಟಿ20 ವಿಶ್ವಕಪ್ ಟೂರ್ನಿಗಳ ಆತಿಥ್ಯದ ಅವಕಾಶವನ್ನು ಬಾಂಗ್ಲಾದೇಶ, ಭಾರತ, ಇಂಗ್ಲೆಂಡ್ ಮತ್ತು ಶ್ರೀಲಂಕಾಕ್ಕೆ ನೀಡಲು ಸಂತಸವಾಗುತ್ತಿದೆ. ಮಹಿಳಾ ಕ್ರಿಕೆಟ್‌ಅನ್ನು ಜನಪ್ರಿಯಗೊಳಿಸುವುದು ಐಸಿಸಿಯ ಮುಖ್ಯ ಗುರಿಗಳಲ್ಲಿ ಒಂದು’ ಎಂದು ಪ್ರಕಟಣೆ ಹೇಳಿದೆ.

ಮಹಿಳಾ ಏಕದಿನ ವಿಶ್ವಕಪ್ 2013 ರಲ್ಲಿ ಕೊನೆಯ ಬಾರಿ ಭಾರತದಲ್ಲಿ ಆಯೋಜನೆಯಾಗಿತ್ತು.

‘ಆನಂದ್ ಅನುಪಸ್ಥಿತಿ ಕಾಡಲಿದೆ’

ನವದೆಹಲಿ (ಪಿಟಿಐ): ‘ಈ ಬಾರಿಯ ಚೆಸ್ ಒಲಿಂಪಿಯಾಡ್‌ನಲ್ಲಿ ವಿಶ್ವನಾಥನ್ ಆನಂದ್ ಅವರ ಅನುಪಸ್ಥಿತಿ ಭಾರತ ತಂಡವನ್ನು ಕಾಡಲಿದೆ. ಆದರೆ ನಮ್ಮ ಯುವ ಆಟಗಾರರು ಶ್ರೇಷ್ಠ ಪ್ರದರ್ಶನ ನೀಡಲು ಸಜ್ಜಾಗಿದ್ದಾರೆ’ ಎಂದು ಭಾರತದ ಅಗ್ರಮಾನ್ಯ ಚೆಸ್ ಆಟಗಾರರಲ್ಲಿ ಒಬ್ಬರಾದ ಪಿ.ಹರಿಕೃಷ್ಣ ಹೇಳಿದ್ದಾರೆ.

44ನೇ ಚೆಸ್ ಒಲಿಂಪಿಯಾಡ್ ಚೆನ್ನೈನಲ್ಲಿ ಜುಲೈ 28 ರಿಂದ ಆಗಸ್ಟ್ 10ರ ವರೆಗೆ ನಡೆಯಲಿದೆ. ಐದು ಬಾರಿಯ ವಿಶ್ವಚಾಂಪಿಯನ್ ಆನಂದ್, ಈ ಟೂರ್ನಿಯಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದ್ದಾರೆ. ಅವರು ಭಾರತದ ತಂಡಗಳಿಗೆ ಮಾರ್ಗದರ್ಶಕರಾಗಿದ್ದಾರೆ.

‘ಈ ಬಾರಿ ಭಾರತವು ಅತ್ಯುತ್ತಮ ತಂಡವನ್ನು ಕಣಕ್ಕಿಳಿಸಿದೆ. ಆದರೆ ಆನಂದ್ ಇಲ್ಲದಿರುವುದು, ಭಾರಿ ವ್ಯತ್ಯಾಸಕ್ಕೆ ಕಾರಣವಾಗಬಹುದು. ಯುವ ಹಾಗೂ ಅನುಭವಿ ಆಟಗಾರರನ್ನು ಒಳಗೊಂಡಿರುವ ನಮ್ಮ ತಂಡಗಳು ಸವಾಲಿಗೆ ಸಿದ್ದವಾಗಿವೆ’ ಎಂದು ತಿಳಿಸಿದರು.

36 ವರ್ಷದ ಹರಿಕೃಷ್ಣ ಅವರು ಭಾರತ ‘ಎ’ ತಂಡದಲ್ಲಿ ಆಡಲಿದ್ದಾರೆ. ಕಳೆದ ತಿಂಗಳು ನಡೆದ ಪ್ರೇಗ್ ಚೆಸ್ ಮಾಸ್ಟರ್ಸ್‌ನಲ್ಲಿ ಪ್ರಶಸ್ತಿ ಗೆದ್ದಿರುವುದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

‘ಪ್ರೇಗ್ ಮಾಸ್ಟರ್ಸ್ ಟೂರ್ನಿಯ ಗೆಲುವು ಸೂಕ್ತ ಸಮಯದಲ್ಲೇ ಬಂದಿದೆ. ಅಲ್ಲಿ ನೀಡಿದ್ದ ಉತ್ತಮ ಪ್ರದರ್ಶನವನ್ನು ಮುಂದುವರಿಸಿ, ಭಾರತ ತಂಡದ ಯಶಸ್ಸಿಗೆ ಕೊಡುಗೆ ನೀಡುವುದು ನನ್ನ ಗುರಿ’ ಎಂದಿದ್ದಾರೆ.

ನಾಳೆ ಚಾಲನೆ: ಭಾರತದಲ್ಲಿ ಇದೇ ಮೊದಲ ಬಾರಿಗೆ ಆಯೋಜನೆಯಾಗಿರುವ ಚೆಸ್ ಒಲಿಂಪಿಯಾಡ್‌ಗೆ ಚೆನ್ನೈನಲ್ಲಿ ಗುರುವಾರ ಚಾಲನೆ ಲಭಿಸಲಿದೆ. ಪ್ರಧಾನಿ ಮೋದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಈ ಸಲ ಅತಿಹೆಚ್ಚು ತಂಡಗಳು ಪಾಲ್ಗೊಳ್ಳುತ್ತಿದ್ದು, ಮುಕ್ತ ವಿಭಾಗದಲ್ಲಿ 188 ಮತ್ತು ಮಹಿಳೆಯರ ವಿಭಾಗದಲ್ಲಿ 162 ತಂಡಗಳು ಕಣದಲ್ಲಿವೆ.

ಭಾರತಕ್ಕೆ ಪದಕ ಗೆಲ್ಲುವ ಅವಕಾಶ

ಚೆನ್ನೈ (ಪಿಟಿಐ): ಆತಿಥೇಯ ಭಾರತ ತಂಡಕ್ಕೆ ಚೆಸ್ ಒಲಿಂಪಿಯಾಡ್‌ನಲ್ಲಿ ಪದಕಗಳನ್ನು ಜಯಿಸುವ ಉತ್ತಮ ಅವಕಾಶವಿದೆ ಎಂದು ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಹೇಳಿದರು.

‘ಭಾರತ ಎ ಮತ್ತು ಬಿ ತಂಡಗಳು ಬಲಿಷ್ಠವಾಗಿವೆ. ಪ್ರಭಾವಿ ಆಟಗಾರರನ್ನು ಒಳಗೊಂಡಿವೆ’ ಎಂದು ಕಾರ್ಲ್‌ಸನ್ ನುಡಿದರು.

ಐದು ಬಾರಿಯ ವಿಶ್ವ ಚಾಂಪಿಯನ್ ಕಾರ್ಲ್‌ಸನ್ ಸದ್ಯ ಚೆನ್ನೈನಲ್ಲಿದ್ದು, ನಾರ್ವೆ ತಂಡದ ಭಾಗವಾಗಿದ್ದಾರೆ. 2013ರಲ್ಲಿ ಭಾರತದ ವಿಶ್ವನಾಥನ್ ಆನಂದ್ ಅವರನ್ನು ಸೋಲಿಸಿ ಅವರು ಮೊದಲ ಬಾರಿಗೆ ವಿಶ್ವ ಚಾಂಪಿಯನ್ ಪಟ್ಟ ಧರಿಸಿದ್ದರು.



ಕಾರ್ಲ್‌ಸನ್

ಕ್ರಿಕೆಟ್: ಮುನ್ನಡೆ ಹಿಗ್ಗಿಸಿದ ಶ್ರೀಲಂಕಾ

ಗಾಲ್ (ರಾಯಿಟರ್ಸ್): ಪಾಕ್ ತಂಡದ ಬಿಗುವಾದ ಬೌಲಿಂಗ್ ದಾಳಿಯ ಮುಂದೆ ಎಚ್ಚರಿಕೆಯ ಆಟವಾಡಿದ ಶ್ರೀಲಂಕಾ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ತನ್ನ ಹಿಡಿತ ಬಿಗಿಗೊಳಿಸಿದೆ.

ಪಂದ್ಯದ ಮೂರನೇ ದಿನ ಮಂಗಳವಾರದ ಆಟದ ಅಂತ್ಯಕ್ಕೆ ಶ್ರೀಲಂಕಾ, ಎರಡನೇ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗೆ 176 ರನ್ ಕಲೆಹಾಕಿದೆ.

ಮೊದಲ ಇನಿಂಗ್ಸ್‌ನಲ್ಲಿ 147 ರನ್ ಮುನ್ನಡೆ ಗಳಿಸಿದ್ದ ಆತಿಥೇಯ ತಂಡ ಒಟ್ಟಾರೆ ಮುನ್ನಡೆಯನ್ನು 323 ರನ್‌ಗಳಿಗೆ ಹಿಗ್ಗಿಸಿದೆ. ಇನ್ನೂ ಎರಡು ದಿನಗಳ ಆಟ ಬಾಕಿಯಿದ್ದು, ಈ ಪಂದ್ಯದಲ್ಲಿ ಸ್ಪಷ್ಟ ಫಲಿತಾಂಶ ಹೊರಹೊಮ್ಮುವುದು ನಿಚ್ಚಳ ಎನಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ 378 ರನ್ ಗಳಿಸಿದ್ದ ಲಂಕಾ, ಎರಡನೇ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. 117 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು. ಏಂಜೆಲೊ ಮ್ಯಾಥ್ಯೂಸ್ (35 ರನ್, 81 ಎ.) ಅಲ್ಪ ಪ್ರತಿರೋಧ ಒಡ್ಡಿದರು.

ಆದರೆ ಮುರಿಯದ ಆರನೇ ವಿಕೆಟ್‌ಗೆ 59 ರನ್ ಸೇರಿಸಿದ ನಾಯಕ ದಿಮುತ್ ಕರುಣರತ್ನೆ (ಬ್ಯಾಟಿಂಗ್ 27) ಮತ್ತು ಧನಂಜಯ ಡಿಸಿಲ್ವಾ (ಬ್ಯಾಟಿಂಗ್ 30) ಅವರು ಪಾಕ್ ಬೌಲರ್‌ಗಳಿಗೆ ತಲೆನೋವಾಗಿ ಪರಿಣಮಿಸಿದ್ದಾರೆ.

ಮೆಂಡಿಸ್‌ಗೆ ಐದು ವಿಕೆಟ್: ಇದಕ್ಕೂ ಮುನ್ನ 7 ವಿಕೆಟ್‌ಗೆ 191 ರನ್‌ಗಳಿಂದ ಮೂರನೇ ದಿನದಾಟ ಮುಂದುವರಿಸಿದ ಪಾಕ್, ಮೊದಲ ಇನಿಂಗ್ಸ್‌ನಲ್ಲಿ 231 ರನ್‌ಗಳಿಗೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ಶ್ರೀಲಂಕಾ 378 (103 ಓವರ್). ಪಾಕಿಸ್ತಾನ 231 (88.1 ಓವರ್) ಎರಡನೇ ಇನಿಂಗ್ಸ್ ಶ್ರೀಲಂಕಾ 5ಕ್ಕೆ 176 (50 ಓವರ್) ಏಂಜೆಲೊ ಮ್ಯಾಥ್ಯೂಸ್ 35, ದಿನೇಶ್ ಚಾಂಡಿಮಲ್ 21, ದಿಮುತ್ ಕರುಣರತ್ನೆ ಬ್ಯಾಟಿಂಗ್ 27, ಧನಂಜಯ ಬ್ಯಾಟಿಂಗ್ 30, ನಸೀಮ್ ಶಾ 29ಕ್ಕೆ 2, ನವಾಜ್ 32ಕ್ಕೆ 1)



ಶ್ರೀಲಂಕಾ ತಂಡದ ಏಂಜೆಲೊ ಮ್ಯಾಥ್ಯೂಸ್ –ಎಎಫ್‌ಪಿ ಚಿತ್ರ

ಕೈಜೋಡಿಸಿದ ಐಎಸ್‌ಎಸ್‌ಎಫ್–ಎನ್‌ಆರ್‌ಎಐ

ನವದೆಹಲಿ (ಪಿಟಿಐ): ರಾಷ್ಟ್ರಮಟ್ಟದ ಕೋಚಿಂಗ್ ಕೋರ್ಸ್ ಪುನರಾರಂಭಿಸಲು ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ಮತ್ತು ಅಂತರರಾಷ್ಟ್ರೀಯ ಶೂಟಿಂಗ್ ಫೆಡರೇಷನ್ (ಐಎಸ್‌ಎಸ್‌ಎಫ್) ಮಂಗಳವಾರ ಕೈಜೋಡಿಸಿವೆ.

2019ರಲ್ಲಿ ಐಎಸ್‌ಎಸ್‌ಎಫ್ ‘ಸಿ’ ಲೈಸೆನ್ಸ್‌ಗೆ ಸಮನಾದ ‘ಐಎಸ್‌ಎಸ್‌ಎಫ್ ಕೋಚಸ್ ಪ್ರೋಗ್ರಾಮ್’ಅನ್ನು ಆರಂಭಿಸಲಾಗಿತ್ತು. ಆದರೆ ಕೋವಿಡ್–19 ಕಾರಣ 2020ರಲ್ಲಿ ಇದನ್ನು ಸ್ಥಗಿತಗೊಳಿಸಲಾಗಿತ್ತು.

ಮರು ಆರಂಭಗೊಳ್ಳಲಿರುವ ಕೋಚಿಂಗ್ ಕೋರ್ಸ್ ಕೆಲವು ಪ್ರಮುಖ ಬದಲಾವಣೆಗಳನ್ನು ಒಳಗೊಳ್ಳಲಿದ್ದು, ಐಎಸ್‌ಎಸ್‌ಎಫ್‌ನ ಮಾರ್ಗದರ್ಶಕರು ನಿಯಮಿತವಾಗಿ ಭಾರತಕ್ಕೆ ಬಂದು ತರಬೇತಿ ನೀಡಲಿದ್ದಾರೆ.

ಎಐಟಿಎ 16 ವರ್ಷದೊಳಗಿನವರ ಟೆನಿಸ್ ಟೂರ್ನಿ

ಎಂಟರಘಟ್ಟಕ್ಕೆ ಸಾನ್ವಿ ಲಗ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದ ತಮನ್ನಾ ಸಹಾ ಸವಾಲು ಮೀರಿದ ಕರ್ನಾಟಕದ ಸಾನ್ವಿ ಮಿಶ್ರಾ ಎಐಟಿಎ ಸೂಪರ್ ಸಿರೀಸ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದರು.

ಇಲ್ಲಿಯ ಕೆಎಸ್‌ಎಲ್‌ಟಿಎ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕಿಯರ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಮಂಗಳವಾರ ಸಾನ್ವಿ 6-3, 7-6 (6) ರಿಂದ ತಮನ್ನಾ ಅವರನ್ನು ಮಣಿಸಿದರು. ಮತ್ತೊಂದು ಪಂದ್ಯದಲ್ಲಿ ವಿ. ಚಿಂಗಟಗೆರೆ ನವೀನ 7-5, 6-7 (7), 6-3ರಿಂದ ಮೂರನೇ ಶ್ರೇಯಾಂಕದ ಅರ್ಜಾನ್ ಕೊರಾಕಿವಾಲ ಅವರಿಗೆ ಸೋಲುಣಿಸಿದರು.

ಬಾಲಕಿಯರ ವಿಭಾಗದ ಇನ್ನುಳಿದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಹರ್ಷಿಣಿ 6-0, 6-2ರಿಂದ ಮೇಘನಾ ಜಿ.ಡಿ. ಎದುರು, ಅನ್ವಿ ಪುನಗಂಟಿ 6-1, 6-3ರಿಂದ ಶ್ರೇಯಾಂಶಿ ಫೆವಾರೆ ವಿರುದ್ಧ, ಸವಿತಾ ಭುವನೇಶ್ವರನ್ 6-0, 6-0ರಿಂದ ಗಮ್ಯಾ ಗುಪ್ತಾ ವಿರುದ್ಧ, ಇಂದುಶಾ ನಿಮಕಾಯಲ 7-6 (3), 4-1 ಕಸ್ತೂರಿ ವಿ.ಜಿ (ನಿವೃತ್ತಿ) ಎದುರು, ಲುಕ್ಷಿತಾ ಗೋಪಿನಾಥ್ 6-4, 6-0ರಿಂದ ಅವ್ವಾಯಿ ವಿವೇಕಾನಂದನ್ ಎದುರು ಜಯ ಗಳಿಸಿದರು. ದಿಶಾ ಖಂಡೋಜಿ 1–0ಯಿಂದ ಮುನ್ನಡೆಯಲ್ಲಿದ್ದಾಗ ಅವರ ಎದುರು ಸ್ಪರ್ಧಿಸಿದ್ದ ಅಹಿದಾ ಸಿಂಗ್ ನಿವೃತ್ತಿ ಪಡೆದರು.

ಬಾಲಕರ ವಿಭಾಗದ 16ರ ಘಟ್ಟದ ಪಂದ್ಯದಲ್ಲಿ ಆರಾಧ್ಯ ಕ್ಷಿತಿಜ್ 6-1, 6-2ರಿಂದ ಕೌಶಿಕ್ ಅರುಣ್‌ಕುಮಾರ್ ಅವರನ್ನು ಮಣಿಸಿದರು. ಇನ್ನುಳಿದ ಹಣಾಹಣಿಗಳಲ್ಲಿ ರೂರಿಕ್ ರಜಿನಿ 6-3, 6-3ರಿಂದ ಪಿ. ಸರವಣಕುಮಾರ್ ಎದುರು, ಅನಂತ್ ಕೃಷ್ಣ 6-1, 6-1ರಿಂದ ಆದಿತ್ಯ ಅಯ್ಯಂಗಾರ್ ಎದುರು, ಕ್ರಿಸ್ಟೊ ಬಾಬು 3-6, 6-1, 6-1ರಿಂದ ಸುಹಾಸ್ ಸೋಮಾ ಎದುರು, ಯಶ್ ಪಂಚಾಕ್ಷರಿ 6-2, 6-3ರಿಂದ ಅಹಿಲ್ ಆಯಾಜ್ ವಿರುದ್ಧ, ಅನುರಾಗ್ ಶೌರ್ಯ ಕಳ್ಳಂಬೆಳ್ಳ 7-6 (5), 6-2ರಿಂದ ಗಂಧರ್ವ್ ಕೊಥಪಲ್ಲಿ ವಿರುದ್ಧ, ಪ್ರಕಾಶ್ ಸರಣ್ 6-4, 6-0ರಿಂದ ವಿಶಾಲ್ ರಾಮಿಸೆಟ್ಟಿ ಎದುರು, ಶ್ರೀನಿಕೇತನ್ ಕಣ್ಣನ್ 6-1, 6-1ರಿಂದ ದತ್ತಾತ್ರೇಯ ವಿ. ವಿರುದ್ಧ ಜಯಿಸಿದರು.



ಸಾನ್ವಿ ಮಿಶ್ರಾ ಆಟದ ಭಂಗಿ– ಪ್ರಜಾವಾಣಿ ಚಿತ್ರ /ಬಿ.ಎಚ್. ಶಿವಕುಮಾರ್

ಬ್ಯಾಡ್ಮಿಂಟನ್: ರಕ್ಷಾ, ಅಖಿಲ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ಷಾ ಹೆಗಡೆ ಮತ್ತು ಅಖಿಲ್ ಹೆಗಡೆ ಅವರು ಇಲ್ಲಿ ನಡೆದ ರಾಜ್ಯಮಟ್ಟದ ಆರನೇ ಹವ್ಯಕ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ 16 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಸಿಲಿಕಾನ್ ಸಿಟಿ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಸೋಮವಾರ ಕೊನೆಗೊಂಡ ಟೂರ್ನಿಯ ಫೈನಲ್ ಪಂದ್ಯದಲ್ಲಿ ರಕ್ಷಾ ಅವರು ಅನನ್ಯಾ ಜಿ ಭಟ್ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಗುರುರಾಜ್ ಹೆಗಡೆ, ಮಹಿಳಾ ವಿಭಾಗದಲ್ಲಿ ಸೌಮ್ಯಾ ಪ್ರಸಾದ್, ಮಹಿಳಾ ಡಬಲ್ಸ್‌ನಲ್ಲಿ ಸ್ಮಿತಾ ಮತ್ತು ಸುಪ್ರಿಯಾ, ಪುರುಷರ ಡಬಲ್ಸ್‌ನಲ್ಲಿ ಮುರಳಿ ಹೆಗಡೆ ಮತ್ತು ಕಾರ್ತಿಕ್ ಭಟ್ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಇನ್ನುಳಿದ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದವರು: 30 ವರ್ಷಕ್ಕಿಂತ ಮೇಲಿನ ಮಹಿಳೆಯರು: ಸಾಧನಾ ಶಿರನ್‌ಕಲ್ಲು (ಸಿಂಗಲ್ಸ್), ಸಾಧನಾ ಮತ್ತು ಸಂಪೂರ್ಣ ಭಟ್ (ಡಬಲ್ಸ್). ಪುರುಷರು: ಅಶ್ವಿನ್ ಕುಮಾರ್ ಭಟ್ (ಸಿಂಗಲ್ಸ್), ರಾಘವೇಂದ್ರ ಹೆಗಡೆ –ಪ್ರದೀಪ್ ಕುಮಾರ್ (ಡಬಲ್ಸ್), ಗುರುರಾಜ್ ಹೆಗಡೆ ಮತ್ತು ದಿನೇಶ್ ಹೆಗಡೆ. ಮಿಶ್ರ ಡಬಲ್ಸ್: ವಿನೀತ್ ಭಟ್ – ವರ್ಷಾ ಭಟ್. 60 ವರ್ಷ: ರಾಘವೇಂದ್ರ ಮತ್ತು ಹಿರಣ್ಯ (ಡಬಲ್ಸ್)

50 ವರ್ಷ: ರಾಘವೇಂದ್ರ ಮತ್ತು ಅರುಣ್ ಜಿ, ರಮೇಶ್ ಹೆಗಡೆ (ಸಿಂಗಲ್ಸ್). ಶ್ರೇಯಾಂಕರಹಿತರ ವಿಭಾಗ: ಸಾತ್ವಿಕ್ ಭಟ್ (ಸಿಂಗಲ್ಸ್).



ಸಿಂಗಲ್ಸ್‌ನಲ್ಲಿ ವಿಜೇತರಾದ ಗುರುರಾಜ್ ಹೆಗಡೆ, ಮುರಳಿ ಭಟ್ (ರನ್ನರ್ ಅಪ್), ಕೋಚ್ ಜೈರಾಮ್ ಪೈ, ವಿಶ್ವನಾಥ್ ಹೆಗಡೆ, ಕಮಲಾಕರ್ ಹೆಗಡೆ, ಬೆಂಗಳೂರು ಉತ್ತರ ವಿ.ವಿ ಕುಲಪತಿ ಡಾ. ನಿರಂಜನ್ ವಾನಳ್ಳಿ, ಹೃದ್ರೋಗ ತಜ್ಞ ದಿವಾಕರ್ ಭಟ್, ಜಗದೀಶ್ ಹೊಸಬಾಳೆ, ರಿಪೋಸ್ ಮ್ಯಾಟ್ರಸ್ ಸಿಒಒ ರಾಮನಾಥ್ ಭಟ್ ಇದ್ದಾರೆ